ಬಾಕಿ ವಿಚಾರದಲ್ಲಿ ಪ್ರಶ್ನೋತ್ತರ ವೇಳೆ ಅಲ್ಲದಿದ್ದರೆ ಬೇರೆ ರೂಪದಲ್ಲಿ ಅವರು ಪ್ರಶ್ನೆ ಮಾಡಲಿ. ಶ್ರೀ ನರೇಂದ್ರಬಾಬುರವರು ಅವರ ಕ್ಷೇತ್ರದಲ್ಲಿರತಕ್ಕಂಥ ಒಂದು ಕೈಗಾರಿಕೆಗೆ ಕೊಟ್ಟಿರತಕ್ಕಂಥ ಜಾಗದಲ್ಲಿ ಬಹುಮಹಡಿ ಕಟ್ಟಡಗಳು ಬಂದಿರತಕ್ಕಂಥದ್ದು, ಮುಂದೆ Fire accident ಆದರೆ ಅಥವಾ ಮತ್ತೇನಾದರೂ ತೊಂದರೆಯಾದರೆ ಎನ್ನುವ ಕಾಳಜಿ ಇರತಕ್ಕಂಥದ್ದು ಸ್ವಾಭಾವಿಕ. ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತಂದರೆ, ಈ ಬಿಡಿಎ ಮತ್ತು ಕಾರ್ಪೋರೇಷನ್ ಖಾತೆಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇರುವುದರಿಂದಾಗಿ ಅವರಿಗೆ ಈ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಕೇಳಿದರೆ ಯಾವಾಗ ಇದನ್ನು ಪರಭಾರೆ ಮಾಡಿದರು? ಇತ್ಯಾದಿ ಸ್ಪಷ್ಟವಾದ ಅಂಕಿಅಂಶಗಳು ಸಿಗುತ್ತವೆ. ಇದನ್ನು ಪರಭಾರೆ ಮಾಡಿ 2-3ವರ್ಷಗಳಾಗಿವೆ. ಮತ್ತೆ Kirloskarನವರು ಅವರು share ಅನ್ನು ಸಹಿತ ಮಾರಿಬಿಟ್ಟಿದ್ದಾರೆ. ಅದಕ್ಕೂ ಸಹಿತ Government ನವರು Permission ಕೊಟ್ಟಿದ್ದಾರೆ. ಅವೆಲ್ಲ ಮಾಹಿತಿ ಅವರಿಗೆ ಸಿಗುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 21ನೇ ಪಟ್ಟಿಯಲ್ಲಿರುವ 65 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ವಿಷಯ:

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇದೇ ವಿಷಯ ಹಿಂದೆ ಬೇರೆ ಬೇರೆ ನಿಯಮಗಳಡಿಯಲ್ಲಿ ಮಾತ ನಾಡಿದ್ದರಿಂದ ಇದನ್ನು ಬೇಗ ಚರ್ಚೆ ಮಾಡಿ ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಕಣಿವೆ ಯೋಜನೆ ಕುರಿತು ಆಂಧ್ರಪ್ರದೇಶದವರು ಅನಧಿಕೃತವಾದಂಥ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ ಎನ್ನುವ ಮಾಹಿತಿ ನಮಗೆ ಬಂದಿದೆ.

ಆಂಧ್ರದ ಕುತಂತ್ರ ಇದೇ ರೀತಿ ಯಾವಾಗಲು ನಡೆದುಕೊಂಡು ಬಂದಿದೆ. ಒಂದು ಕಡೆ ಮಹಾರಾಷ್ಟ್ರದಿಂದ, ಕೃಷ್ಣ ಮತ್ತು ಆ ಭೀಮಾ ನದಿ. ಭೀಮಾ ನದಿ ಈಗಾಗಲೇ ಬತ್ತಿಹೋಗಿದೆ. ಒಂದು ಕಡೆ ಮಹಾರಾಷ್ಟ್ರ ಬೇರೆ ಬೇರೆ ಯೋಜನೆಗಳ ಮುಖಾಂತರ ಕೃಷ್ಣಾ ನದಿಯ ಹರಿವನ್ನು ಅದು ಕಡಿಮೆ ಮಾಡುತ್ತಿದೆ. ಈ ಕಡೆ ಆಂಧ್ರಪ್ರದೇಶ ಇವತ್ತು Central Water Commission ಅವರ ಕಡೆಯಿಂದ permission ಇಲ್ಲದಂಥ ಮತ್ತು ಕೇಂದ್ರ ಸರ್ಕಾರದ permission ಇಲ್ಲದೆ, ಪರಿಸರ ಇಲಾಖೆಯ permission ಇಲ್ಲದಿದ್ದಂಥ ಹಲವಾರು ಯೋಜನೆಗಳನ್ನು ಮತ್ತು ಬಚಾವತ್ ಅವಾರ್ಡ್‌ನಲ್ಲಿ ಏನು ತೀರ್ಪುಕೊಟ್ಟಿದೆ, ಆ ತೀರ್ಪಿಗೆ ವ್ಯತಿರಿಕ್ತವಾದಂಥ ಯೋಜನೆಗಳನ್ನು ಕೈಗೊಳ್ಳುವ ಮುಖಾಂತರ ಕೃಷ್ಣಾ ಕಣಿವೆ ಯೋಜನೆಯಲ್ಲಿ ಕರ್ನಾಟಕದ ಪಾಲಿಗೆ ಏನು ನೀರು ದೊರಕ ಬೇಕಾಗಿದೆ ಅದಕ್ಕೆ ಧಕ್ಕೆ ತರುವಂಥ ಕೆಲಸವನ್ನು ಆಂಧ್ರಪ್ರದೇಶ ಮಾಡುತ್ತಿದೆ. ಇತ್ತೀಚೆಗೆ ಬಂದಂಥ ಮಾಹಿತಿ ಪ್ರಕಾರ ನಾವು ನೋಡಿದಾಗ, ಆ ಎಲ್ಲ ವಿವರ ಗಳನ್ನು ನಾನು ಕೊಡುತ್ತೇನೆ. ಇದು ರಾಜ್ಯ ಸರ್ಕಾರದ ಗಮನಕ್ಕೆ ಏಕೆ ಬರಲಿಲ್ಲ ವೆನ್ನುವಂಥದ್ದು ನನಗೆ ಅರ್ಥವಾಗುತ್ತಿಲ್ಲ. 'ಎ' ಸ್ಕೀಂ ಪ್ರಕಾರ ನಮ್ಮ ರಾಜ್ಯ ಸರ್ಕಾರ ಈ ಕೃಷ್ಣಾ ಕಣಿವೆಯಿಂದ 734 ಟಿಎಂಸಿ ನೀರನ್ನು ಉಪಯೋಗ ಮಾಡಬೇಕಾಗಿತ್ತು. ಆದರೆ ರಾಜ್ಯ ಸರ್ಕಾರವೇ ಒಪ್ಪಿಕೊಂಡ ಪ್ರಕಾರ ಕೇವಲ 550 ಟಿಎಂಸಿ ನೀರನ್ನು ಮಾತ್ರ ನಾವು utilization ಮಾಡಿಕೊಳ್ಳುತ್ತಿದ್ದೇವೆ. ಆ 'ಎ' ಸ್ಕೀಂ complete ಆಗಿಲ್ಲ ಮೊನ್ನೆ ಮಾನ್ಯ ಖರ್ಗೆಯವರು ಉತ್ತರ ಕೊಟ್ಟಿರುವ ಪ್ರಕಾರ ಕೇವಲ 20.28.760 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿಯಾಗಿದೆ. ಇನ್ನೂ ಕೂಡ 6,10,000 ಹೆಕ್ಟೇರ್ ಪ್ರದೇಶಕ್ಕೆ ಕೃಷ್ಣಾ ಯೋಜನೆಯಿಂದ ನಮಗೆ ನೀರಾವರಿ ಸೌಲಭ್ಯ ಸಿಗಲಿಲ್ಲ. ಅದರಲ್ಲಿ ನಾವು ವಂಚಿತರಾಗಿದ್ದೇವೆ. ಮತ್ತೆ 'ಬಿ' ಸ್ಕೀಂನ ಪ್ರಕಾರ ಇನ್ನೂ ಕೂಡ ಯಾವ ಕಾಮಗಾರಿಗಳು ಸಹ ಪ್ರಾರಂಭವಾಗಿಲ್ಲ. ಆದರೆ ಆಂಧ್ರಪ್ರದೇಶ ಈ ಬಚಾವತ್ ಅವಾರ್ಡ್ ಪ್ರಕಾರ ತನ್ನ ಪಾಲಿನ 811 ಟಿಎಂಸಿ ನೀರನ್ನು ಉಪಯೋಗ ಮಾಡಿದೆ. ಎಲ್ಲಾ ಕಾಮ ಗಾರಿಗಳನ್ನು ಪೂರ್ತಿಗೊಳಿಸಿದೆ. ಮತ್ತೆ ಹೊಸದಾಗಿ 'ಬಿ' ಸ್ಕೀಂ ಅನ್ನು implement ಮಾಡುವ ದೃಷ್ಟಿಯಿಂದ ಈಗಾಗಲೇ ಹೊಸದಾಗಿ tribunal constitute ಆಗಿದೆ. ಆ tribunal ಮುಂದೆ 'ಬಿ' ಸ್ಕೀಂ ಪ್ರಕಾರ ಇರುವಂಥ ಯೋಜನೆಗಳ ಬಗ್ಗೆ water sharing ಬಗ್ಗೆ ಅಲ್ಲಿ tribunal ಮುಂದೆ pending ನಲ್ಲಿದೆ. ಅಲ್ಲಿ ನಮ್ಮ ವಾದವನ್ನು ಮಂಡಿಸಬೇಕಾಗುತ್ತದೆ. ನಮ್ಮ ಹಕ್ಕನ್ನು ನಾವು ಕೇಳಬೇಕಾಗುತ್ತದೆ. ಅದು ಇನ್ನೂ start ಆಗಲಿಲ್ಲ. ಅಲ್ಲಿ hearing start ಆಗಲಿಲ್ಲ ಅದರ proceeding start ಆಗಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಇಲ್ಲಿ ಬಹಳ ಪ್ರಮುಖವಾದ ವಿಷಯ ಪ್ರಸ್ತಾಪವಾಗುತ್ತಿದೆ. ಈ ಸಂದರ್ಭದಲ್ಲಿ ನಿಜವಾಗಿ ಮಾನ್ಯ ಮುಖ್ಯಮಂತ್ರಿಗಳೇ ಇಲ್ಲಿ ಇರಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇನ್ಯಾವುದಾದರು ಕೆಲಸದಲ್ಲಿದ್ದರೆ ಜಲಸಂಪನ್ಮೂಲ ಸಚಿವರಾದರೂ ಇಂಥ ಪ್ರಮುಖವಾದ ವಿಷಯ ಪ್ರಸ್ತಾಪವಾಗುತ್ತಿರುವಂಥ ಸಂದರ್ಭದಲ್ಲಿ ಇಲ್ಲಿದ್ದು ಇದಕ್ಕೆ ಸಮರ್ಪಕವಾಗಿ ನಮ್ಮ ಮಾತುಗಳೇನು? ಭಾವನೆಗಳೇನು? ಎನ್ನುವುದನ್ನು ತಿಳಿದು ಉತ್ತರ ಹೇಳಬೇಕಾದಂಥ ಅವಶ್ಯಕತೆ ಇದೆಯೆಂದು ಭಾವಿಸಿಕೊಂಡಿದ್ದೇವೆ. ಉಳಿದ ಹಿರಿಯ ಸಚಿವರುಗಳು ಇದ್ದಾರೆ. ಮಾಜಿ ನೀರಾವರಿ ಸಚಿವರು, ಕಾನೂನು ಸಚಿವರು ಎಲ್ಲರು ಇದ್ದಾರೆ. ಉಳಿದ ಹಿರಿಯ ಸಚಿವರಿಗೆ ಈ ವಿಷಯದಲ್ಲಿ ನಿಮಗೆ ಅನುಭವ ಕಡಿಮೆ, ಮಾಹಿತಿ ಕಡಿಮೆ, ಅಥವಾ ನಿಮಗೆ ಗೊತ್ತಿಲ್ಲ ಎನ್ನುವಂಥದ್ದಲ್ಲ. ಆದರೆ ಇಷ್ಟು ಪ್ರಮುಖವಾದ ವಿಷಯ ಪ್ರಸ್ತಾಪವಾಗುತ್ತಿರುವಾಗ ಜಲಸಂಪನ್ಮೂಲ ಸಚಿವರೇ ಇದ್ದಾರೆ ಅದಕ್ಕೊಂದು ಮಹತ್ವ ಇರುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರು ಇಬ್ಬರೂ ಅಲ್ಲಿ ಪ್ರಶ್ನೋತ್ತರ ನಡೆದಿರುವುದರಿಂದ ಅವರು ಬರುತ್ತಾರೆ. ಅಲ್ಲಿಯೂ ಇದೇ ವಿಷಯ ಇದೆ. ನಾವೆಲ್ಲ ಅವರ ಸಹದ್ಯೋಗಿಗಳುಇಲ್ಲಿದ್ದೇವೆ. ಚರ್ಚೆ ನಡೆಯಲಿ. ಏನು ಉತ್ತರ ಕೊಡಬೇಕೋ ಕೊಡುತ್ತೇವೆ. ಅದಕ್ಕೆ ತಾವೇನು ಆತಂಕ ಪಡಬೇಡಿ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ : ನೀರು ಹೊರಟು ಹೋದ ಮೇಲೆ ಆತಂಕ ಪಡುವ ಪ್ರಶ್ನೆ ಬರುವುದಿಲ್ಲ ಸರ್. ಈಗಾಗಲೇ ನೀರು ಹೋಗಿಬಿಟ್ಟಿದೆ.

ಶ್ರೀ ಹೆಚ್.ಕೆ.ಪಾಟೀಲ್ : ಅದು ಗಂಭೀರವಾಗಿರತಕ್ಕಂಥ ವಿಚಾರ. ತಾವೇನು ಪ್ರಸ್ತಾಪ ಮಾಡುತ್ತಿದ್ದೀರಿ ಅದಕ್ಕೆ ನಮ್ಮದು ಎರಡಾಭಿಪ್ರಾಯವಿಲ್ಲ. ತಾವು ಚರ್ಚೆ ಪ್ರಾರಂಭ ಮಾಡಿ. ಉತ್ತರ ಹೇಳುವುದಕ್ಕೆ ಯಾರೂ ಇಲ್ಲವೆಂದು ಅವರು ಆತಂಕ ಪಡುತ್ತಿದ್ದಾರಲ್ಲ, ಅದರ ಸಲುವಾಗಿಯೇ ಅಷ್ಟೆ ನಾನು ಹೇಳಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಇದ್ದರೆ ಚೆನ್ನಾಗಿತ್ತು. ಅವರು ಇಲ್ಲ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ನೀವಿದ್ದರೂ ಚೆನ್ನಾಗಿಯೇ ಇದೆ. ಆದರೆ ಅವರಿದ್ದರೆ ಇನ್ನೂ ಹೆಚ್ಚು ಜವಾಬ್ದಾರಿ ಇರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಈ ಕೃಷ್ಣಾ ಕಣಿವೆ ಯೋಜನೆ ಇವತ್ತು ಆಂಧ್ರಪ್ರದೇಶ ಬಚಾವತ್ ಅವಾರ್ಡ್ ಪ್ರಕಾರ ಯಾವುದು clearance ಇಲ್ಲವೋ Central water commission ಯಾವುದಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲವೋ ಅಂಥ 21 ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ಇದು ರಾಜ್ಯ ಸರ್ಕಾರದ ಗಮನಕ್ಕೆ ಏಕೆ ಬರಲಿಲ್ಲವೆಂಬುದು ನನಗೆ ಅರ್ಥವಾಗುತ್ತಿಲ್ಲ ರಾಜ್ಯ ಸರ್ಕಾರ ಈ ಒಂದು ಮಹತ್ವದ ವಿಷಯದಲ್ಲಿ ಅದರಲ್ಲೂ ಕೃಷ್ಣಾ ಕಣಿವೆ ಯೋಜನೆ ವಿಷಯದಲ್ಲಿ ಆ ಉತ್ತರ ಕರ್ನಾಟಕ ಭಾಗದ ರೈತರ ಒಂದು ಭಾವನೆಗೆ ಸ್ಪಂದನೆ ಮಾಡಲಾರದೆ ಕುಂಭಕರ್ಣನ ನಿದ್ದೆ ಮಾಡುತ್ತಿದೆ ಎಂದು ನನಗೆ ಅನಿಸುತ್ತಿದೆ. 6 ತಿಂಗಳ ಹಿಂದೆ ಕಾಮಗಾರಿಗಳು ಪ್ರಾರಂಭವಾಗಿವೆ. ಟೆಂಡರ್ ಹಾಕಿದ್ದಾರೆ. ಆಂಧ್ರಪ್ರದೇಶ ಸರ್ಕಾರ ಟೆಂಡರ್ ಫಿಕ್ಸ್ ಆಗಿ ಬೇರೆ ಬೇರೆ ಕಂಪನಿಗಳಿಗೆ, ಕಾಂಟ್ರಾಕ್ಟರ್ಸ್‌ಗೆ ಕಾಮಗಾರಿಗಳನ್ನು ವಹಿಸಿಕೊಟ್ಟಿದೆ ಹಾಗಾಗಿ, ಇವತ್ತು ನಮ್ಮ ರಾಜ್ಯ ಸರ್ಕಾರದ ಗಮನಕ್ಕೇಕೆ ಬರಲಿಲ್ಲ? ಅಂದರೆ, ನಮ್ಮ ನೆಲ, ಜಲದ ಹಿತಾಸಕ್ತಿಗೆ ರಾಜ್ಯ ಸರ್ಕಾರ ಏಕಿ ಮೌನ ವಹಿಸಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ ಇವತ್ತು ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೆ. ಕರ್ನಾಟಕದಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರವಿದೆ. ಆಂಧ್ರಪ್ರದೇಶದಲ್ಲೂ ಕಾಂಗ್ರೆಸ್ ಸರ್ಕಾರವಿದೆ. ಹೀಗಾದರೆ, ಇದರಲ್ಲೇನಾದರೂ ರಾಜಕೀಯ ಹಿನ್ನೆಲೆ ಇದೆಯೇನೋ ಅನ್ನುವಂಥದ್ದನ್ನು ನಾವು ಇವತ್ತು ಕೇಳಬೇಕಾಗುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ತಾವು ಹಿರಿಯ ಸದಸ್ಯರು. ತಾವು ಈ ವೇದಿಕೆಯನ್ನು ಈ ವಿಷಯವನ್ನು ರಾಜಕೀಯ ಚರ್ಚೆಗಾಗಿ ಬಳಕೆ ಮಾಡಿಕೊಳ್ಳಬೇಕಂತಿರೋ? ರಾಜ್ಯದ ಹಿತಕ್ಕಾಗಿ ಚರ್ಚೆ ಮಾಡಬೇಕೂಂತಿರೋ? ರಾಜ್ಯದ ಹಿತಕ್ಕಾಗಿ ಚರ್ಚೆ ಮಾಡುವುದಿದ್ದರೆ, ನಮ್ಮದು ಸಹಮತವಿದೆ.

ಶ್ರೀ ಅರಗ ಜ್ಞಾನೇಂದ್ರ :- ತಾವು ಕಣ್ಣು ಮುಚ್ಚಿ ಕುಳಿತಿದ್ದು ರಾಜಕಾರಣಕ್ಕಾಗಿಯೋ? ಅಥವಾ ರಾಜ್ಯದ ಹಿತಕ್ಕಾಗಿಯೋ? ಎಂದು ಹೇಳಬೇಕು.

(ಗೊಂದಲ)

ಇದರಲ್ಲಿ ನೀವೇಕೆ ರಾಜಕಾರಣ ಕಾಣುತ್ತಿದ್ದೀರಿ? ನೀವು ಕಣ್ಣು ಮುಚ್ಚಿ

ಕುಳಿತುಕೊಂಡಿದ್ದೀರಿ. 21 ಕಂಪನಿಗಳಿಗೆ ಟೆಂಡರ್ ಆಗುವತನಕ ಏನೂ ಮಾಡಲಿಲ್ಲ ಸೆಂಟ್ರಲ್‌ಗೂ ದೂರನ್ನು ತೆಗೆದುಕೊಂಡು ಹೋಗಲಿಲ್ಲವೆಂದು ಹೇಳಿದರೆ, ಇದರ ಹಿಂದೆ ರಾಜಕೀಯ ಇದೆಯೋ? ಇಲ್ಲವೋ? ಎನ್ನುವುದನ್ನು ನಾವು ಕೇಳಬೇಕಾಗುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ :- ಜ್ಞಾನೇಂದ್ರರವರೆ, ಇದು ಪಕ್ಷ ರಾಜಕೀಯಕ್ಕಿಂತ ಅತ್ಯಂತ ಮಹತ್ವವಾಗಿರುವ ವಿಚಾರ. ರಾಜ್ಯದ ರೈತರ ಜನರ ಬದುಕಿನ ಪ್ರಶ್ನೆ ಇದು ಆದ್ದರಿಂದ...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನೀವು ಆ ದೃಷ್ಟಿಕೋನದಿಂದ ನೋಡುತ್ತಿಲ್ಲ

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ :- ಆದ್ದರಿಂದ ಕೆಲವು ಕಾಲವಾದರೂ ನೀವು ರಾಜಕೀಯಕ್ಕೋಸ್ಕರ..... ಇಲ್ಲದೆ ಚರ್ಚೆ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಇವರೇ ರಾಜಕೀಯಕ್ಕೋಸ್ಕರ ಬಳಕೆ ಮಾಡಿಕೊಳ್ಳುತ್ತಿರುವುದು ಇವರ ಅಧಿಕಾರ ಉಳಿವಿಗೋಸ್ಕರವಾಗಿ ರಾಜ್ಯದ ಹಿತ ಬಲಿ ಕೊಡುವುದಕ್ಕೆ ಮುಂದಾಗಿರುವುದೇ ಈ ಹಿನ್ನೆಲೆಯಲ್ಲಿ ರಾಜಕಾರಣದ ಹಿನ್ನೆಲೆಯಲ್ಲಿ

ಶ್ರೀ ಅರಗ ಜ್ಞಾನೇಂದ್ರ :- ಅಲ್ಲೂ ನಿಮ್ಮ ಪಕ್ಷದ್ದೇ ಸರ್ಕಾರವಿದೆ. ಇಲ್ಲೂ ನಿಮ್ಮದೇ ಆಡಳಿತವಿದೆ ಹಾಗಾಗಿ ಇದರೊಳಗಡೆ ಏನಾದರೂ...

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :- ಈ ಚರ್ಚೆಯನ್ನು ಪ್ರಾರಂಭ ಮಾಡಿರಿ ಎನ್ನುವಂಥ ಸಂದರ್ಭದಲ್ಲಿ ನಾವು ಮಾತನಾಡಿಕೊಂಡಿದ್ದು, ಈ ಕೇಂದ್ರ ಸರ್ಕಾರಕ್ಕಾಗಲಿ, ಅನ್ಯ ರಾಜ್ಯಕ್ಕಾಗಲಿ ನಮ್ಮ ಈ ಒಂದು ಸಮಸ್ಯೆಗಳಿಗೆ ಇರತಕ್ಕಂಥ ನ್ಯಾಯಯುತ ಬೇಡಿಕೆ ಪ್ರತಿಬಿಂಬ ಆಗಲಿ ಎಂಬ ಕಾರಣಕ್ಕಾಗಿಯೇ ನಾವೆಲ್ಲರೂ ಮಾತನಾಡಿಕೊಂಡು ಅವರು ಮಾತನಾಡತಕ್ಕಂಥ ಅಭಿಪ್ರಾಯ ಕೊಟ್ಟಾಗ ಅದನ್ನು ಪಕ್ಷದ ಹಿತದೃಷ್ಟಿಯಿಂದ ನೋಡತಕ್ಕಂಥದ್ದು ಆಗಬಾರದು. ಅಲ್ಲಿ ನಿಮ್ಮ ಪಕ್ಷದ್ದಿದೆ, ಇಲ್ಲಿ ನಿಮ್ಮ ಪಕ್ಷದ್ದಿದೆ ಎಂದು ಹೇಳಿ ಬೇಸರವನ್ನು ತಾವು ಪಟ್ಟುಕೊಂಡಿರಬಹುದು. ಏಕೆಂದರೆ, ಅಲ್ಲಿರಬೇಕಾಗಿತ್ತು ನೀವು, ಇರಲಿಲ್ಲವೆಂದು ಹೇಳಿ ನಿಮ್ಮ ಮನಸ್ಸಿಗೆ ನೋವಾಗಿದೆ. ನಾವು ಒಪ್ಪಿಕೊಳ್ಳುತ್ತೇನೆ. ಆದರೂ ಕೂಡ, ಈ ಪ್ರಜಾಪ್ರಭುತ್ವದಲ್ಲಿ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದಲ್ಲವೇ? ಏನು ಮಾಡುವುದಕ್ಕಾಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್ :- ಸರ್ಕಾರ ನೀವೇ ಮಾಡಿ. ನೀವೇ ನಡೆಸಿ. ಇದೇನಾಗಿದೆ ಎಂದರೆ, ಇವತ್ತು ಆಂಧ್ರಪ್ರದೇಶದವರು ಒಟ್ಟು 4,480 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳ ಬಗ್ಗೆ ಟೆಂಡರ್ ಹಾಕಿ ಅವನ್ನೆಲ್ಲ ಕಂಪನಿಗೆ ವಹಿಸಿಕೊಟ್ಟಿದ್ದಾರೆ. ಈಗಾಗಲೇ ಕಾಂಟ್ರಾಕ್ಟರ್ಸ್ ಕಾಮಗಾರಿ ಸ್ಟಾರ್ಟ್ ಮಾಡಿದ್ದಾರೆ. ಆದರೆ ಇವತ್ತು ನಮ್ಮ ರಾಜ್ಯ ಸರ್ಕಾರದ ಪರಿಸ್ಥಿತಿ ಏನಾಗಿದೆ ಎಂದರೆ, ಸಣ್ಣ ಸಣ್ಣ ಯೋಜನೆಗಳಿಗೆ ಇವತ್ತು ಅವರು ಕೆಲಸ ಮಾಡಲಿಕ್ಕಾಗುತ್ತಿಲ್ಲ, ಕೋಲಾರ ಜಿಲ್ಲೆ, ಬಾಗೇಪಲ್ಲಿಯ ಪಡಗೋಡು ಯೋಜನೆ Less than one TMC. 0.8 TMC ನೀರು ಕುಡಿಯುವ ನೀರಿನ ಸಲುವಾಗಿ ಇರುವ ಯೋಜನೆ. ನಾನು ಮೊನ್ನೆ ಕೋಲಾರ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಕೇಳುತ್ತಿದ್ದರು. ಅಲ್ರೀ, ಈ ಪಡಗೋಡು ಯೋಜನೆ 2 ವರ್ಷಗಳಿಂದ ಹಾಗೇ ಕುಳಿತಿದೆ, ನಮಗೆ ರಾಜ್ಯ ಸರ್ಕಾರ ಹಣ ಕೊಡುತ್ತಿಲ್ಲವೆಂದು ಹೇಳುತ್ತಿದ್ದರು. ಆದರೂ ಸಹ, ಆಂಧ್ರ ಪ್ರದೇಶದವರು 8 ಟಿಎಂಸಿ ನೀರಿನ ಸಲುವಾಗಿ ಅದನ್ನು ಬಂದ್ ಮಾಡಲಿಕ್ಕೆ ಪ್ರಧಾನ ಮಂತ್ರಿ ರಾಷ್ಟ್ರಪತಿ ಕಡೆಗೆ ಹೋಗಿ ಬಂದರು. ನಿಯೋಗ ತೆಗೆದುಕೊಂಡು ಹೋದರು. ಆದರೆ, ಇದುವರೆಗೂ ರಾಜ್ಯ ಸರ್ಕಾರ ಕಂಪ್ಲೀಟ್ ಮಾಡಲಿಕ್ಕಾಗುತ್ತಿಲ್ಲ. ಆದರೆ, ಆಂಧ್ರಪ್ರದೇಶ ಎಲ್ಲ ಯೋಜನೆಗಳನ್ನೂ ಕಂಪ್ಲೀಟ್ ಮಾಡಲಿಕ್ಕೆ ಚಾಲೂ ಮಾಡಿದೆ. ಪಡಗೋಡು ಯೋಜನೆ ಅಲ್ಲದೆ ಇನ್ನೊಂದು ಯೋಜನೆ ಎಂದರೆ, ರಾಚೋಳಿ ಬಂಡಾ ವಿದ್ಯುತ್ ಯೋಜನೆ ಇದೆ. ಅದಕ್ಕೆ ಇವತ್ತು ಅಲ್ಲಿಯೂ ಆಂಧ್ರಪ್ರದೇಶದ ರೈತರು ಹೋರಾಟ ಮಾಡಿದ್ದಾರೆ. ಹೋರಾಟ ಮಾಡಿ ಇವತ್ತು ಆ ಕೆಲಸ ನಿಂತಿದೆ. ಹಾಗಾಗಿ, ನೀವು ಅದಕ್ಕೇನು ಕ್ರಮ ಕೈಗೊಂಡಿರಿ? ನಮ್ಮ ಯೋಜನೆಗಳು ಏನೂ ನಡೆಯುತ್ತಿಲ್ಲ ಇವತ್ತು ಆಂಧ್ರಪ್ರದೇಶದ ಯೋಜನೆಗಳು ನಡೆಯುತ್ತಿವೆ. ಇದಕ್ಕೇನು ಕಾರಣ ಎನ್ನುವಂಥದ್ದನ್ನು ನಾವು ಇವತ್ತು ಹೇಳಬೇಕಾಗುತ್ತದೆ. ನೀರಾವರಿ ಇಲಾಖೆಯ ಅಧಿಕಾರಿಗಳು, ಮಂತ್ರಿಗಳು, ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆ ಅನ್ನುವಂಥದ್ದನ್ನು ಇವತ್ತು ನಾವು ಕೇಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ. ಇಲ್ಲಿ ನಾನು ನಿಮ್ಮ ಗಮನಕ್ಕೆ ತರುವುದೇನೆಂದರೆ, ಅವರು ಒಟ್ಟು 21 ಯೋಜನೆಗಳನ್ನು ಕೈಗೊಂಡಿದ್ದಾರೆ. ಈ ಒಂದು ಕೃಷ್ಣಾ ರಿವರ್ ಬೇಸಿನ್‌ನೊಳಗೆ 12 ಯೋಜನೆಗಳು ಮತ್ತು ಗೋದಾವರಿ ರಿವರ್ ಬೇಸಿನ್ ಏಕೆಂದರೆ, ಗೋದಾವರಿ ಕಣಿವೆ ಯೋಜನೆ ಬಗ್ಗೆ ತಮ್ಮ ಗಮನಕ್ಕೆ ತರುವುದೇಕೆಂದರೆ, ಇವತ್ತು ಗೋದಾವರಿ ನದಿಯಿಂದ ಇವತ್ತು ಕೃಷ್ಣಾ ನದಿಗೆ ಹರಿವನ್ನು ಬಿಟ್ಟರೆ ಅದಕ್ಕೆ ಜೋಡಣೆ ಮಾಡಿದರೆ

ಡೈವರ್ಷನ್ ಮಾಡಿದರೆ ಆವಾಗ ಅದರಲ್ಲೂ ಸಹ ನಮ್ಮ ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಇವತ್ತು ನೀರಿನ ಪಾಲನ್ನು ಕೇಳುವ ಹಕ್ಕಿದೆ. ಆ ಗೋದಾವರಿ ವಾಟರ್ ಡಿಸ್‌ಪ್ಯೂಟ್ ಟ್ರಿಬ್ಯೂನಲ್ ಕೊಟ್ಟಂಥ ತೀರ್ಪಿನ ಪ್ರಕಾರವೂ ಅದರಲ್ಲೂ ಹಕ್ಕಿದೆ. ಗೋದಾವರಿ ಬೇಸಿನ್‌ನಲ್ಲಿ ಅವರು ಫಿಕ್ಸ್ ಮಾಡಿದ್ದು 80 ಟಿಎಂಸಿ. ಆದರೆ ಈಗ ಅವರು ಯುಟಿಲೈಜ್ ಮಾಡುವಂಥದ್ದು 270. ಅದನ್ನು ಕೃಷ್ಣಾ ನದಿಗೆ ಡೈವರ್ಷನ್ ಮಾಡಿ ಅದರ ಮುಖಾಂತರ 270 ಟಿಎಂಸಿಯಷ್ಟು ನೀರನ್ನು ಯುಟಿಲೈಜೇಷನ್ ಮಾಡಲಿಕ್ಕೆ ಅವರು ಪ್ಲಾನ್ ಹಾಕಿಕೊಂಡಿದ್ದಾರೆ. ಅದರಲ್ಲಿ ನಮ್ಮ ಪಾಲನ್ನು ನಾವು ಕೇಳಬೇಕಾಗುತ್ತದೆ. ಏಕೆಂದರೆ 80 ಟಿಎಂಸಿ ನೀರನ್ನು ಉಪಯೋಗ ಮಾಡುವುದಾದರೆ ಅದರಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಕೂಡಿ 35 ಟಿಎಂಸಿ ನೀರನ್ನು ಉಪಯೋಗ ಮಾಡಲಿಕ್ಕೆ ನಮಗೆ ಹಕ್ಕಿದೆ. ಅದೇ ಪ್ರಪೋರ್ಷನ್‌ದಲ್ಲಿ ಅವರು 270 ಟಿಎಂಸಿ ನೀರನ್ನು ಗೋದಾವರಿ ಬೇಸಿನ್‌ನಿಂದ ಉಪಯೋಗ ಮಾಡಿದರೆ. ಅದರ ಈಕ್ವವಲೆಂಟ್ ಪ್ರಪೋರ್ಷನ್ ನಮಗೂ ಹಕ್ಕಿದೆ. ಹೀಗಾಗಿ, ಗೋದಾವರಿ ಬೇಸಿನ್ ಈಗಾಗಲೇ ಕಾಮಗಾರಿ ಪ್ರಾರಂಭವಾಗಿದೆ. ಅದರ ಬಗ್ಗೆ ನಿಮ್ಮ ಕ್ಲೇಮ್ ಏನಿದೆ? ನೀವೇನಾದರೂ ಅದರ ಬಗ್ಗೆ ಹೋರಾಟ ಮಾಡಿದ್ದೀರೋ? ಒತ್ತಡ ತೆಗೆದುಕೊಂಡು ಬಂದಿದ್ದೀರೋ? ಅದರ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್‌ಗೆ ಹೋಗಿ ಒತ್ತಡ ತರುವ ಕೆಲಸವೇನಾದರೂ ಆಗಿದೆಯೋ? ಆ ಬಗ್ಗೆ ಇವತ್ತು ವಿವರಗಳನ್ನು ಕೊಡಬೇಕೆನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಇಲ್ಲಿ ನಾನು ಪ್ರಮುಖವಾಗಿ ಪ್ರಸ್ತಾಪ ಮಾಡುವಂಥದ್ದು, ಇವತ್ತು ನಮಗೆ ಬಂದಂಥ ಮಾಹಿತಿ ಪ್ರಕಾರ, ಕೃಷ್ಣಾ ರಿವರ್ ಬೇಸಿನ್‌ನಲ್ಲಿ ಒಟ್ಟು 12 ಕಾಮಗಾರಿಗಳಿವೆ. ಇವತ್ತು ಎಸ್ಟಿಮೇಟ್ ಅಮೌಂಟ್ ಒಂದು ಗುಂಡಲಕಮ್ಮ ಯೋಜನೆ 184 ಕೋಟಿ ರೂಪಾಯಿ. ಆಮೇಲೆ, ರಾಮತೀರ್ಥ ರಿಸರ್ವಾಯರ್ 43 ಕೋಟಿ ರೂಪಾಯಿ. ತೆಲುಗು ಗಂಗಾ ಗುರು ರಾಘವೇಂದ್ರ 58 ಕೋಟಿ ರೂಪಾಯಿ. ಇಲುರುನಾಗರಿ 2800 ಕೋಟಿ ರೂಪಾಯಿ. ಅಂಡ್ರಿನಿವಾ 3000 ಕೋಟಿ ರೂಪಾಯಿ. ಚಿತ್ರಾವತಿ ರಿಸರ್ವಾಯರ್ 60 ಕೋಟಿ ರೂಪಾಯಿ. ಎಸ್‌ಎಲ್‌ಡಿಸಿ ಪ್ರಾಜೆಕ್ಟ್ 635 ಕೋಟಿ ರೂಪಾಯಿ. ಭೀಮಾ ಎಲ್‌ಐಎಸ್ 1570 ಕೋಟಿ ರೂಪಾಯಿ. ಕಲಾಕುರ್ತಿ 1500 ಕೋಟಿ ರೂಪಾಯಿ. ಯಲ್ಲಗೊಂಡ 1660 ಕೋಟಿ ರೂಪಾಯಿ. ನೆಟ್ಟುಪಾಡು ಆಮೇಲೆ ಟಿಎಬಿಆರ್ ಸ್ಟೇಜ್–2 625 ಕೋಟಿ ರೂಪಾಯಿ. ನಾನು ಲಿಸ್ಟ್ ಕಳುಹಿಸಿಕೊಡುತ್ತೇನೆ. ಇದರಲ್ಲಿ ಹೇಳಿದ್ದಾರೆ. ಎಸ್ಟಿಮೇಟ್ ಕಾಸ್ಟ್ ಎಷ್ಟಿದೆ? ಸಿಡಬ್ಲ್ಯುಸಿ ಕ್ಲಿಯರೆನ್ಸ್ ಇದೆಯೋ?

ಇಲ್ಲವೋ? ಆಮೇಲೆ ಎನ್‌ವಿರಾನ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಅದಕ್ಕೆ ಒಪ್ಪಿಗೆ ಇದೆಯೋ? ಇಲ್ಲವೋ? ಆಮೇಲೆ ಪ್ಲಾನಿಂಗ್ ಕಮಿಷನ್ ಒಪ್ಪಿದೆಯೋ? ಇಲ್ಲವೋ? ಅನ್ನುವಂಥದ್ದು ನಾವಿಲ್ಲಿ ನೋಡಿದಾಗ, ಎಲ್ಲ ಕಡೆಯೂ ಆ ಕಾಲಂನಲ್ಲಿ ಎಲ್ಲಿಯೂ ಒಪ್ಪಿಗೆ ಕೊಟ್ಟಿಲ್ಲ. ನೋ, ನೋ ಎಂದಿದೆ. ಇಲ್ಲಿ ಮೂರು ಯೋಜನೆಗಳಿಗೆ ಯೆಸ್ ಎಂದಿದೆ. ಯಾವುದೆಂದರೆ, ಕೆ.ಸಿ.ಕ್ಯಾನಲ್ ಮತ್ತು ಪುಲಿಚಿಂತಾಲ್ ಯೋಜನೆಗೆ ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಉಳಿದ ಯೋಜನೆ ಗಳಿಗೆ ಇವತ್ತು ಕೇಂದ್ರ ಸರ್ಕಾರ, ಸಿಡಬ್ಲ್ಯುಸಿ ಇರಬಹುದು ಅಥವಾ ಎನ್‌ವಿರಾನ್ ಮೆಂಟ್ ಡಿಪಾರ್ಟ್‌ಮೆಂಟ್ ಇರಬಹುದು ಅವು ಒಪ್ಪಿಗೆ ಕೊಟ್ಟಿಲ್ಲ ಆದರೆ, ಇನ್ನೊಂದು ಕಾಲಂನಲ್ಲಿ Inter-State issue. No water allo cation as per KWDT award. ಬಚಾವತ್ ಅವಾರ್ಡ್ ಪ್ರಕಾರ ಈ ಎಲ್ಲ ಯೋಜನೆಗಳಿಗೆ ಅಲೋಕೇಷನ್ ಇಲ್ಲ. ಆದರೂ ಇವತ್ತು ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ಹಾಗಾದರೆ, ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಆ ಕಾಂಟ್ರಾಕ್ಟರ್ಸ್ ಯಾರಿಗೆ ಟೆಂಡರ್ ಹಾಕಿದ್ದಾರೆ. ಯಾರಿಗೆ ಆ ಟೆಂಡರ್ ಅಕ್ಸೆಪ್ಟ್ ಮಾಡಿ ಯಾವ ಕಂಪನಿಗಳಿಗೆ, ಯಾವ ಕಾಂಟ್ರಾಕ್ಟರ್ಸ್‌ಗೆ ಇವತ್ತು ಅವೆಲ್ಲಾ ಕಾಮಗಾರಿಗಳನ್ನು ಕೊಟ್ಟಿದ್ದಾರೆಯೋ, ಅವೆಲ್ಲ ಲಿಸ್ಟ್ ಅನ್ನು ನಾನು ಕಳುಹಿಸಿಕೊಡುತ್ತೇನೆ. ಇವತ್ತು Progressive construction Ltd., Larsen and Tubro, Chennai, ಆಮೇಲೆ Patel soma, Jayaprakash Gayathri ಹೀಗೆ ಒಟ್ಟು 21 ಕಾಮಗಾರಿಗಳನ್ನು ಇವತ್ತು ಕಾಂಟ್ರಾಕ್ಟರ್ಸ್ ಕೊಟ್ಟ ಲಿಸ್ಟ್ ಅನ್ನು, ನನ್ನ ಕಡೆ ಇದ್ದ ಮಾಹಿತಿಯನ್ನು ನಾನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಹಾಗಾದರೆ, ಇಷ್ಟೊಂದು ಕಾಂಟ್ರಾಕ್ಟರ್ ಗಳು ಓಪನ್ ಆಗಿ, ಬಹಿರಂಗವಾಗಿ ಇವತ್ತು ಟೆಂಡರ್ ಕರೆದು ಕಾಮಗಾರಿಗಳನ್ನು ಹಂಚಿ, ಇವತ್ತು ಕೆಲಸವನ್ನು ಪ್ರಾರಂಭ ಮಾಡುವುದು, 6 ತಿಂಗಳಿಂದ ನಡೆ ಯುತ್ತಿರುವುದನ್ನು ನಾವು ನೋಡಿದಾಗ ರಾಜ್ಯ ಸರ್ಕಾರದ ಅಧಿಕಾರಿಗಳೇನು ಮಾಡುತ್ತಿದ್ದಾರೆ? ಏಕೆ ಕೈ ಕಟ್ಟಿ ಕುಳಿತಿದ್ದಾರೆ. ಮುಖ್ಯಮಂತ್ರಿ, ಸಮ್ಮಿಶ್ರ ಸರ್ಕಾರದ ಈ ಒಂದು ಗೊಂದಲದಲ್ಲಿ ಇವರೆಲ್ಲಾ ಇದನ್ನೆಲ್ಲಾ ಮರೆತು ಕುಳಿತರೆ ಹೇಗೆ ಅನ್ನುವಂಥದ್ದನ್ನು ಇವತ್ತು ನಾವು ವಿಚಾರ ಮಾಡಬೇಕಾಗುತ್ತದೆ. ಇದರಿಂದ ರಾಜ್ಯದ ರೈತರಿಗೆ ಅನ್ಯಾಯವಾಗುವಂಥದ್ದಿದೆ. ಕೃಷ್ಣಾ ಕಣಿವೆ ನೀರಾವರಿ ಯೋಜನೆಗಳಿಂದ ಅದರಲ್ಲೂ ಮುಖ್ಯವಾಗಿ ನಮ್ಮ ಉತ್ತರ ಕರ್ನಾಟಕ ಭಾಗದ ಜನರಿಗೆ, ರೈತರಿಗೆ ಇದರಿಂದ ಅನ್ಯಾಯವಾಗುವಂಥದ್ದನ್ನು ನಾವು ಇವತ್ತು ನೋಡುತ್ತಿದ್ದೇವೆ. ಹೀಗಾಗಿ, ಒಂದು ಕಡೆ ಮಹಾರಾಷ್ಟ್ರ, ಒಂದು ಕಡೆ

ಆಂಧ್ರಪ್ರದೇಶ. ಈ ರೀತಿ ಎಲ್ಲ ಕಡೆಯಿಂದಲೂ ಒತ್ತಡ ತಂತ್ರ ಮತ್ತು ಅದರಿಂದ ನಮ್ಮ ರಾಜ್ಯದ ರೈತರಿಗೆ ಅನ್ಯಾಯವಾಗುವಂಥದ್ದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ, ರಾಜ್ಯ ಸರ್ಕಾರ ಇವತ್ತು ಕಳಸ ಬಂಡೂರಿ ಯೋಜನೆ... ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ನಲ್ಲಿ ಡೀಟೆಲ್ ಆಗಿ ಮಾತನಾಡುತ್ತೇನೆ. ನಾನು ಈಗ ಮಾತನಾಡುವುದಿಲ್ಲ. ಕಳಸಾ ಬಂಡೂರಿ ಯೋಜನೆ ಕೇವಲ 1 ಕೋಟಿ ರೂಪಾಯಿ ಇದ್ದ ಯೋಜನೆ. ಹಣ ಕೊಟ್ಟು, ಏನು ತಡೆಯಾಜ್ಞೆ ಇದೆ. ಅದನ್ನು ವೆಕೇಟ್ ಮಾಡಿಸಿಕೊಂಡು ಅದನ್ನು ಸ್ಟಾರ್ಟ್ ಮಾಡುವಂಥದ್ದು ಅದೂ ಆಗಲಿಲ್ಲ. ಆದರೆ, ಇವತ್ತು ಯಾವುದೂ ಒಪ್ಪಿಗೆ ಇಲ್ಲ. ಕ್ಲಿಯರೆನ್ಸ್ ಇಲ್ಲ ಏನೂ ಇಲ್ಲ. ಅಂಥದ್ದನ್ನು ಇವರು ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ರಾಜ್ಯ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎನ್ನುವಂಥದ್ದನ್ನು ದಯವಿಟ್ಟು ಸದನಕ್ಕೆ ಅವರು ವಿಷಯಗಳನ್ನು ಹೇಳಬೇಕಾಗುತ್ತದೆ. ಸ್ಪಷ್ಟೀಕರಣ ಮಾಡಬೇಕಾಗುತ್ತದೆ.

ಇದರ ಬಗ್ಗೆ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಇದಕ್ಕೆ ಯಾರು ಜವಾಬ್ದಾರರು? ಈ ರೀತಿ ಕಾಮಗಾರಿಗಳಿಗೆ ಟೆಂಡರ್ ನಡೆದರೂ ನಿಮ್ಮ ಲಕ್ಷ್ಯಕ್ಕೆ ಬಾರದೆ ಇರುವುದು ಇದು ಯಾರ ತಪ್ಪು? ನೀರಾವರಿ ಇಲಾಖೆಯ ಅಧಿಕಾರಿಗಳ ತಪ್ಪೋ? ಅಥವಾ ನಿಮ್ಮ ತಪ್ಪೋ ಇದರಲ್ಲಿ ಯಾರ ತಪ್ಪು ಎಂಬುದನ್ನು ನೀವು ಇವತ್ತು ಹೇಳಬೇಕಾಗುತ್ತದೆ. ಮುಂದೆ ನೀವು ಸರ್ವ ಪಕ್ಷ ನಿಯೋಗ ತೆಗೆದುಕೊಂಡು ಕೇಂದ್ರದ ಮೇಲೆ ಒತ್ತಡ ತರುವಂಥ ಕೆಲಸ ಮಾಡುತ್ತೀರಾ ಅದಕ್ಕೆ ಏನಾದರೂ ಸರ್ವ ಪಕ್ಷಗಳ ಸಭೆ ಕರೆಯುತ್ತೀರೋ? ಇದರ ಬಗ್ಗೆ ಸ್ಪಷ್ಟವಾಗಿ ಈ ವಿಷಯಗಳನ್ನು ಸದನಕ್ಕೆ ಸರ್ಕಾರದವರು ಹೇಳಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೇ, ಕೃಷ್ಣಾ ನದಿ ಹೆಚ್ಚುವರಿ ನೀರನ್ನು ಹಂಚಿಕೆ ಮಾಡಬೇಕೆಂದು ಇಂಟರ್ ಸ್ಟೇಟ್ ಟ್ರಿಬ್ಯೂನಲ್ ಆ್ಯಕ್ಟ್ 1956 ಪ್ರಕಾರ ಕೇಂದ್ರ ಸರ್ಕಾರದವರು ಕಳೆದ ವರ್ಷ ಒಂದು ಆಯೋಗವನ್ನು ರಚಿಸಿದರು. ಆಯೋಗದ ಅಧ್ಯಕ್ಷರು ಶ್ರೀ ಬ್ರಿಜ್ಜೇಶ್ ಕುಮಾರ್ ಅವರು, ಅವರ ಜೊತೆ ಇನ್ನಿಬ್ಬರು ಸದಸ್ಯರು ಇದ್ದಾರೆ. ಶ್ರೀವಾತ್ಸವ ಮತ್ತು ಡಿ.ಕೆ.ಸೇಠ್ ಎನ್ನತಕ್ಕಂಥವರು ಇದ್ದಾರೆ. ಕೃಷ್ಣಾ ನದಿಯಲ್ಲಿ ಬಿ.ಸ್ಕೀಂನಲ್ಲಿ ಏನು ಸರಪ್ಲಸ್ ವಾಟರ್ ಹರಿಯುತ್ತದೆ ಅದು ಸುಮಾರು 560 ಟಿಎಂಸಿ ನೀರು ಹರಿಯುತ್ತದೆ. ಈ ರೀಸೆಂಟ್ ಗೇಟಿಂಗ್ ಪ್ರಕಾರ ಕರ್ನಾಟಕಕ್ಕೆ 284 ಟಿಎಂಸಿ ಯಷ್ಟು ನೀರು ಅಲೋಕೇಷನ್ ಆಗಬೇಕಾಗುತ್ತದೆ. ಮಹಾರಾಷ್ಟ್ರಕ್ಕೆ 25 ಪರ್ಸೆಂಟ್ ಮತ್ತು ಆಂಧ್ರಪ್ರದೇಶಕ್ಕೆ 25 ಪರ್ಸೆಂಟ್, ಅದರಲ್ಲಿ ಶೇ. 50ರಷ್ಟು ಕರ್ನಾಟಕಕ್ಕೆ

ಬರಬೇಕು. ಆದರೆ, ಇಲ್ಲಿ ಇನ್ನೂ ಆಯೋಗದ ಕಾರ್ಯವೇ ಪ್ರಾರಂಭವಾಗಿಲ್ಲ ಏಕೆಂದರೆ ಆ ಆಯೋಗಕ್ಕೆ ಸರಿಯಾಗಿ ಅಕಾಮಡೇಷನ್ ಸಿಕ್ಕಿಲ್ಲವೆಂದು ಅದರ ಕಾರ್ಯವ್ಯಾಪ್ತಿ ಇನ್ನೂ ಪ್ರಾರಂಭವಾಗಿಲ್ಲ. ಇಂಥ ಸಂದರ್ಭದಲ್ಲಿ ಆಂಧ್ರಪ್ರದೇಶದವರು 21 ಯೋಜನೆಗಳನ್ನು ಸುಮಾರು 4,480 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಯೋಜನೆಗಳನ್ನು ಪ್ರಾರಂಭಿಸಿದ್ದಾರೆ. ಟೆಂಡರ್ ಕರೆದು ಈಗಾಗಲೇ ಆರು ತಿಂಗಳಾಗಿದೆ, ಅಗ್ರಿಮೆಂಟ್ ಕಂಟ್ರಾಕ್ಟರ್ ಜೊತೆಯಲ್ಲಿ ಮಾಡಿಕೊಂಡಿದ್ದಾರೆ. ಆದರೆ ನಮ್ಮ ಸರ್ಕಾರ ಇದನ್ನು ನೋಡಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತಿದೆ. ನನಗೆ ತಿಳಿದ ಮಾಹಿತಿ ಪ್ರಕಾರ ನಾವು ಟ್ರಿಬ್ಯೂನಲ್‌ಗೆ ಈ ವಾಟರ್ ಡಿಸ್‌ಪ್ಯೂಟ್ ತೆಗೆದುಕೊಂಡು ಹೋಗಬೇಕೆ ಬೇಡವೆ ಎನ್ನುವುದರ ಬಗ್ಗೆ ನಮ್ಮ ಸರ್ಕಾರ ಚಿಂತನೆ ಮಾಡುತ್ತಿದೆ. ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲ. ನಾವು ಕೋರ್ಟಿಗೆ ಹೋಗಿ ಇದರ ಬಗ್ಗೆ ತಕರಾರು ಅರ್ಜಿ ಹಾಕಿಕೊಳ್ಳಬೇಕು ಎನ್ನುವುದರ ಬಗ್ಗೆ ನಿರ್ಣಯ ಮಾಡುವ ಹಂತಕ್ಕೆ ಇನ್ನೂ ಬಂದಿಲ್ಲ. ಇನ್ನೂ ಲೀಗಲ್ ಒಪಿನೀಯನ್ ಕೇಳಬೇಕು, ಅವರನ್ನು ಕೇಳಬೇಕು, ಇವರನ್ನು ಕೇಳಬೇಕು, ಹೀಗೆ ಇವರು ಕಾಲಹರಣ ಮಾಡುತ್ತಿದ್ದಾರೆ. ನಾನು ಇವತ್ತು ಸರ್ಕಾರಕ್ಕೆ ಕೇಳಲಿಕ್ಕೆ ಬಯಸುತ್ತೇನೆ. ಕೃಷ್ಣಾ ನದಿ ಆಲಮಟ್ಟಿ ಜಲಾಶಯದಲ್ಲಿ ನೀರನ್ನು ನಿಲ್ಲಿಸುವುದಕ್ಕಾಗಿ 524 ಮೀಟರ್‌ಗೆ ಏನು ಡ್ಯಾಂ ಕಂಪ್ಲೀಟ್ ಆಗಿದೆ ಅಲ್ಲಿ ಗೇಟ್‌ಗಳನ್ನು ನಾವು ಅಳವಡಿಸಿದ್ದೆವು. ಆಂಧ್ರದವರು ಸುಪ್ರೀಂಕೋರ್ಟಿಗೆ ಹೋಗಿ ಗೇಟ್‌ಗಳನ್ನು ಕಟ್ ಮಾಡಿಸಿ ನೀರು ನಿಲ್ಲಿಸುವುದನ್ನು ಬಂದ್ ಮಾಡಿದರು. 519.6ಕ್ಕಿಂತಲೂ ಹೆಚ್ಚಿನ ನೀರು ನಿಲ್ಲಿಸಬಾರದು ಎಂದು ಅವರು ಈ ರೀತಿ ಮಾಡಿದರು. ಆದರೆ ನಮ್ಮ ಸರ್ಕಾರಕ್ಕೆ ಏನಾಗಿದೆ? ನಮ್ಮ ಸರ್ಕಾರ ಇದೆಯೋ ಇಲ್ಲವೋ ಎಂದು ಅನುಮಾನ ಪಡುವಂತ ಪರಿಸ್ಥಿತಿ ಇದೆ. ಸರ್ಕಾರ ಒಂದು ವೇಳೆ ಇದ್ದರೆ ಆಂಧ್ರದವರು ಯಾವ ರೀತಿಯಲ್ಲಿ ತಕಜಾಜು ತೆಗೆದುಕೊಂಡು ಹೋಗಿ ಸುಪ್ರೀಂಕೋರ್ಟ್‌ನಲ್ಲಿ ಹೋರಾಟ ಮಾಡಿ ಗೆದ್ದು, ನಾವೇನು ಆಲಮಟ್ಟಿಯಲ್ಲಿ ಅಳವಡಿಸಿರುವ ಗೇಟ್‌ಗಳನ್ನು ಕಟ್ ಮಾಡಿ ತೆಗೆಸಿದರೋ ಆ ರೀತಿ ಈ ಸರ್ಕಾರ ಅವರು ಮಾಡಿರುವ ಯೋಜನೆಗಳನ್ನು ಬಂದ್ ಮಾಡಿಸಬೇಕಾಗಿತ್ತು. ಆದರೆ ಸರ್ಕಾರಕ್ಕೆ ಅದರ ಕಡೆ ಲಕ್ಷ್ಯವಿಲ್ಲ. ಅಥವಾ ರಾಜಕೀಯ ಕಾರಣಕ್ಕಾಗಿ ಆಂಧ್ರಪ್ರದೇಶದಲ್ಲಿ ಬಹಳಷ್ಟು ಜನ ಎಂಪಿಗಳು ಗೆದ್ದು ಬಂದಿದ್ದಾರೆ. ಯುಪಿಎ ಸರ್ಕಾರಕ್ಕೆ ಸಹಾಯ ಮಾಡಿದ್ದಾರೆ. ಪ್ರಧಾನ ಮಂತ್ರಿ ಮಾನ್ಯ ಮನಮೋಹನ ಸಿಂಗ್ ಅವರು ಆಗಲಿಕ್ಕೆ ಬಹಳವಾಗಿ ಕಾಂಗ್ರೆಸ್‌ಗೆ ಸಹಾಯ ಮಾಡಿದ್ದಾರೆಂದು ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೋ ಅಥವಾ ಒಳಒಪ್ಪಂದ ಏನಾದರೂ ಆಗಿರಬಹುದೇ ಎಂದು ನನಗೆ ಸಂಶಯ ಕಾಡುತ್ತಿದೆ. ಇವತ್ತು ಬಚಾವತ್ ತೀರ್ಪಿನಲ್ಲಿ ಅಲೋಕೇಷನ್

ಆದಂಥ 734 ಟಿಎಂಸಿ ನೀರನ್ನು 2000-5-31ರೊಳಗೆ ಉಪಯೋಗ ಮಾಡಬೇಕಾಗಿತ್ತು. ಇವತ್ತು 2005 ಆದರೂ ಕೂಡ ಉಪಯೋಗ ಮಾಡಲಿಕ್ಕೆ ಆಗಿಲ್ಲ. ಆದರೂ ಸರ್ಕಾರ ತನ್ನ ಬೆನ್ನನ್ನು ತಾನೇ ತಟ್ಟಿಸಿಕೊಳ್ಳುತ್ತಿದೆ ಏನೆಂದರೆ, ನಾವು ನೀರನ್ನು ಹಿಡಿದಿಟ್ಟಿದ್ದೇವೆಂದು ಹೇಳುತ್ತಾರೆ. ನೀರನ್ನು ಹಿಡಿದಿಟ್ಟು ನೀವು ಯಾರಿಗಾಗಿ ಆ ನೀರನ್ನು ಬಿಡುತ್ತಿದ್ದೀರಿ? ಆಂಧ್ರದವರು ಒತ್ತಡ ಮಾಡಿದಾಗ ಅವರಿಗೆ ನೀರನ್ನು ಬಿಡುತ್ತೀರಿ ಮಹಾರಾಷ್ಟ್ರದವರು ಒತ್ತಡ ಮಾಡಿದಾಗ ಅವರಿಗೆ ನೀರನ್ನು ಬಿಡುತ್ತೀರಿ, ಆದರೆ ಹಿಡಿದಿಟ್ಟಿರುವ ನೀರಿನಿಂದ ನಮಗೆ ಏನು ಉಪಯೋಗ? ಆಲಮಟ್ಟಿ ಜಲಾಶಯದಲ್ಲಿ ಸುಮಾರು ನಮ್ಮ 173 ಹಳ್ಳಿಗಳನ್ನು ಮುಳುಗಿಸಿ, 350 ಸಾವಿರ ಎಕರೆ ಫಲವತ್ತಾದ ಭೂಮಿಯನ್ನು ಆ ನೀರಿನಲ್ಲಿ ಮುಳುಗಿಸಿ, ಅದರಿಂದಾಗಿ ಸುಮಾರು 50 ಸಾವಿರ ಕುಟುಂಬಗಳು ಬೀದಿ ಪಾಲಾಗಿವೆ. ಜನ ನಿರ್ಗತಿಕರಾಗಿದ್ದಾರೆ, ಅಂಥವರಿಗೆ ನೀವು ಅನ್ಯಾಯ ಮಾಡುತ್ತಿದ್ದೀರಿ, ಇಷ್ಟೆಲ್ಲದೆ ನನಗೇನು ಅನುಮಾನ ಎಂದರೆ, ಈ ಸರ್ಕಾರ ಉತ್ತರ ಕರ್ನಾಟಕದ ಯಾವುದೇ ಯೋಜನೆಗಳ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತಿಲ್ಲ. ಆ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಇಚ್ಛಾ ಶಕ್ತಿಯಿಲ್ಲ. ಹಣಕಾಸಿನ ನೆರವು ಕೊಡುತ್ತಿಲ್ಲ, ಅನುದಾನ ಕೊಡುತ್ತಿಲ್ಲ, ಇಂಥ ಸಂದರ್ಭದಲ್ಲಿ ನಾವು ಏನು ಮಾಡಬೇಕು? ಈ ಸರ್ಕಾರಕ್ಕೆ ನಾವು ಏನು ಅನ್ನಬೇಕು? ಈ ರಾಜ್ಯದ ಬಜೆಟ್‌ನಲ್ಲಿ ಈ ವರ್ಷ ಅಂದರೆ 2005-06ನೇ ಸಾಲಿಗೆ ನೀರಾವರಿಗೆ ಕೊಟ್ಟಂಥ ಹಣ 3900 ಕೋಟಿ ಈ ವರ್ಷ ಈ ಬಾಬ್ತಿಗಾಗಿ ಸುಮಾರು 8000 ಕೋಟಿಯಾದರೂ ಅಲೋಕೇಷನ್ ಮಾಡಬೇಕಾಗಿತ್ತು. ಯೋಜನೆಗಳನ್ನು ಪೂರ್ಣ ಮಾಡಬೇಕಾಗಿತ್ತು. ಇವತ್ತು ಆಂಧ್ರದವರು ನೀವು ನೀರನ್ನು ಹಿಡಿದಿಟ್ಟಿದ್ದೀರಿ, ಅದನ್ನು ಉಪಯೋಗಿಸಿಲ್ಲವೆಂದು ತಕರಾರು ತೆಗೆದುಕೊಂಡು ಕೋರ್ಟ್‌ಗೆ ಹೋಗುತ್ತಿದ್ದಾರೆ. ಸರ್ಕಾರ ಏನು ಮಾಡುತ್ತಿದೆ? ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ ಇದೆ. ಇವತ್ತು ಅವರೇನು 21 ಯೋಜನೆಗಳನ್ನು ಮಾಡಿಕೊಂಡಿದ್ದಾರೆ ಆ ಬಗ್ಗೆ ಇವತ್ತೇ ತುರ್ತಾಗಿ ಇಲ್ಲಿಂದ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗ ಹೋಗಿ ಆ ಯೋಜನೆಗಳನ್ನು ಬಂದ್ ಮಾಡಿಸುವ ಕೆಲಸ ಮಾಡಬೇಕು. ಏಕೆಂದರೆ ಆ ಯೋಜನೆಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಆಗಿಲ್ಲ. ಟ್ರಿಬ್ಯೂನಲ್ ಅಲೋಕೇಷನ್ ಆಗಿಲ್ಲ. ಇಂಥ ಸಂದರ್ಭದಲ್ಲಿ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ. ಸರ್ಕಾರ ಇವತ್ತು ಕೋರ್ಟಿಗೆ ಹೋಗಿ ಅದನ್ನು ತಡೆ ಮಾಡಿಸಬೇಕಾಗುತ್ತದೆ, ಇಲ್ಲದೇ ಹೋದರೆ ಈ ಯೋಜನೆಗಳನ್ನು ಮುಗಿಸಿದರೆ ನಮಗೆ ಕರ್ನಾಟಕದಲ್ಲಿ ಬಿಸ್ಕೀಂನನ್ವಯ 284 ಟಿಎಂಸಿಯಷ್ಟು ನೀರು ಸಿಗುತ್ತದೆಂದು ನಾವೇನು ಬಕಪಕ್ಷಿಗಳಾಗಿ ಬಾಯಿ ತೆರೆದುಕೊಂಡು ಕುಳಿತ್ತಿದ್ದೇವೆ, ಅದು ಎಲ್ಲಾ ಸುಳ್ಳು ಆಗುತ್ತದೆ ಮತ್ತು ನೀರು ಸಿಗುವುದಿಲ್ಲ, ಆ

ಕಾರಣಕ್ಕಾಗಿ ಸರ್ಕಾರ ಇದರ ಬಗ್ಗೆ ಸೀರಿಯೆಸ್ಸಾಗಿ ಚಿಂತನೆ ಮಾಡಬೇಕಾಗುತ್ತದೆ. ಇವತ್ತು ಎಲ್ಲಾ ಲೀಡಿಂಗ್ ಪೇಪರ್‌ಗಳಲ್ಲಿ ಮಾಧ್ಯಮಗಳಲ್ಲಿ ಈ ವಿಚಾರ ಬಂದರೂ ಕೂಡ ಸರ್ಕಾರ ಇದರ ಬಗ್ಗೆ ಸೀರಿಯೆಸ್ಸಾಗಿಲ್ಲ. ನಾನು ಈ ಬಗ್ಗೆ ವಿಚಾರ ತಿಳಿದುಕೊಳ್ಳಲು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ದೂರವಾಣಿ ಮಾಡಿದ್ದೆ. ಕೆಲವೊಂದು ಮಾಹಿತಿ ಸಲುವಾಗಿ ಫೋನು ಮಾಡಿ ಕೇಳಿದರೆ ಒಬ್ಬರ ಹತ್ತಿರವೂ ಮಾಹಿತಿ ಇಲ್ಲವೆಂದು ಹೇಳುತ್ತಾರೆ. ಅಂದರೆ ಮಾಹಿತಿ ಕೂಡ ವಿರೋಧ ಪಕ್ಷದವರಿಗಾಗಲೀ ಅಥವಾ ಈ ಮನೆಯ ಸದಸ್ಯರಿಗೆ ಕೊಡಬಾರದೆಂದು ಸರ್ಕಾರ ಗೋಪ್ಯವಾಗಿ ಆದೇಶಿಸಿದೆಯೇ? ಇದನ್ನು ತಾವು ಹೇಳಬೇಕಾಗುತ್ತದೆ. ನಾನು ಇವತ್ತು ಬೆಳಿಗ್ಗೆ ಯಿಂದ ಸತತವಾಗಿ ಪ್ರಯತ್ನ ಮಾಡಿದರೂ ನಮಗೆ ಮಾಹಿತಿ ಸಿಗುವುದಿಲ್ಲವೆಂದರೆ ಸರ್ಕಾರ ಇದೆ ಎಂದು ತಿಳಿದುಕೊಳ್ಳಬೇಕೆ? ಅದಕ್ಕೆ ನಾವು ಏನು ಒತ್ತಾಯ ಮಾಡುತ್ತೇವೆಂದರೆ, ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಈ ಸದನಕ್ಕೆ ಬಂದು ಒಂದು ಹೇಳಿಕೆಯನ್ನು ಕೊಡಬೇಕಾಗುತ್ತದೆ ಮುಂದೆ ಇದರ ಬಗ್ಗೆ ತಾವೇನು ಕಾರ್ಯ ಯೋಜನೆಯನ್ನು ರೂಪಿಸುತ್ತೀರಿ ಎಂಬುದನ್ನು ಕೂಡ ಹೇಳಬೇಕಾಗುತ್ತದೆ. ಈ 21 ಯೋಜನೆಗಳ ಬಗ್ಗೆ, ಈ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಬೇಕು, ನೀರಾವರಿ ಸಚಿವರು ಬರಬೇಕು, ಈ ಯೋಜನೆಗಳನ್ನು ನಿಲ್ಲಿಸುವುದಕ್ಕೆ ಮತ್ತು ನಮ್ಮ ರಾಜ್ಯದ ಪಾಲಿನ ಹಕ್ಕನ್ನು ಉಳಿಸಿಕೊಳ್ಳಲಿಕ್ಕೆ ಸರ್ಕಾರ ಏನು ಮಾಡುತ್ತದೆ ಎನ್ನುವುದರ ಬಗ್ಗೆ ಈ ಕೂಡಲೇ ಈ ಸದನಕ್ಕೆ ಬಂದು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ ನಾವು ಅನಿವಾರ್ಯವಾಗಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಆ ಮಟ್ಟಕ್ಕೆ ತಲುಪುವುದಕ್ಕಿಂತ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಬೇಕೆನ್ನುವ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾವು ಅತ್ಯಂತ ಪ್ರಮುಖವಾದ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪಿಸಿದೆವು. ತಾವು ಅದನ್ನು ಕನ್‌ವರ್ಟ್ ಮಾಡಿ ರೂಲ್ 69 ಪ್ರಕಾರ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ನನಗೆ ಆಶ್ಚರ್ಯ ಎಂದರೆ, ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಜವಾಬ್ದಾರಿ ಇರುವಂಥ ಮಾಜಿ ಕ್ಯಾಬಿನೆಟ್ ಸಚಿವರು ಕರ್ನಾಟಕವನ್ನು ;ಪ್ರತಿನಿಧಿಸತಕ್ಕಂಥ ಒಬ್ಬ ಸಂಸತ್ ಸದಸ್ಯರೋ, ಇಷ್ಟೊಂದು ವಿವರವಾದ ಹೇಳಿಕೆಯನ್ನು ಕೊಟ್ಟ ಮೇಲೆ, ಪತ್ರಿಕೆಗಳಲ್ಲಿ ಬಂದ ಮೇಲೆ,

ನಾವು ಪ್ರಸ್ತಾಪಿಸುವುದಕ್ಕಿಂತ ಮುಂಚೇನೆ, ಸರ್ಕಾರ ಇದರ ಬಗ್ಗೆ ನೇರವಾಗಿ ಒಂದು ಸ್ಪಷ್ಟೀಕರಣ ಕೊಡಬೇಕಾಗಿತ್ತು. ಮಾನ್ಯ ಹೆಚ್. ಕೆ. ಪಾಟೀಲ್ ಅವರು ನೀರಾವರಿ ಸಚಿವರು ಆಗಿದ್ದರು. ನಿಮ್ಮ ಕಾಲದಲ್ಲಿ ಇದ್ದಂಥ ಆ ಕಳಕಳಿ ಇವತ್ತೇನು ಕಾಣುವುದಿಲ್ಲ. ನೀರಾವರಿ ಆಗಿರುವಂಥ ಪ್ರದೇಶವನ್ನು ನೋಡಿದಾಗ ಹಾಗೂ ಅಂಕಿ ಅಂಶಗಳನ್ನು ನೋಡಿದಾಗ ಅವೆಲ್ಲಕ್ಕೂ ತಿಲಾಂಜಲಿ ಇಟ್ಟದೆ. ನನಗೆ ಆಶ್ಚರ್ಯ ಎಂದರೆ, ಕಳೆದ ಒಂಬತ್ತು ತಿಂಗಳುಗಳಿಂದ ನಿಮ್ಮ ನೀತಿ ನೋಡಿದರೆ, “ಮನೆಗೆ ಮಾರಿ ಪರರಿಗೆ ಉಪಕಾರಿ” ಎನ್ನುವ ಕನ್ನಡದ ಗಾದೆ ನಿಮಗೆ ಅನ್ವಯಿಸುತ್ತದೆ. ಪ್ರತಿ ಕ್ಷಣದಲ್ಲಿ ಆಂಧ್ರಪ್ರದೇಶ ನಮ್ಮ ಎಲ್ಲಾ ಯೋಜನೆಗಳಿಗೆ ಕಾನೂನುಬದ್ಧವಾಗಿ ಮಾಡಬೇಕಾದ ಯೋಜನೆಗಳಿಗೆ ಅಡ್ಡಿ ಮಾಡುತ್ತಿರಬೇಕಾದರೆ, ಈ ರೀತಿಯಾಗಿ ಸುಮಾರು 21 ಯೋಜನೆಗಳನ್ನು ಕಾನೂನು ಬಾಹಿರವಾಗಿ ಬಿ ಸ್ಕೀಂ ಅಲೋಕೆಷನ್ ಆಗುವುದಕ್ಕಿಂತ ಮುಂಚೇನೆ, ಈಗಾಗಲೇ ಎ ಸ್ಕೀಂನ ಉಪಯೋಗ ಮಾಡಿಕೊಂಡು ಬಿ ಸ್ಕೀಂನ ಅಳವಡಿಕೊಂಡು ಮುಂದೆ ಕ್ಲೈಮ್ ಮಾಡುವಂಥ ಪ್ರಯತ್ನ ಮಾಡುತ್ತಿರುವಂಥ ಕಾಲದಲ್ಲಿ ಮತ್ತೊಮ್ಮೆ ಕೇವಲ ಕೆಂದ್ರಕ್ಕೆ ಅವರ ಬೆಂಬಲ ಇದೆ ಎನ್ನುವ ಒಂದೇ ಒಂದು ಕಾರಣಕೋಸ್ಕರ ಕರ್ನಾಟಕ ರಾಜ್ಯದ ಹಿತವನ್ನು ಬಲಿಕೊಡುವಂಥ ಅಕ್ಷಮ್ಯ ಅಪರಾಧವನ್ನು ನೀವು ಮಾಡುತ್ತಿದ್ದೀರಿ. ಇದನ್ನು ರಾಜ್ಯದ ಜನ ಕ್ಷಮಿಸುವುದಕ್ಕೆ ಆಗುವುದಿಲ್ಲ. ಬೇರೆ ಏನೇ ನೀವು ತಪ್ಪು ಮಾಡಿದರೆ ಕ್ಷಮಿಸಬಹುದು. ಆದರೆ ಒಂದೊಂದು ಹನಿ ನೀರಿಗೂ ನಾವು ಬಡಿದಾಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ಹಕ್ಕನ್ನು ಕಿತ್ತುಕೊಳ್ಳುವಂಥ ಪ್ರಯತ್ನ ಅವರು ಮಾಡುತ್ತಿರಬೇಕಾದರೆ ನೀವು ಕಣ್ಣು; ಮುಚ್ಚಿಕೊಂಡು, ಕೈ ಕಟ್ಟಿಕೊಂಡು ಕುಳಿತ್ತಿದ್ದೀರೆಂದರೆ ಇದರ ಅರ್ಥ ಏನೆಂದು ನಾನು ನಿಮ್ಮನ್ನು ಕೆಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ‘ಎ’ ಸ್ಕೀಂನಲ್ಲಿ 734 ಟಿ.ಎಂ.ಸಿ. ನೀರನ್ನು ನೀವು ಉಪಯೋಗ ಮಾಡಿಕೊಳ್ಳಬೇಕಾಗಿತ್ತೆಂಬ ವಿವರಗಳನ್ನು ನಾನು ಕೇಳುವುದಿಲ್ಲ. ಬಜೆಟ್ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಉದ್ದೇಶ ಪೂರ್ವಕವಾಗಿಯೆ ನೀರಾವರಿ ಇಲಾಖೆಯ ಬಗ್ಗೆ ಅಂಕಿ–ಅಂಶಗಳನ್ನು ಹೇಳುವುದಕ್ಕೆ ಹೋಗಲಿಲ್ಲ. ಏಕೆಂದರೆ ನಾನು ವಿರೋಧ ಪಕ್ಷದ ನಾಯಕನಾಗಿ ಅದರ ವಿವರದ ಮೇಲೆ ಹೋಗಬಹುದಾಗಿತ್ತು. ಆದರೆ, ಸರ್ಕಾರವೇ ಬೇಕಾದರೆ ಅದರ ಮಾಹಿತಿಯನ್ನು ಕೊಡಲಿ. ಆದ್ದರಿಂದ ಇದನ್ನು ನಾನು ಕೇಳುವುದಕ್ಕೆ ಇಷ್ಟಪಡುವುದಿಲ್ಲ. ನೀವು ಎಲ್ಲಾ ಕೆಲಸ ಕಾರ್ಯಗಳನ್ನು

ಬದಿಗೊತ್ತಿ 'ಎ' ಸ್ಕೀಂನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು 'ಬಿ' ಸ್ಕೀಂ ನೀರನ್ನು ಉಪಯೋಗ ಮಾಡಿಕೊಳ್ಳ ತಕ್ಕಂಥ ಸಿದ್ಧತೆ ಮಾಡಿಕೊಳ್ಳ ಬೇಕಾಗಿರತಕ್ಕಂಥವರು ಇವತ್ತಿನ ದಿವಸ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ. ಪಕ್ಕದ ಆಂಧ್ರಪ್ರದೇಶದವರು ಹೆಚ್ಚು ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರೂ ಕೂಡ ಕಾಣದ ರೀತಿಯಲ್ಲಿ ಕೈ ಕಟ್ಟಿ ಕೊಂಡಿದ್ದೀರೆಂದು ಕಾಣುತ್ತದೆ. ಇದು ನಿಜವಾಗಿಯೂ ಕೂಡ ಶೋಭೆ ತರತಕ್ಕಂಥದಲ್ಲವೆಂದು ನನಗನ್ನಿಸುತ್ತದೆ. ಇವತ್ತಿನ ದಿವಸ 'ಬಿ' ಸ್ಕೀಂನಲ್ಲಿ 2394 ಟಿ.ಎಂ.ಸಿ. ಸರಾಸರಿ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಈ ಅಂಕಿ-ಅಂಶಗಳೆಲ್ಲಾ ತಮಗೆ ಗೊತ್ತಿದೆ. 75 ಪರ್ಸೆಂಟ್ ಅವಲಂಬಿತ ಇಳುವರಿಯಾದಾಗ 2 ಟಿ.ಎಂ.ಸಿ. ನೀರನ್ನು ಮತ್ತು ಯಾವುದಾದರೊಂದು ವರ್ಷದಲ್ಲಿ ಕಡಿಮೆ ಇಳುವರಿಯಾದಾಗ ಆ ಕಡಿಮೆ ನೀರನ್ನು ಎಲ್ಲಾ ರಾಜ್ಯಗಳು ಹಂಚಿಕೊಂಡು ಬೆಳೆ ಬೆಳೆಯಬೇಕೆಂದು 'ಬಿ' ಸ್ಕೀಂನಲ್ಲಿದೆ. ಇವತ್ತಿನ ದಿವಸ ನಾನು ಕೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ಆಂಧ್ರಪ್ರದೇಶ ಈ ರೀತಿಯಾಗಿ ಕಾನೂನು ಬಾಹಿರವಾದಂಥ ಹಕ್ಕುಗಳನ್ನು ಚಲಾಯಿಸತಕ್ಕಂಥ ಪ್ರಯತ್ನ ಮಾಡಬೇಕಾದರೆ ಮತ್ತು ಇಷ್ಟು ದೂರಕ್ಕೆ ಹೋದರೂ ಕೂಡ ನೀವು ಕೈಕಟ್ಟಿಕೊಂಡು ಕುಳಿತುಕೊಂಡಿದ್ದೀರಿ. ಇಂಥ ಒಂದು ಗಂಭೀರವಾದಂಥ ವಿಷಯದ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ನೀರಾವರಿ ಸಚಿವರಾಗಲಿ ಇರಬೇಕಲ್ಲವೇ ಅವರಿಗೆ ಜವಾಬ್ದಾರಿ ಇರತಕ್ಕಂಥದ್ದೆ ಆಗಿದ್ದರೆ ಈ ಮನೆಯಲ್ಲೊಬ್ಬರು ಮತ್ತು ಆ ಮನೆಯಲ್ಲೊಬ್ಬರು ಇರಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆಯೇ ಮಾನ್ಯ ನೀರಾವರಿ ಸಚಿವರು ಆ ಮನೆಯ ಸಭಾ ನಾಯಕರು ಆಗಿದ್ದಾರೆ. ಮತ್ತೆ ವಿಧಾನಪರಿಷತ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿರತಕ್ಕಂಥ ಕಾರಣದಿಂದ ಅವರೂ ಕೂಡ ಅಲ್ಲಿಯೇ ಇದ್ದಾರೆ. ಮತ್ತೆ ಇಲ್ಲಿರತಕ್ಕಂಥ ಸಂಸದೀಯ ಮಂತ್ರಿಗಳು ನಿಕಟ ಪೂರ್ವ ನೀರಾವರಿ ಮಂತ್ರಿಗಳು ಕೂಡ ಆಗಿದ್ದರು. ಈ ಒಂದು ಕಾರಣದಿಂದ ಇದರ ಬಗ್ಗೆ ಒಂದು ಉಪಯುಕ್ತವಾದಂಥ ಚರ್ಚೆಯಾಗಲೆಂದು ಮತ್ತು ನಮ್ಮ ರಾಜ್ಯದ ಹಿತಾಸಕ್ತಿಯ ವಿಚಾರದಲ್ಲಿ ಬೆಳಕು ಚೆಲ್ಲಲೆಂಬ ಕಾರಣಕ್ಕಾಗಿಯೆ ನಾವೆಲ್ಲರೂ ಕೂಡ ತಮ್ಮ ಸಲಹೆಗಳನ್ನು ಕೇಳುತ್ತಿದ್ದೇವೆ. ಇದೇ ವಿಚಾರ ಆ ಮನೆಯಲ್ಲಿ ಬಂದಿದೆ. ಆದ್ದರಿಂದ ಮಾನ್ಯ ನೀರಾವರಿ ಸಚಿವರು ಅಲ್ಲಿದ್ದಾರೆ. ನಮ್ಮ ಕಾನೂನು ಸಚಿವರು ನಿಕಟ ಪೂರ್ವ

ನೀರಾವರಿ ಸಚಿವರೂ ಕೂಡ ಆಗಿದ್ದಾರೆ. ಆದ್ದರಿಂದ, ಕಾನೂನು ಮತ್ತು ನೀರಾವರಿ ವಿಚಾರದಲ್ಲಿ ಸಂಪೂರ್ಣವಾದಂಥ ಮಾಹಿತಿಯನ್ನು ಹೊಂದಿದ್ದಾರೆ.

ಶ್ರೀ. ಬಿ. ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಯಾವ ಸಚಿವರು ಇಲ್ಲಿದ್ದಾರೆ ಮತ್ತು ಇಲ್ಲಿ ಯಾರು ಇರಲಿಲ್ಲ ಎಂದು ನಾನು ಮಾಡಿರತಕ್ಕಂಥ ಆಕ್ಷೇಪಣೆ ಬಹಳ ದೊಡ್ಡದ್ದೇನಲ್ಲ. ಆದರೆ, ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಏನೆಂದರೆ, ಮುಖಪುಟದಲ್ಲಿ ಇಷ್ಟೆಲ್ಲಾ ವಿವರಗಳು ಪತ್ರಿಕೆಯಲ್ಲಿ ಬಂದ ನಂತರ ಅಂದರೆ, ಕೃಷ್ಣಾ ಮತ್ತು ಗೋದಾವರಿ ನ್ಯಾಯಾಧಿಕರಣಗಳ ತೀರ್ಪುಗಳನ್ನು ಉಲ್ಲಂಘನೆ ಮಾಡಿ 75 ಸಾವಿರ ದಶ ಲಕ್ಷ ಘನ ಅಡಿಗಳಷ್ಟು ನೀರನ್ನು ಅಕ್ರಮ ಬಳಕೆಯನ್ನು ಆಂಧ್ರಪ್ರದೇಶದವರು ಮಾಡುವುದಕ್ಕೆ ಹೊರಟಿದ್ದಾರೆಂದು ಕಂಡು ಬಂದ ಮೇಲೆ ಒಂದು ಜವಾಬ್ದಾರಿ ಇರತಕ್ಕಂಥ ಸರ್ಕಾರ ಆಗಿದ್ದರೆ ಈ ಮಾಹಿತಿ ಸರಿಯಲ್ಲವೆಂದು ಹೇಳಬೇಕು ಅಥವಾ ಈ ಮಾಹಿತಿ ಸತ್ಯವಾಗಿದ್ದರೆ ತಾವೇಕೆ ಕಣ್ಣು ಮುಚ್ಚಿಕೊಂಡು ಸುಮ್ಮನೆ ಏಕೆ ಇದ್ದೀರೆಂಬುದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಬೇರೆ ಯಾವುದೇ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ತಾವು ಇದಕ್ಕೆ ಮಾತ್ರ ಉತ್ತರ ಕೊಡಿ. ನಿಮಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ. ಮತ್ತೆ ನೀವು ಎಲ್ಲಿಯೋ ಒಂದು ಕಡೆ ಕರ್ನಾಟಕ ರಾಜ್ಯದ ರೈತರ ಹಿತವನ್ನು ಬದಿಗೊತ್ತಿ ಆಂಧ್ರಪ್ರದೇಶಕ್ಕೆ ಬೆಂಬಲ ಕೊಡುತ್ತಿದ್ದೀರಿ. ನಮ್ಮ ಕರ್ಮ ಬಹುಮತ ಇದ್ದಾಗ ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳತಕ್ಕಂಥ ಕಾಂಗ್ರೆಸ್‌ನ ಆಡಳಿತ ಇತ್ತು. ಆದರೆ, ಈ ಸಮಯದಲ್ಲಿಯೂ ಕೂಡ ನಮ್ಮ ರಾಜ್ಯಕ್ಕೆ ನ್ಯಾಯ ಸಿಗಲಿಲ್ಲ. ಈಗ ಸಮಿಶ್ರ ಸರ್ಕಾರ ಬಂದ ಮೇಲೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರ ನೇತೃತ್ವದಲ್ಲಿ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿ ಒಂದು ಹನಿ ನೀರು ಅನ್ಯಾಯವಾಗುವುದಕ್ಕೆ ನಾವು ಯಾವುದೇ ಸಂದರ್ಭದಲ್ಲಿ ಬಿಡಲಿಲ್ಲ. ಅಲಮಟ್ಟಿ ಅಣೆಕಟ್ಟಿನ ಏರಿಕೆ ಮಾಡತಕ್ಕಂಥ ಇಚ್ಛಾಶಕ್ತಿಯನ್ನು ಆಗಿನ ಕೇಂದ್ರ ಸರ್ಕಾರ ಪ್ರಕಟ ಮಾಡಿತು. ಆದರೆ, ಕೇವಲ ಕುರ್ಚಿಯ ಉಳಿವಿಗಾಗಿ ಇವತ್ತು ಈ ರೀತಿ ಮಾಡುತ್ತಿದ್ದೀರಿ. ಇವತ್ತಿನ ದಿವಸ ಆಂಧ್ರ ಪ್ರದೇಶ ಕಾನೂನು ಬಾಹಿರವಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿರುವುದು ನಿಜವೆ? ಮತ್ತೆ ಇದಕ್ಕೆ ಸಂಬಂಧ ಪಟ್ಟಂತೆ ನೀವು ಅಡ್ಡಿ ಮಾಡಿದ್ದೀರಾ ? ಮತ್ತೆ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದ್ದೀರಾ ? ಇವತ್ತಿನ ದಿವಸ ಹತ್ತಾರು ಬಾರಿ ಮಾನ್ಯ ಪ್ರಧಾನ ಮಂತ್ರಿಗಳನ್ನು

ಮತ್ತು ಕೇಂದ್ರದ ನೀರಾವರಿ ಸಚಿವರನ್ನು ಭೇಟಿ ಮಾಡುವುದಕ್ಕೆ ಹೋಗುವಂಥವರು ಇದರ ಬಗ್ಗೆ ಇದುವರೆಗೆ ಏನು ಪ್ರಯತ್ನ ಮಾಡಿದ್ದೀರೆಂಬುದರ ಮಾಹಿತಿಯನ್ನು ಈ ಸದನದ ಮುಂದೆ ಇಡಿ. ಅನಂತರ, ಇದರ ಬಗ್ಗೆ ಚರ್ಚೆ ಮಾಡೋಣ. ಒಂದು ವೇಳೆ ನಾವು ಹೇಳ ತಕ್ಕಂಥ ಮಾಹಿತಿ ಸರಿಯಲ್ಲವೆಂದು ತಾವು ಹೇಳಿದರೆ ನಾವು ಖಂಡಿತ ಸುಮ್ಮನೆ ಕುಳಿತು ಕೊಳ್ಳುತ್ತೇವೆ. ಈ ರೀತಿಯಾದ ಯೋಜನೆಗಳನ್ನು ಪ್ರಾರಂಭ ಮಾಡಿ ಕಾನೂನು ಬಾಹಿರವಾಗಿ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕಂಥದ್ದು ನಿಜವಾಗಿದ್ದಲ್ಲಿ ಇದನ್ನು ತಡೆಹಿಡಿಯುವುದಕ್ಕೆ ತಾವು ಏನೇನು ಮಾಡಿದ್ದೀರಿ ? ಇದಕ್ಕೆ ಸಂಬಂಧ ಪಟ್ಟಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೀರಾ ? ಅಲ್ಲಿಂದ ಇದಕ್ಕೆ ಸಂಬಂಧ ಪಟ್ಟಂತೆ ಉತ್ತರ ಏನು ಬಂದಿದೆ ? ಮತ್ತೆ ಪ್ರತಿಪಕ್ಷದ ಒಂದು ನಿಯೋಗವನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಇದನ್ನು ತಡೆಯತಕ್ಕಂಥ ಪ್ರಯತ್ನವನ್ನು ನೀವೇಕೆ ಮಾಡಲಿಲ್ಲ ? ಈ ರೀತಿಯಾದ ರಾಜಕೀಯ ಇಚ್ಛಾಶಕ್ತಿಯನ್ನು ತಾವೇಕೆ ಪ್ರಕಟ ಮಾಡಲಿಲ್ಲ. ಇವತ್ತಿನ ದಿವಸ ಇದಕ್ಕೆ ಸಂಬಂಧ ಪಟ್ಟಂಥ ಅಂಕಿ–ಅಂಶಗಳು ಎಲ್ಲರಿಗೂ ಕೂಡ ಗೊತ್ತಿದೆ. ಮತ್ತು 'ಎ' ಸ್ಕೀಂನಲ್ಲಿ ಬರ ಬೇಕಾಗಿರತಕ್ಕಂಥ ನೀರನ್ನು ಇನ್ನು ಉಪಯೋಗ ಮಾಡಿಕೊಂಡಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೆ, ತಮಗೆ ಗೊತ್ತಿರುವ ಹಾಗೆ 1992 ರೊಳಗೆ ಈ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿತ್ತು. ಈಗ ನಾವು 2005 ನೇ ಇಸವಿಗೆ ಬಂದರೂ ಸಹ ಅಂದರೆ, ಸುಮಾರು 12 ರಿಂದ 13 ವರ್ಷ ಕಳೆದು ಹೋದರೂ ಕೂಡ 'ಎ' ಸ್ಕೀಂನಲ್ಲಿ ಬರಬೇಕಾಗಿರತಕ್ಕಂಥ ನೀರನ್ನು ಉಪಯೋಗ ಮಾಡಿಕೊಂಡಿಲ್ಲ. ಮತ್ತೆ 'ಬಿ' ಸ್ಕೀಂನಲ್ಲಿ ಬರತಕ್ಕಂಥ ನೀರನ್ನಾದರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆಯೆ ? ಒಂದು ಸಾರಿ ನೀರನ್ನು ಉಪಯೋಗ ಮಾಡಿಕೊಳ್ಳದೆ ನೀವೇನಾದರು ಟ್ರಿಬ್ಯುನಲ್ ಮುಂದೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಬಂದರೆ, ಅವರು ನೀರನ್ನು ಉಪಯೋಗಿಸಿಲ್ಲದೆ ಇರುವುದರಿಂದ ನೀರು ವ್ಯರ್ಥವಾಗಿ ಹರಿದು ಹೋಗುತ್ತಿತ್ತು. ಆದ್ದರಿಂದ ನಾವು ಜಲಾಶಯ ಕಟ್ಟಿಕೊಂಡು ನೀರನ್ನು ಉಪಯೋಗ ಮಾಡುತ್ತೇವೆಂದು ಅವರು ಹೇಳಿದರೆ ಟ್ರಿಬ್ಯುನಲ್ ಮುಂದೆ ನೀವೇನು ವಾದ ಮಾಡುತ್ತೀರಿ ? ನಮಗೆ ನ್ಯಾಯ ಹೇಗೆ ಸಿಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಈವರೆಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ

ಎಂಬುದು ಮತ್ತು ಅವರು ಆಯೋಜನೆಗಳನ್ನು ಪ್ರಾರಂಭ ಮಾಡಿರತಕ್ಕಂಥದು ನಿಜವೇ? ಮತ್ತೆ ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದೆಯೆ? ಒಂದು ವೇಳೆ ಅವರಿಗೆ ಕೇಂದ್ರ ಸರ್ಕಾರ ಅನುಮತಿ ಕೊಡದೇ ಇದ್ದರೆ 'ಬಿ' ಸ್ಕೀಂ ಅಡಿಯಲ್ಲಿ ಬರತಕ್ಕಂಥ ನೀರನ್ನು ಕಾನೂನು ಬಾಹಿರವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಯಾರು ಅದಿಕಾರ ಕೊಟ್ಟರು ? ಈ ಎಲ್ಲಾ ವಿವರಗಳನ್ನು ಮೊದಲು ಕೊಡಿ. ಕೇಂದ್ರ ಸರ್ಕಾರವನ್ನು ಸಂಪರ್ಕ ಮಾಡಿ ಏನು ಪತ್ರ ಬರೆಯಲಾಗಿದೆ ಎಂಬುದನ್ನು ಮತ್ತು ಇದಕ್ಕೆ ಕೇಂದ್ರ ಸರ್ಕಾರದಿಂದ ಏನು ಉತ್ತರ ಬಂದಿದೆ ಎಂಬ ವಿವರಗಳನ್ನು ತಾವು ಕೊಟ್ಟರೆ ಮುಂದೆ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಉಪಯೋಗವಾಗುತ್ತದೆ. ಆದ್ದರಿಂದ, ದಯಮಾಡಿ ಈ ಎಲ್ಲಾ ವಿವರಗಳನ್ನು ಕೊಡಿ. ಅನಂತರ ಚರ್ಚೆಯನ್ನು ನಾನು ಮುಂದುವರಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಜೆ.ಪಿ. ನಾಯಕರು ತಂದಿರತಕ್ಕಂಥ ನಿಲುವಳಿ ಸೂಚನೆಯನ್ನು ತಾವೇನು ನಿಯಮ 69ಕ್ಕೆ ಕನ್ವರ್ಟ ಮಾಡಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಇವತ್ತಿನ ದಿವಸ ಹಿಂದಕ್ಕೆ ತಿರುಗಿ ನೋಡಬೇಕಾಗಿದೆ. ನಾವೆಲ್ಲರೂ ಈ ರಾಜ್ಯದ ಹಿತಾಸಕ್ತಿ ಬಗ್ಗೆ ಮಾತನಾಡಿದ್ದೇವೆ. ಆದರೆ, ನಾವು ಅಧಿಕಾರದ ಚುಕ್ಕಾಣಿಯನ್ನು ಹಿಡಿದಾಗ ಅದನ್ನು ನಿರ್ವಹಣೆ ಮಾಡುವುದಕ್ಕೆ ಅಷ್ಟೇ ಜಾಗೃತರಾಗಿದ್ದೇವೆಯೇ ಎಂಬ ಒಂದೇ ಒಂದು ಪ್ರಶ್ನೆ ನಮ್ಮ ಮುಂದೆ ಇದೆ. ನಾನು ಇವರ ಇಂಟಿಗ್ರಿಟಿಯನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇವರೆಲ್ಲರೂ ಕೂಡ ಕನ್ನಡಮ್ಮನ ಮಕ್ಕಳೆ. ನಮ್ಮ ಉದಾಸೀನತೆಯಿಂದ ನಾವು ದೌರ್ಬಲ್ಯವಾಗುವಂಥ ಸ್ಥಿತಿಗೆ ಬಂದಿದ್ದೇವೆಯೇ ನೇತ್ರಾವತಿ ನದಿ ನೀರನ್ನು ಡೈವರ್ಟ್ ಮಾಡುವ ಬಗ್ಗೆ ಒಂದು ಸರ್ವೆ ಮಾಡಬೇಕೆಂದು ಈ ಶಾಸನ ಸಭೆಯಲ್ಲಿ ಚರ್ಚೆಯಾಯಿತು. ಆ ಸಂದರ್ಭದಲ್ಲಿ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ. ಏಕೆಂದರೆ, ನಮಗೆ ಅಲ್ಲಿ ಎಕ್ಸ್‌ಸ್ ವಾಟರ್ ಸಿಗುತ್ತದೆಂದು ನಾವೇ ಅವರಿಗೆ ತೋರಿಸಿಕೊಟ್ಟಂತಾಗುತ್ತದೆ. ಮತ್ತೆ ಅವರು ಟ್ರಿಬ್ಯುನಲ್‌ಗೆ ಹೋಗಿ ಅಪ್ರೋಚ್ ಮಾಡುತ್ತಾರೆಂದು ಹೇಳಿದರು. ಸರ್ವೆ ಮಾಡುವುದನ್ನು ;ಕೇಳಬಾರದ ಒಂದು ನಿರ್ಬಂದವನ್ನು ಈ ಶಾಸನಸಭೆಯಲ್ಲಿ ನಾವು ಹಾಕಿಕೊಳ್ಳುತ್ತೇವೆ. ಆದರೆ, ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ

ಯಾರಿಗೂ ಹೇಳಿಲ್ಲ ಮತ್ತು ಕೇಳಿಲ್ಲದೆ 21 ಪ್ರಾಜೆಕ್ಟ್‌ಗಳಿಗೆ ಈಗಾಗಲೇ ಟೆಂಡರ್‌ಗಳನ್ನು ಅಂತಿಮಗೊಳಿಸಿ ವರ್ಕ್‌ನ್ನು ಅವಾರ್ಡ್ ಮಾಡಿದೆ. ಈ ರೀತಿಯಾದ ನಮ್ಮ ಶೇರಿಂಗ್ ಆಫ್ ವಾಟರ್ ಏನಾಗಬೇಕು? ಇರತಕ್ಕಂಥ ಟ್ರಿಬ್ಯುನಲ್‌ನ್ನು ಪ್ರಶ್ನೆ ಮಾಡಿ ಹೊಸ ಟ್ರಿಬ್ಯುನಲ್‌ನ್ನು ಕಾನ್ಸ್ಟಿಟ್ಯೂಟ್ ಮಾಡಬೇಕೆಂದು ಕೇಳಿದ್ದೇವೆ. ಆದರೆ ಇದು ಕಾನ್ಸ್ಟಿಟ್ಯೂಟ್ ಆಗಿ ಕೆಲಸ ಆರಂಭ ಮಾಡುವುದಕ್ಕಿಂಥ ಮೊದಲೇ ನಮಗೆ ಟ್ರಿಬ್ಯುನಲ್ ಆಗಲಿ ಅಥವಾ ಸುಪ್ರೀಂ ಕೋರ್ಟ್ ಲೆಕ್ಕಕ್ಕೆ ಇಲ್ಲವೆಂದು ಅವರು ಮಾಡಿದ್ದೆ ಮಾಡುತ್ತೇವೆಂದು ಅವರು ಹೋಗುವಾಗ ನಮ್ಮ ರಾಜ್ಯ ಸರ್ಕಾರ ಇದರ ಬಗ್ಗೆ ಏನು ಮಾಡುತ್ತಿದೆ ಎಂಬುದನ್ನು ಮಾನ್ಯ ಕಾನೂನು ಸಚಿವರು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತಿನ ದಿವಸ ಅವರೆಲ್ಲಾ ಹೇಳಿದ ಹಾಗೆ ಕೃಷ್ಣ ನೀರು ಕೇವಲ ಉತ್ತರ ಕರ್ನಾಟಕ ಭಾಗಕ್ಕೆ ಮಾತ್ರ ಸೀಮಿತವಾದದ್ದೆಂದು ನಾನು ಭಾವಿಸುವುದಿಲ್ಲ. ಇದು ನನ್ನ ಕ್ಷೇತ್ರದಿಂದ ಪ್ರಾರಂಭವಾಗುತ್ತದೆ. ಕೃಷ್ಣ ಕಣಿವೆಯ ಮೊದಲನೇ ಜಾಗದಲ್ಲಿರ ತಕ್ಕಂಥ ಮನುಷ್ಯ ನಾನು. ಚಿಕ್ಕನಾಯಕನ ಹಳ್ಳಿ....... ತಾಲ್ಲೂಕಿನಿಂದ ಆರಂಭ ವಾಗುವ ಕೃಷ್ಣಾ ಕಣಿವೆ ಇವತ್ತಿನ ದಿವಸ ಇದು ಕೇವಲ ಉತ್ತರ ಕರ್ನಾಟಕಕ್ಕೆ ಸೇರಿದ ನೀರಲ್ಲ. ಪರಮಶಿವಯ್ಯನವರ ವರದಿಯಲ್ಲಿ ಇದರ ಬಗ್ಗೆ ಹೇಳಿದ್ದಾರೆ. 80 ಟಿ.ಎಂ.ಸಿ. ನೀರನ್ನು ಹಳೆಯ ಮೈಸೂರು ಜಿಲ್ಲೆಗಳಿಗೆ ಕನಿಷ್ಟಪಕ್ಷ ಕುಡಿಯುವ ನೀರಿಗೆ ಇದರಿಂದ ವ್ಯವಸ್ಥೆ ಮಾಡಬಹುದಾಗಿತ್ತೆಂದು ಒಂದು ದೊಡ್ಡ ಭೂಪಟ ವನ್ನು ನಿಮ್ಮ ಪಕ್ಷದಲ್ಲಿರತಕ್ಕಂಥವರೆ ಮಾಡಿ ನಿಮಗೆ ಕೊಟ್ಟಿದ್ದರು. ಆದರೆ, ನೀವು ಯಾವುದರ ಮೇಲೂ ಕೂಡ ಕ್ರಮ ಜರುಗಿಸಲಿಲ್ಲ. 'ಎ' ಸ್ಕೀಂನಲ್ಲಿ ನಮ್ಮ ನೀರು ಬಂತು ಮತ್ತು ನಾವು ಈಗಾಗಲೇ ನಾವು ಡ್ಯಾಂ ಕಟ್ಟಿ ಸಂತೃಪ್ತರಾಗಿ ದ್ದೇವೆಂದು ಹಾಗೂ ಈ ಡ್ಯಾಂನ ಎತ್ತರ 519 ಅಥವಾ 524 ಮೀಟರ್ ಇರಬೇಕೆ ಎಂಬುದರ ಬಗ್ಗೆಯೆ ಚರ್ಚೆ ಮಾಡಿಬಿಟ್ಟು ನಿಲ್ಲಿಸಿದ್ದೇವೆಯೇ ಹೊರತು ಮುಂದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಯಾವುದೇ ರೀತಿಯ ತಯಾರೀ ಇಲ್ಲ. ನಾನು ಅವತ್ತಿನ ದಿವಸ ಭಾಷಣ ಮಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದೆ. ಅದೇನೆಂದರೆ, ಇನ್ನು 5 ವರ್ಷಗಳಲ್ಲಿ ಇಷ್ಟು ಹಣ ಖರ್ಚು ಮಾಡಿದರೆ ಸ್ಕೀ 'ಬಿ' ಯಲ್ಲಿ ಇಷ್ಟು ನೀರನ್ನು ಬಳಸಬಹುದಾಗಿದೆ

ಎಂದು ಹೇಳಿದ್ದೆ. ಆವತ್ತಿನ ದಿವಸ ನಾನು ಹೆಚ್ಚಿಗೆ ಹೇಳುವುದಕ್ಕೆ ಬರಲಿಲ್ಲವೆಂದರೆ, ಮತ್ತು ಆವತ್ತು ನಾನು ಕೇವಲ ಕಾವೇರಿ ನಿಗಮದ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಇನ್ನು ಮೂರು ಅಥವಾ ನಾಲ್ಕು ತಿಂಗಳೊಳಗಾಗಿ 'ಬಿ' ಸ್ಕೀಂ ಅವಾರ್ಡ್‌ನ್ನು ಅವರು ನಮಗೆ ಕೊಡಲೇಬೇಕಾಗಿದೆ. ಅಂದರೆ, ಇದು ಫೈನಲ್ ಆಗಲೇ ಬೇಕಾಗಿದೆ. ಆದ್ದರಿಂದ, ಇದಕ್ಕೆ ನಮ್ಮ ತಯಾರು ಏನು ಎಂಬುದು ನಮಗೆ ಗೊತ್ತಿಲ್ಲ. ಮತ್ತೆ ಇವತ್ತಿನ ದಿವಸ ನಾವು ಯಾರನ್ನು ಓಲೈಸುತ್ತಿದ್ದೇವೆ? ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ನಾವು ಅವರನ್ನೆ ಓಲೈಸಿಕೊಂಡು ಬಂದು ಬಿಟ್ಟಿದ್ದೇವೆ. ಮೊದಲು ಮಾನ್ಯ ಚಂದ್ರಬಾಬು ನಾಯ್ಡು ಆಯಿತು ಈಗ ಮಾನ್ಯ ರಾಜಶೇಖರ್‌ರೆಡ್ಡಿಯವರು ಬಂದಿದ್ದಾರೆ ಮತ್ತೆ ನಾಳೆ ದಿವಸ ಇನ್ನೊಬ್ಬರು ಬರುತ್ತಾರೆ. ನಮ್ಮ ದೌರ್ಭಾಗ್ಯವಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಕೇಂದ್ರದಲ್ಲಿ ನೀವ್ಯಾರಾರು ಸರ್ಕಾರವನ್ನು ರಚನೆ ಮಾಡುತ್ತೀರಿ ಅವರು ತಮ್ಮ ತೆವಲುಗೋಸ್ಕರ ನಮ್ಮ ಕರ್ನಾಟಕವನ್ನು ತ್ಯಾಗ ಮಾಡಿಕೊಂಡು ಬಂದಿದ್ದೇವೆ. ಇವತ್ತಿನ ದಿವಸ ನಮ್ಮ ರಾಜ್ಯಸಭೆಯಲ್ಲಿ ಪ್ರತಿನಿದಿಸತಕ್ಕಂಥವರು ಯಾರೆಂದರೆ, ಒಂದು ಕಡೆ ಆಂಧ್ರಪ್ರದೇಶದ ಪ್ರತಿನಿಧಿ ಇನ್ನೊಂದು ಕಡೆ ತಮಿಳುನಾಡು ಪ್ರತಿನಿಧಿ. ನಮ್ಮ ಆಗುಹೋಗುಗಳ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಮತ್ತು ರಾಜ್ಯಸಭೆಯಲ್ಲಿ ಯಾರ್‍ಯಾರು ಚರ್ಚೆ ಮಾಡುತ್ತಾರೆಯೋ ನೀವು, ಬಿಟ್ಟರೆ ಬೇರೆ ಯಾರಿಗೂ ಈ ರಾಜ್ಯದಲ್ಲಿ ನಿರ್ಬಂಧ ಮಾಡಿಲ್ಲ. ಇವತ್ತಿನದಿವಸ ನಮ್ಮನ್ನು ಕೇಳುವವರು ಯಾರಿದ್ದಾರೆ? ಯಾರೋ ತೇವಲಿಗೋಸ್ಕರ ಈ ರಾಜ್ಯವನ್ನು ಅಡವಿಡುತ್ತಿದ್ದೇವೆ. ಇಷ್ಟೆಲ್ಲಾ ಆಗಿರುವಾಗ ನಾವು ಎನು ಮಾಡಬೇಕು? ಈಗಾಗಲೇ 25 ಕಾಮಗಾರಿಗಳಿಗೆ ಅವಾರ್ಡ್ ಆಗಿದೆ. ಅವತ್ತೆ ನೀವು ಎಚ್ಚರವಾಗಿರಬೇಕಾಗಿತ್ತು. ಪಾವಗಡದಲ್ಲಿ ಹಳ್ಳದಲ್ಲಿ ಹರಿಯತಕ್ಕಂಥ ನೀರಿಗೆ ಅವರು ಚರಂಡಿ ಮಾಡಿಕೊಂಡು ಆಂಧ್ರಪ್ರದೇಶಕ್ಕೆ ಆ ನೀರನ್ನು ಡೈವರ್ಟ್ ಮಾಡಿಕೊಂಡು ದಿವಸವೇ ಸರ್ಕಾರ ಈ ಕೆಲಸವನ್ನು ಮಾಡಬೇಕಾಗಿತ್ತು. ಅಲ್ಲಿ ರೈತರು ಹೋಗಿ ಅದನ್ನು ತಡೆಯದಿದ್ದರೆ ಇಷ್ಟು ಹೊತ್ತಿಗೆ ಅವರು ಮಾಡಿಕೊಳ್ಳುತ್ತಿದ್ದರು. ಇದನ್ನು ನಿಮ್ಮ ಸರ್ಕಾರ ಎಲ್ಲಿ ಹೋಗಿ ತಡೆಯಿತು? ಕೋಲಾರದ ಹತ್ತಿರ ರೈತರು ಹೋಗಿ

ತಡೆಯದಿದ್ದರೆ ನಿಮ್ಮ ಗತಿ ಏನಾಗುತ್ತಿತ್ತು? ಕೋಲಾರದ ಹತ್ತಿರ ನಿರ್ಮಾಣ ಮಾಡತಕ್ಕಂಥ ಅಣೆಕಟ್ಟನ್ನು ಮಾಡಬಾರದೆಂದು ಅವತ್ತಿನದಿವಸ ಇಡೀ ಆಂಧ್ರಪ್ರದೇಶ ಡೆಲಿಗೇಶನ್ ಅಲ್ಲಿಗೆ ಬಂದಿತ್ತು. ನಮ್ಮ ರಾಜ್ಯದಲ್ಲಿ ಸಣ್ಣದೊಂದು ಬ್ಯಾರೇಜ್ ಹಾಕುತ್ತೇವೆಂದರೆ ಅವರೆಲ್ಲರೂ ಇಲ್ಲಿಗೆ ಓಡಿಬರುತ್ತಾರೆ. ಅದರೆ ಅವರು 4480 ಕೋಟಿ ರೂಪಾಯಿ ವೆಚ್ಚದಲ್ಲಿ ಒಟ್ಟು 21 ಕಾಮಗಾರಿಗಳಿಗೆ ಟೆಂಡರ್ ಫೈನಲ್ ಮಾಡಿ ಕಾಮಗಾರಿಗಳನ್ನು ಅವಾರ್ಡ್ ಮಾಡಿದ್ದಾರೆಂದರೂ ಕೂಡ ನಾವು ಮಾತನಾಡುತ್ತಿಲ್ಲವೆಂದರೆ ಇದರ ಬಗ್ಗೆ ಸರ್ಕಾರಕ್ಕೆ ವಿವೇಚನೆ ಇಲ್ಲವೆ? ಅಥವಾ ಇದರ ಬಗ್ಗೆ ಮಾಹಿತಿ ಇಲ್ಲವೆ? ಅಥವಾ ನೀವು ಸರ್ಕಾರದ ಪ್ರತಿನಿಧಿಗಳಾಗಿಲ್ಲವೆ? ಬಹುಶಃ ಈ ಸಭೆ ವಿಷಯದಲ್ಲಿ ಸರ್ಕಾರ ನಿದ್ದೆ ಮಾಡುತ್ತಿದೆ ಎಂದು ನಾನು ತಿಳಿದುಕೊಂಡಿದ್ದೆನು. ಅದರೆ, ಈ ರೀತಿಯಾಗಿಲ್ಲ ಇಡೀ ರಾಜ್ಯದ ಎಲ್ಲಾ ಹಿತಾಸಕ್ತಿಗಳು ನಿಮ್ಮ ಮಂಪರುಗಳಲ್ಲಿ ಸಿಕ್ಕಿಕೊಂಡಿವೆ. ಈ ರೀತಿಯಾದರೆ ನಿಮಗೆ ಎಚ್ಚರವಾಗುವುದು ಯಾವಾಗ? ಇಡೀ ರಾಜ್ಯದ ಎಲ್ಲಾ ಹಿತಾಸಕ್ತಿಗಳು ನಿಮ್ಮ ಮಂಪರೊಳಗೆ ಸಿಕ್ಕಿ ಹಾಕಿಕೊಂಡು ಬಿಟ್ಟಿವೆ. ನಿಮಗೆ ಎಚ್ಚರವಾಗುವುದು ಯಾವಾಗ ? ಕುಂಬಕರ್ಣ ಏಳುವುದಿಲ್ಲ, ರಾವಣನು ಗೆಲ್ಲುವುದಿಲ್ಲ. ಆ ಸ್ಥಿತಿಯನ್ನು ನೀವು ನಿರ್ಮಾಣ ಮಾಡಿ, ಸ್ವಲ್ಪ ಮೇಲೆ ಕಣ್ಣು ಬಿಡಿ, ಏನಾಗುತ್ತದೆಂದು ಸ್ವಲ್ಪ ನೋಡಿ,ತಕ್ಷಣಕ್ಕೆ ನೀವು ಜಾಗರೂಕರಾಗಬೇಕಾಗಿದೆ. ನೀವು ಇವತ್ತೊಂದು ಅಫಿಡೆವಿಟನ್ನು ಫೈಲ್ ಮಾಡಬೇಕಾಗಿದೆ. ಟ್ರಿಬ್ಯುನಲ್ ಮುಂದೆ ಹೋಗಬೇಕಾಗಿಲ್ಲ. ಟ್ರಿಬ್ಯುನಲ್ ಕಾರ್ಯಾರಂಭ ಮಾಡಲಿಲ್ಲವೆಂದರೆ, ಕನಿಷ್ಠ ರಾಷ್ಟ್ರಪತಿ ಅಥವಾ ಸುಪ್ರೀಂಕೋರ್ಟ್‌ನ್ನು ಇವತ್ತು ನಾವು ಅಪ್ರೋಚ್ ಮಾಡಬೇಕಾಗಿದೆ. ಇಲ್ಲ transitory ಪಿರಿಯಡನಲ್ಲಿ ಇಂತಹ ಕೆಲಸಗಳನ್ನು ಅವರು ಯಾರು ಮಾಡಬಾರದೆಂದು ಹೇಳಬೇಕು ಅಲ್ಲವೆ? ಆ ಯಾವ ಕೆಲಸವು ಆಗಿಲ್ಲ. ಇದು ರಾಜ್ಯ, ರಾಷ್ಟ್ರವಾಗಲಿ, ಮನೆಯಾಗಲಿ, ಊರಾಗಲಿ, ಒತ್ತಡವಿಲ್ಲದೆ ಯಾವ ಕೆಲಸವಾಗುತ್ತದೆಂದು ನಾವು ಹೇಳುವುದಿಲ್ಲ. ನಾವು ಹೇಳುತ್ತೇವೆ ಅಳಲಾರದೆ ಯಾರು ಹಾಲನ್ನು ಹೂಯುತ್ತಾರೆ, ನೀವು ಅಳುವುದಕ್ಕೆ ಹೋಗಲೇ ಇಲ್ಲ. ಜಗಳಾಡುವ ಸ್ಥಿತಿ ಎಲ್ಲಿ ಬಂತು, ಗುದ್ದಾಡುವ ಸ್ಥಿತಿ ಎಲ್ಲಿ

ಬಂತು. 80 ಟಿಎಂಸಿ ನೀರನ್ನು ಇವರು ಈ ಕಡೆಗೆ ಕೊಡಬೇಕಾಗಿತ್ತು. ತುಂಗಭದ್ರಾ, ಭದ್ರಾ, ಅಪ್ಪರ್ ತುಂಗಾ ಅವು ಎಲ್ಲವುಗಳನ್ನು ಈ ವ್ಯಾಲಿನಲ್ಲಿ ಸೇರಿಸಿಕೊಂಡು ಆ ಯೋಜನೆಗಳಿಗೆ ನೀರು ಕೊಟ್ಟು ಆದ ಮೇಲೆ ನೀವು ನಮಗೆ ನೀರು ಎಲ್ಲಿಂದ ತರುತ್ತೀರಿ.

When once a right is oreated to them.

ನಾಳೆ ಏನು ಮಾಡುತ್ತೀರಿ. ಇವತ್ತು ನೀವು ತಮಿಳುನಾಡಿಗೆ ಹೇಳುವ ಮಾತನ್ನು ನಾಳೆ ನೀವು ಆಂಧ್ರಪ್ರದೇಶಕ್ಕೆ ಹೇಳಬೇಕಾಗುತ್ತದೆ. ಅವರಿಗೆ ಹಕ್ಕನ್ನು ಸ್ಥಾಪನೆ ಮಾಡಿದ ಮೇಲೆ ನೀವು ರಾಜ್ಯದ ಹಿತವನ್ನು ಹೇಗೆ ಕಾಪಾಡುತ್ತೀರಿ. ಸನ್ಮಾನ್ಯ ಅನಂತಕುಮಾರವರು ಬರಬೇಕಾಯಿತು ಅಲ್ಲವೆ ಇವತ್ತು ನಿಮ್ಮನ್ನು ಎಚ್ಚರ ಮಾಡುವುದಕ್ಕೆ ಹೀಗಾಗಿದೆ, ಕರ್ನಾಟಕ ಸರ್ಕಾರ ನೋಡಿಕೊಂಡಿಲ್ಲ. ದಯಮಾಡಿ ತಾವು ಸರ್ಕಾರವನ್ನು ನಡೆಸುತ್ತಿರುವಂಥವರು ಈ ಕಡೆ ಸ್ವಲ್ಪ ಗಮನವನ್ನು ಕೊಡಬೇಕು. ನಮ್ಮ ಶೇರು ಏನಿದೆ, ಫೈನಲ್ ಆಗುವವರೆಗೆ ಅವರು ಹೇಳಿದ್ದು ನಿಜ, ಸ್ಕೀಂನ್ನು ನಾವು ಸರಿಯಾಗಿ ಬಳಸಿಲ್ಲ, ನಮಗೆ ಇವತ್ತು ಅಂತಹ ತರ್ಕಬದ್ಧ ವಾದವಿಲ್ಲ ಟ್ರಿಬ್ಯುನಲ್ ಮುಂದೆ ಹೋದರೆ, ನಾಳೆ ನಮಗೆ ವಾದ ಮಾಡುವುದಕ್ಕಾಗುವುದಿಲ್ಲ. ಆದರೆ ನಮಗೆ ಸೇರಬೇಕಾದ ನೀರನ್ನು ಸ್ಕೀಂ 'ಬಿ' ನಲ್ಲಿ ನಾವು ಬಳಸುತ್ತೇವೆ, ಇಂಥಂಥ ಯೋಜನೆಗಳನ್ನು ನಾವು ಆರಂಭ ಮಾಡುತ್ತಿದ್ದೇವೆ. ಈ ನೀರಿನ ಹಕ್ಕನ್ನು ಸ್ಥಾಪನೆ ಮಾಡಿ ಎಂದು ಹೇಳಿ, ಇತ್ಯರ್ಥ ಮಾಡಿಸುವವರೆಗೆ ದಯಮಾಡಿ ಆಂಧ್ರಪ್ರದೇಶದ ಎಲ್ಲಾ ಯೋಜನೆಗಳನ್ನು ನಿಲ್ಲಿಸುವುದಕ್ಕೆ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ನೀವು ಇಡೀ ಕರ್ನಾಟಕ ರಾಜ್ಯದ ಐದುವರೆ ಕೋಟಿ ಕನ್ನಡಿಗರಿಗೆ ದ್ರೋಹ ಬಗೆದಂತಾಗುತ್ತದೆಂದು ಎಚ್ಚರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ ಎಂದು ನಾನು ಅನ್ನುವುದಕ್ಕೆ ತಯಾರಾಗಿಲ್ಲ. ಆದರೂ 6 ತಿಂಗಳ ಹಿಂದೆ 21 ಕಾಮಗಾರಿಗಳನ್ನು 4480 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿ ಕೊಳ್ಳುವುದಕ್ಕೆ. ಆಂಧ್ರ ಸರ್ಕಾರದವರು ಟೆಂಡರನ್ನು ಕರೆದಿದ್ದಾರೆ.

ಇದು ದೆಹಲಿಯಿಂದ ಬಂದಿತರಕ್ಕಂಥ ಪತ್ರಿಕಾ ವರದಿ. ಈ ಪತ್ರಿಕೆಗಳ ವರದಿ ಆಧಾರದ ಮೇಲೆ ನಾವು ಇಲ್ಲಿ ಚರ್ಚೆಯನ್ನು ಮಾಡುತ್ತಿದ್ದೇವೆ. ಸ್ವಲ್ಪ ಇದರ ಬಗ್ಗೆ ನಾವು ವಿಚಾರ ಮಾಡುವುದಾದರೆ, ಹಿಂದಿನ ಆಂಧ್ರದ ಮುಖ್ಯಮಂತ್ರಿಗಳಾಗಿದ್ದಂಥ ದಿವಂಗತ ಎನ್.ಟಿ. ರಾಮರಾವ್‌ರವರ ಕಾಲದಲ್ಲಿಯೂ ತೆಲಗು-ಗಂಗಾ ಆದಾಗ ನಮಗೆ ಅನ್ಯಾಯವಾಯಿತು. ಕುಡಿಯುವ ನೀರಿಗೆ ಎಂದು ತೆಗೆದುಕೊಂಡಂಥ ತೆಲಗು-ಗಂಗಾ, ಅಲ್ಲಿ ವ್ಯವಸಾಯಕ್ಕೆ ಉಪಯೋಗಿಸತಕ್ಕಂಥ ನಿದರ್ಶನ ನಮ್ಮ ಮುಂದಿದೆ. ಆಂಧ್ರದ ಎನ್.ಟಿ. ರಾಮರಾವ್‌ರವರ ಸರ್ಕಾರದಲ್ಲಿಯೇ ಆಗಿದೆ. ಮಾನ್ಯ ಚಂದ್ರಬಾಬು ನಾಯ್ಡುರವರ ಕಾಲದಲ್ಲಿ ಅನ್ಯಾಯವಾಗಿದೆ. ಮಾನ್ಯ ರಾಜಶೇಖರರೆಡ್ಡಿಯವರ ಕಾಲದಲ್ಲಿ ಅನ್ಯಾಯವಾಗಿದೆ. ಇದಕ್ಕೆ ಕಾರಣವೇನು? ಆಂಧ್ರ ಸರ್ಕಾರ ರಾಜಕೀಯ ನಾಯಕತ್ವ, ಕೇಂದ್ರದಲ್ಲಿ ರಾಜಕೀಯ ನಾಯಕತ್ವ ಭದ್ರವಾಗಿದೆ. ಕರ್ನಾಟಕವನ್ನು ಯಾವುದೇ ಸರ್ಕಾರ ಬಂದಾಗಲು ಹಿಂದೆ ಮಾನ್ಯ ವಾಜಪೇಯಿಯವರ ಸರ್ಕಾರ ಇದ್ದಾಗ ಆಗಲಿ, ಈಗ ಮಾನ್ಯ ಮನ ಮೋಹನರವರ ಸರ್ಕಾರ ಇದ್ದಾಗ ಆಗಲಿ ಯಾವುದೇ ಸರ್ಕಾರ ಬಂದರು ಅವರು ಆಂಧ್ರಕ್ಕೆ ಮಣೆಯನ್ನು ಹಾಕುತ್ತಾರೆ. ಕೇರಳಕ್ಕೆ ಮಣೆ ಹಾಕುತ್ತಾರೆ. ತಮಿಳುನಾಡಿಗೆ ಮಣೆ ಹಾಕುತ್ತಾರೆ.

ಕರ್ನಾಟಕವನ್ನು ಅವರು ಗುಲಾಮಗಿರಿ ರೀತಿಯಲ್ಲಿ ನೋಡುತ್ತಾರೆ. ಇದಕ್ಕೆ ಕಾರಣವೇನು? ನಮ್ಮಲ್ಲಿ ರಾಜಕೀಯ ಶಕ್ತಿ ಇಲ್ಲ. ಕೇಂದ್ರದ ಮೇಲೆ ಒತ್ತಡವನ್ನು ತರತಕ್ಕಂಥ ರಾಜಕೀಯ ಶಕ್ತಿ ಇಲ್ಲ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ ಪ್ರಕಾರ ಮಾನ್ಯ ವೆಂಕಯ್ಯನಾಯ್ಡುರವರು ನಮ್ಮ ರಾಜ್ಯಸಭಾ ಸದಸ್ಯರು, ಅವರು ಇವತ್ತು ಅತ್ಯಂತ ಕಳಕಳಿಯಿಂದ ಈ ಸಭೆಯ ಮುಖೇನ ಹೇಳುತ್ತೇನೆ, ಅವರ ನಾಯಕತ್ವದಲ್ಲಿ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ, ಅವರ ನಾಯಕತ್ವದಲ್ಲಿ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಚರ್ಚೆಯಾಗಲಿ, ಒಂದು ಕಡೆ ಅವರು, ಮತ್ತೊಂದು ಕಡೆ ತಮಿಳುನಾಡಿಗೆ ರಾಮಸ್ವಾಮಿಯವರು ನಮ್ಮ ಕರ್ನಾಟಕದ ಪ್ರತಿನಿಧಿಗಳು. ಇದು ನಮ್ಮ ಹಣೆಬರಹ. ಆದ್ದರಿಂದ ನಾನು ತಮಗೆ ಹೇಳುತ್ತೇನೆ. ನಿಮಗೆ ಬಂದಿರತಕ್ಕಂಥ ಮಾಹಿತಿ ಏನು? ನಾವೆಲ್ಲರೂ ಚರ್ಚೆ ಮಾಡುವುದಕ್ಕಿಂತ ಮುಂಚೆ, ಇದು ನಮ್ಮಲ್ಲಿರತಕ್ಕಂಥ ಟೆಂಡರ್ ಕರೆದಿರತಕ್ಕಂಥ ಮಾಹಿತಿ ಎಲ್ಲಾ ನಮ್ಮಲ್ಲಿ ಬಂದಿದೆ. ಅಲ್ಲಿ ಸರ್ಕಾರ ಮಾಡಿರತಕ್ಕಂಥ ಪ್ರತಿಯೊಂದರ ಮಾಹಿತಿ ಬಗ್ಗೆ ಈ ಮಾಹಿತಿ ನಿಜವಾಗಿ ಇದ್ದರೆ, ಇದು ನಿಜಕ್ಕೂ ಕರ್ನಾಟಕಕ್ಕೆ ಘೋರ ಅನ್ಯಾಯವಾಗುತ್ತದೆ. ಆದ್ದರಿಂದ ತಕ್ಷಣದಲ್ಲಿ ಮೊದಲು ದೆಹಲಿಯಲ್ಲಿರತಕ್ಕಂಥ ನಮ್ಮ ಲೋಕಸಭಾ ಸದಸ್ಯರುಗಳು,

ತಕ್ಷಣ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿ, ನಮ್ಮ ಅಹವಾಲುಗಳನ್ನು ಅವರ ಮುಂದೆ ಇಟ್ಟು ಪ್ರತಿಭಟನೆಯನ್ನು ಸಲ್ಲಿಸಬೇಕು. ಸರ್ವ ಪಕ್ಷಗಳ ನಿಯೋಗ ತಕ್ಷಣ ಕೇಂದ್ರಕ್ಕೆ ಹೋಗತಕ್ಕಂಥ ವಿಚಾರ ಮಾಡಬೇಕು. ಈ ಬಗ್ಗೆ ಸರ್ಕಾರದಲ್ಲಿ ಏನು ಮಾಹಿತಿ ಇದೆ ಎನ್ನುವುದರ ಬಗ್ಗೆ ದಯವಿಟ್ಟು ತಿಳಿಸಬೇಕೆಂದು ಹೇಳಿ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೆ, ಅವರು ಉಳಿದ ವಿಚಾರಗಳನ್ನು ಹೇಳಿದ್ದಾರೆ. ಬಜಾವತ್ ತೀರ್ಪಿನ ಪ್ರಕಾರವೇ ಗೋದಾವರಿ ಬೇಸಿನ್‌ದಿಂದ ನಮಗೆ 20 ಟಿಎಂಸಿ ಇನ್ನು ನೀರು ಬರಬೇಕಾಗಿದೆ. ಇದರ ಹುನ್ನಾರ ಏನು ಎಂದು ಹೇಳಿದರೆ, ಈ ಟೆಂಡರ್ ಕರೆದಿರತಕ್ಕಂಥ ಹಿಂದೆ ಇರತಕ್ಕಂಥ ಹುನ್ನಾರ ಏನು ಎಂದರೆ, ನಮ್ಮ ಕರ್ನಾಟಕಕ್ಕೆ ಬರಬೇಕಾಗಿರತಕ್ಕಂಥ ಗೋದಾವರಿ ಬೇಸಿನ್‌ದಿಂದ 20 ಟಿಎಂಸಿ ಏನು ನೀರು ಬರಬೇಕಾಗಿತ್ತು ಅದನ್ನು ಕಬಳಿಸತಕ್ಕಂಥ ಪ್ರಯತ್ನ ಇದು. It is the most important fact. ಈ ಪಿತೂರಿಯಲ್ಲಿ ಇರತಕ್ಕಂಥದ್ದು, ನಾವು ಇದೇ ಸದನದಲ್ಲಿ ಸುಮಾರು ಸಲ ನಾವು ಹೇಳಿದ್ದೇ ಕೃಷ್ಣಾ ಬೇಸಿನ್‌ನಲ್ಲಿ ನಮಗೆ ಬರಬೇಕಾಗಿರತಕ್ಕಂಥ ನೀರನ್ನು ನಾವು ಸಮರ್ಪಕವಾಗಿ 'ಎ' ಸ್ಕೀಂನಲ್ಲಿ ಉಪಯೋಗಿಸಿಕೊಳ್ಳಬೇಕು. ನಮ್ಮ 734 ಟಿಎಂಸಿ ನೀರು ಏನಿದೆ ಅದರಲ್ಲಿ 5 ಟಿಎಂಸಿ ನೀರು ಹೋದರೆ 729 ಟಿಎಂಸಿ ನೀರಿನ ಜೊತೆಗೆ ಗೋದಾವರಿ ಬೇಸಿನ್‌ದಿಂದ ಬರಬೇಕಾದ 20 ಟಿಎಂಸಿ ನೀರು ಸೇರಿದರೆ ಇದು ಒಟ್ಟು 'ಎ' ಸ್ಕೀಂನಲ್ಲಿ ಬರಬೇಕಾದ ನೀರು ಇದೆ. ಇದು ಬಚಾವತ್ ಅವಾರ್ಡ್ ಪ್ರಕಾರ ಆ ಪೋಲೋರಂನಲ್ಲಿ ಆ ಪ್ರಾಜೆಕ್ಟ್ ಆಂಧ್ರದವರು ತಮ್ಮ ಸ್ವಂತ ಹಣದಿಂದ ಕಟ್ಟಿ ನಮಗೆ ನೀರು ಕೊಡಬೇಕು ಎಂದು ಆ ಒಪ್ಪಂದದಲ್ಲಿ ಇದೆ. ಈ ರೀತಿ ಅವಾರ್ಡ್‌ನಲ್ಲಿ ಇರತಕ್ಕಂಥದ್ದು. ಸ್ವಂತ ಹಣದಿಂದ ಅಲ್ಲಿ ಡ್ಯಾಂ ನಿರ್ಮಾಣ ಮಾಡಿ ಆ ನೀರನ್ನು ನಮಗೆ ಡೈವರ್ಟ್ ಮಾಡಬೇಕೆಂದು ಹೇಳತಕ್ಕಂಥದ್ದು ಆ ಬಚಾವತ್ ತೀರ್ಪಿನಲ್ಲಿ ಇರತಕ್ಕಂಥದ್ದು. ಅಂದರೆ ಆಂಧ್ರದವರು ಈ ಎಲ್ಲವನ್ನು ಮುಚ್ಚಿಹಾಕಿ ಅವರ ಖರ್ಚಿನಿಂದ ಡ್ಯಾಂನ್ನು ಕಟ್ಟಿ ನೀರನ್ನು ಕೊಡುವುದರ ಬದಲು ಈ ನೀರನ್ನು ಕಬಳಿಸತಕ್ಕಂಥ ಒಂದು ಪ್ರಯತ್ನ ಇಲ್ಲಿ ನಡೆದಿದೆ. ನಾನು ಬಾಗೇಪಲ್ಲಿ ಕ್ಷೇತ್ರದಿಂದ ಬಂದಿರುವವನು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಮಂತ್ರಿಯಾಗಿದ್ದಾಗ ಆ ಘಟನೆ ನಡೆದದ್ದು. ನಾನು ಮೊದಲು ಶಾಸಕನಾಗಿದ್ದಾಗ ಅದರ ಯೋಜನೆಯನ್ನು ರೂಪಿಸಿ ಒಂಬತ್ತುವರೆ ಕೋಟಿ ರೂ.ಗಳಿಗೆ ಅದನ್ನು

ಆಪ್ರೋವಲ್ ಮಾಡಿಸಿದ್ದೆ. ಆವತ್ತು ಅದು ಮಲ್ಟಿಪರಪಸ್ ಇತ್ತು. ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ ಎಂದು ಆಪ್ರೊವಲ್ ಆಗಿತ್ತು. ಆಂಧ್ರದವರು ಏನೋ ಬೊಬ್ಬೆ ಹಾಕಿದರು ಎನ್ನುವ ಕಾರಣಕ್ಕೋಸ್ಕರ ಇಡೀ ಪರಗೋಡ ಯೋಜನೆಯನ್ನು ಕೇವಲ ಕುಡಿಯುವ ನೀರಿಗೆ ಎಂದು ಅದನ್ನು ಸೀಮಿತ ಮಾಡಿದಿರಿ. 1989ರ ಅಗ್ರಿಮೆಂಟ್ ಪ್ರಕಾರವೇ ಸಿಲ್ಟ್ ಆಗಿರತಕ್ಕಂಥದ್ದನ್ನು ನಾವು ಎಲ್ಲಾ ಶೇಖರಣೆ ಮಾಡಿ ನಾವು ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಹಕ್ಕಿದೆ ಎಂದು ಹೇಳಿ 1989ನೇ ಇಸ್ವಿಯಲ್ಲಿ ನಮ್ಮ ಅವರ ಮಧ್ಯೆ ಆಗಿರತಕ್ಕಂಥ ಒಪ್ಪಂದದಲ್ಲಿ ಬಹಳ ಕ್ಲಿಯರ್ ಆಗಿದೆ.

ನಮ್ಮ ಚಿತ್ರಾವತಿ ನದಿ ದಡದಲ್ಲಿ ಬರತಕ್ಕಂಥ ಕೆರೆಗಳು ಏನು ಸಿಲ್ಟ್ ಆಗಿವೆ ಅದರಲ್ಲಿ ಇಷ್ಟೊಂದು ಸಿಲ್ಟ್ ಆಗದಿರುವಂತೆ ನೀರನ್ನು ಹಿಡಿದಿಟ್ಟುಕೊಳ್ಳಬಹುದಾಗಿತ್ತು. ಆ ನೀರನ್ನು ಸಿಲ್ಟ್ ಆಗಿರುವಂಥ ಕಾರಣಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು ಎಂದು 1989ನೇ ಇಸ್ವಿಯ ಅಗ್ರಿಮೆಂಟ್‌ನಲ್ಲಿ ಬಹಳ ಸ್ಪಷ್ಟವಾಗಿ ಇದೆ. ಅಷ್ಟು ಇದ್ದರೂ ಕೂಡ ಆವತ್ತು ಆಂಧ್ರದವರು ಕೂಗು ಹಾಕಿದರು. ದೆಹಲಿಗೆ ಹೋದರು, ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಇತ್ತು. ಆಗ ಮಾನ್ಯ ಚಂದ್ರಬಾಬುನಾಯ್ಡುರವರ ಮಾತು ಚೆನ್ನಾಗಿ ನಡೆಯುತ್ತಿತ್ತು. ಅವರ ಆಧಾರದ ಮೇಲೆ ಸರ್ಕಾರ ಇತ್ತು ಎನ್ನುವ ಕಾರಣಕ್ಕೋಸ್ಕರ ಹೆದರಿಕೊಂಡು ಆ ಪರಗೋಡು ಯೋಜನೆಯನ್ನು ಆಪ್ರೊವಲ್ ಮಾಡಿಸಿದ್ದೆ. ಅದನ್ನು ಮಲ್ಟಿಪರ್‌ಪಸ್‌ಗೆ ಎಂದು ಹೇಳಿ, ಅದನ್ನು ಸಂಪೂರ್ಣವಾಗಿ ಬದಲಾವಣೆ ಮಾಡಿಬಿಟ್ಟು, ಬರೀ ಕುಡಿಯುವ ನೀರಿಗೆ ಎಂದು ಹೇಳಿ, 0.8 ಕ್ಯೂಸೆಕ್ಸ್ ನೀರಿಗೆ ನೀವು ತಂದಿಟ್ಟೀರಿ. ಅವರು ಬೆದರಿಕೆ ಹಾಕಿದರು ಎನ್ನುವ ಕಾರಣಕ್ಕೋಸ್ಕರವಾಗಿ, ಆವತ್ತು ಅವರ ಬೆದರಿಕೆಗೆ ಬಗ್ಗಬೇಕಾಗಿರಲಿಲ್ಲ. ಕಾನೂನು ನಮ್ಮ ಪರವಾಗಿ ಇತ್ತು, ನ್ಯಾಯ ನಮ್ಮ ಪರವಾಗಿ ಇತ್ತು, ನಮಗೆ ಹಕ್ಕಿತ್ತು. ಅವರು ಬೆದರಿಕೆ ಹಾಕಿದರು ಎನ್ನುವ ಕಾರಣಕ್ಕೋಸ್ಕರವಾಗಿ ನಮ್ಮ ಹಕ್ಕನ್ನು ನಾವು ಕಳೆದುಕೊಂಡು ಇವತ್ತು ಕೇವಲ ಕುಡಿಯುವ ನೀರಿಗೋಸ್ಕರ ಎಂದು ಮಾಡಿ ಇಟ್ಟಿದ್ದೀರಿ. ಆದರೆ ಇವತ್ತು ಏನು ಆಗುತ್ತಿರುವಂಥದ್ದು, ಗೋದಾವರಿಯ ಬೇಸಿನ್‌ನಿಂದ ನಮಗೆ ಬರಬೇಕಾದ 20 ಟಿಎಂಸಿ ನೀರನ್ನು ಆಂಧ್ರದವರು ಕಬಳಿಸಲಿಕ್ಕೆ ಯೋಜನೆಯನ್ನು ಮಾಡಿದ್ದಾರೆ.ಸರ್ಕಾರದವರು ಏನು ಮಾಡುತ್ತಿದ್ದೀರಿ. ಕೃಷ್ಣಾ ಬೇಸಿನ್ ಪ್ರಶ್ನೆ ಬಂದ ತಕ್ಷಣ ಏನಾಗುತ್ತದೆಂದರೆ, ಬರೀ ಉತ್ತರ ಕರ್ನಾಟಕ ಎನ್ನುವಂಥದ್ದು ಬಂದು ಬಿಟ್ಟಿದೆ. ಕೋಲಾರ ಜಿಲ್ಲೆಯವರು ಕೂಡ ಕೃಷ್ಣಾ ಬೇಸಿನ್‌ಗೆ ಸೇರತಕ್ಕಂಥವರು, ಎನ್‌ಆರ್ ಬೇಸಿನ್‌ಗೆ ಬರತಕ್ಕಂತವರು ನಾವು. ನಮಗೂ ಕೂಡ ಕೃಷ್ಣಾ ಬೇಸಿನ್‌ನಲ್ಲಿ ಕೋಲಾರಕ್ಕೆ ಶೇರು ಇದೆ. ನಮ್ಮ ದಕ್ಷಿಣ ಜಿಲ್ಲೆಗಳಿಗೆ 80 ಟಿಎಂಸಿ ಕೊಡಿ ಎಂದು ನಾವು ಕೇಳಿದ್ದೇವೆ. ಪರಮಶಿವಯ್ಯನವರ ವರದಿಯಲ್ಲಿ ಹೇಳಿದ್ದಾರೆ. ಆದರೆ ನಮಗೆ ಕೊಡಲಿಲ್ಲ. ಇವರು ನೀರನ್ನು

ಉಳಿಸಿಕೊಳ್ಳಲಿಲ್ಲ. ಇವತ್ತು ನಮಗೆ ಕುಡಿಯುವುದಕ್ಕೆ ನೀರು ಇಲ್ಲದೆ ನಾವು ಒದ್ದಾಡತಕ್ಕಂಥ ಸ್ಥಿತಿಯಲ್ಲಿ ಈ 20 ಟಿಎಂಸಿ ನೀರನ್ನು ಕಬಳಿಸಲಿಕ್ಕೆ ಆಂಧ್ರದವರು ಏನು ಯೋಜನೆಯನ್ನು ಹಾಕಿದ್ದಾರೆ ಟೆಂಡರ್ ಪ್ರಕಾರ ಇದು ಸತ್ಯವಾಗಿದೆ. ಏಕೆಂದರೆ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿ ಇದು. ಮಾನ್ಯ ಯಡಿಯೂರಪ್ಪ ನವರು ಮಾನ್ಯ ಜಗದೀಶ್ ಶೆಟ್ಟರ್‌ವರು ಮಾತನಾಡುವಾಗ ಟೆಂಡರ್ ನೋಟಿಫಿ ಕೇಶನ್ ನಂಬರ್ ಕೂಡ ನಿಮಗೆ ಕೊಟ್ಟಿದ್ದಾರೆ. ಟೆಂಡರ್ ನೋಟಿಫಿಕೇಶನ್‌ನಲ್ಲಿ 21 ಕಾಮಗಾರಿಗಳಿಗೆ ಎಂಟ್ರೀಸ್ಟ್ ಕೂಡ ಕೊಟ್ಟು ಅವಾರ್ಡ್ ಕೂಡ ಆಗಿ ಬಿಟ್ಟಿದೆ. ಅವಾರ್ಡ್ ಆಗಿರತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರ ಏನು ಮಾಡುತ್ತಿತ್ತು. ನಮ್ಮ ರಾಜ್ಯಸಭಾ ಸದಸ್ಯರು ಹಾಗೂ ಲೋಕಸಭಾ ಸದಸ್ಯರು ಕೇಂದ್ರದಲ್ಲಿ ಏನು ಮಾಡುತ್ತಿದ್ದರು ಮತ್ತು ರಾಜ್ಯ ಸರ್ಕಾರ ಏನು ಮಾಡುತ್ತಿತ್ತು. ಈಗಾಗಲೇ 6 ತಿಂಗಳಾಗಿದೆ. ಅಂದರೆ ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಇವೆಲ್ಲಾ ಆಗಿರುವುದು. ಸಮ್ಮಿಶ್ರ ಸರ್ಕಾರ ಬಂದ ಮೇಲೆ ಈ ಕೆಲಸ ಆಗಿರುವಂತಹುದ್ದು.

ಇದು ಗುಟ್ಟಾಗಿ ಏನೂ ನಡೆದಿಲ್ಲ. ನಮಗೆಲ್ಲರಿಗೂ ಗೊತ್ತಿದೆ. ಏನೆಂದರೆ ದಿನಬೆಳಗಾದರೆ ಆಂಧ್ರದ ಮುಖ್ಯಮಂತ್ರಿಯಾದ ವೇಳೆಯಿಂದ ಶ್ರೀ ರಾಜಶೇಖರ ರೆಡ್ಡಿ ಆಂಧ್ರದ ಎಲ್ಲಾ ಮೂಲೆಗಳಿಗೂ ಹೋಗಿ ನಾನು ಆ ಯೋಜನೆ ಮಂಜೂರು ಮಾಡಿಸಿದ್ದೇನೆ ಎಂದು ಹೇಳುವುದು ಶಿಲಾ ಶಾಸನಗಳನ್ನು, ಕಲ್ಲನ್ನು ಹಾಕಿಸುವುದು, ಇದೇ ಮುಂತಾದ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ನಮ್ಮವರು ಏನು ಮಾಡು ತ್ತಿದ್ದಾರೆ? ನಾವು ಬೇರೆ ರಾಜ್ಯಗಳ ನೀರಿಗೋಸ್ಕರ ಜಗಳಕ್ಕೆ ಹೋಗುವ ಅವಶ್ಯಕತೆ ನಮಗೆ ಇಲ್ಲ. ನಮ್ಮ ಪಾಲಿನ ನೀರನ್ನಾದರೂ ನಾವು ಸರಿಯಾಗಿ ಉಪಯೋಗಿಸ ಕೊಳ್ಳಬೇಕಲ್ಲವೇ? ಬೇರೆಯವರ ನೀರಿಗೋಸ್ಕರ ಜಗಳವಾಡಬಾರದು. ಇದರಲ್ಲಿ ನಮ್ಮ ರಾಜ್ಯ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಮೇಲ್ನೋಟಕ್ಕೆ ಕಾಣುತ್ತಿದೆ. ಸರ್ಕಾರದಲ್ಲಿ ಈ ಬಗ್ಗೆ ಏನು ಮಾಹಿತಿ ಇದೆ, ಏನು ಉತ್ತರ ಇದೆ ಎನ್ನುವುದನ್ನು ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಇಲ್ಲಿ ನನಗೆ ಆಶ್ಚರ್ಯ ಆಗುವಂತಹ ಸಂಗತಿಯೇನೆಂದರೆ 4,480 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟು ಒಂದು ರಾಜ್ಯ ಸರ್ಕಾರ 21 ಯೋಜನೆಗಳನ್ನು ಕ್ಲಿಯರ್ ಮಾಡಿದೆ. ನನ್ನಲ್ಲಿರುವ ದಾಖಲಾತಿಯ ಪ್ರಕಾರ ಈ ರೀತಿಯ ಕ್ಲಿಯರೆನ್ಸ್ ಮಾಡುವಾಗ, ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ಕ್ಲಿಯರೆನ್ಸ್ ಇದಕ್ಕೆ ಇಲ್ಲ. ಪ್ಲಾನಿಂಗ್ ಕಮಿಷನ್ ಕ್ಲಿಯರ್‌ರೆನ್ಸ್ ಇಲ್ಲ. ಆದರೂ ಸಹ ಒಂದು ರಾಜ್ಯ ಸರ್ಕಾರ 4,480 ಕೋಟಿ ರೂಪಾಯಿಗಳ ಟೆಂಡರ್ ಕರೆದು ಕ್ಲಿಯರ್ ಮಾಡಿ ಕೆಲಸ ಆರಂಭಿಸಬಹುದು. ಇದರಲ್ಲಿ ನನಗೆ ಆಶ್ಚರ್ಯವಾಗುವುದೇನೆಂದರೆ, ಮಾನ್ಯ ಇರಿಗೇಷನ್ ಮಿನಿಸ್ಟರ್ ಕೇಳಬೇಕು.

ನಾವೆಲ್ಲಾ ಕೃಷ್ಣಾ ಕಣಿವೆಯವರು, ತುಂಗಾ ನದಿಯ ಮೂಲದಿಂದ ಬಂದಿದ್ದೇವೆ. ನಮಗೇನೂ ಇದರಿಂದ ಬೆನಿಫಿಟ್ ಇಲ್ಲ. ನಾವು ತೀರ್ಥಹಳ್ಳಿ, ಕೊಪ್ಪ ಭಾಗದಲ್ಲಿ ಮುಳುಗಡೆಯಾಗುವವರು, ಸ್ಯಾಕ್ರಿಫೈಸ್ ಮಾಡುವವರು. ನಾವೆಲ್ಲಾದರೂ ಹತ್ತು ಅಥವಾ ಹದಿನೈದು ಹೆಚ್.ಪಿ. ಮೋಟಾರು ಇಡುತ್ತೇವೆಂದರೆ ನಿಮ್ಮ ಇಂಜಿನಿಯರ್‌ಗಳು ಹಿಂಸೆಯನ್ನು ಕೊಡುತ್ತಾರೆ. ಇರಿಗೇಷನ್ ಇಲಾಖೆಯವರು ನಮಗೆ ಬಚಾವತ್ ತೀರ್ಪು ಅದು ಇದು ಎಂದು ಕಾನೂನು ಹೇಳಲಿಕ್ಕೆ ಬರುತ್ತಾರೆ. ನಮ್ಮ ರೈತರಿಗೆ ಲಿಫ್ಟ್ ಇರಿಗೇಷನ್ ಮಾಡಲಿಕ್ಕೆ ಅನುಮತಿಯನ್ನು ಕೊಡುತ್ತಿಲ್ಲ. ಸಣ್ಣ ನೀರಾವರಿ ಇಲಾಖೆಯವರು ಮಾಡುವುದೇ ಇಲ್ಲ ಬಿಡಿ. 50 ಅಥವಾ 60 ಲಕ್ಷದ ಪ್ರಾಜೆಕ್ಟ್ ಮಂಜೂರಾದರೆ ಅವರಿಗೆ ಕ್ಲಿಯರ್ ಮಾಡಲಿಕ್ಕೆ ಐದಾರು ವರ್ಷಗಳು ಬೇಕಾಗುತ್ತದೆ. ಹೀಗಿರುವಾಗ ನಮ್ಮಲ್ಲೇ ಅಪ್ಪರ್ ತುಂಗಾ ನಿರ್ಮಾಣವಾಗುತ್ತಿದೆ. ನಾವು ಮುಳುಗಡೆಯಾದರೂ ಕೆಳಗಡೆಯಿರುವವರು ರಾಣಿಬೆನ್ನೂರು ಜನರು ಅದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಇದಕ್ಕೆ ನಮಗೇನೂ ಬೇಜಾರು ಇಲ್ಲ. ಇದಕ್ಕೆ 5 ಕಿ.ಮೀ. ಚಾನೆಲ್ ಹೋಗಲಿಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಸೆಂಟ್ರಲ್‌ನಿಂದ ಕ್ಲಿಯರ್ ಸಿಗಲಿಲ್ಲ. ಈಗಾಗಲೇ ಅಪ್ಪರ್‌ತುಂಗಾ ಡ್ಯಾಮ್‌ಕಟ್ಟಿ ಎರಡು ವರ್ಷವಾಯಿತು. ಆದರೂ ಅದನ್ನು ಪೂರ್ಣ ಕಾರ್ಯಗತ ಮಾಡಲಿಕ್ಕೆ ಆಗಲಿಲ್ಲ. ಕ್ಲಿಯರೆನ್ಸ್ ಸಿಗಲಿಲ್ಲವೆನ್ನುವ ಕಾರಣಕ್ಕೆ ಸಂಪೂರ್ಣವಾಗಿ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದೀರಿ. ಬಹಳ ಸೌಜನ್ಯರು ನೀವು ಏಕೆಂದರೆ ಕೇಂದ್ರ ಸರ್ಕಾರಕ್ಕೆ ನೀವೆಲ್ಲಾ ಬೇಕು. ಕಾನೂನಿಗೆ ಅತೀತರಾಗಬಾರದೆಂದು ನೀವೆಲ್ಲಾ ಸುಮ್ಮನಾಗಿ ಬಿಟ್ಟಿರಿ. ನಮ್ಮ ಪಕ್ಕದ ರಾಜ್ಯ ನಮ್ಮ ನೀರನ್ನು ಕಬಳಿಸಲಿಕ್ಕೆ ಹೊರಟಿದೆ. ಸುಪ್ರೀಂ ಕೋರ್ಟ್‌ನ ಆದೇಶದನ್ವಯ ಒಂದು ವಿಶೇಷವಾದ ನ್ಯಾಯಾಧೀಕರಣವನ್ನು ತೆರೆದರೂ ಕೂಡ ಅದು ಇನ್ನೂ ಕೂಡ ಕಾರ್ಯಾರಂಭ ಮಾಡಲಿಲ್ಲ. ಎಷ್ಟು ಟಿಎಂಸಿ ಎಫ್‌ಟಿ ನೀರನ್ನು ಯಾವ್ಯಾವ ರಾಜ್ಯಗಳು ಬಳಕೆ ಮಾಡಿಕೊಳ್ಳಬೇಕು ಎಂದು ತೀರ್ಪು ಕೊಡುವ ಮೊದಲೇ ಇದು ಪ್ರಾರಂಭವಾಗುತ್ತದೆಂದು ಅನ್ನುವುದಾದರೇ ಈ ಸರ್ಕಾರ ಜೀವಂತವಾಗಿದೆಯೇ ಎನ್ನುವ ಅನುಮಾನ ನಮ್ಮ ಕರ್ನಾಟಕದ ಜನತೆಗೆ ಬರುವ ಹಾಗೆ ಆಗಿದೆ. ನೀವ್ಯಾಕೆ ಇದಕ್ಕೆ ತಕರಾರು ಮಾಡಲಿಲ್ಲ, ನೀವ್ಯಾಕೆ ಅಡ್ಡಿಪಡಿಸಲಿಲ್ಲ, ಕನ್ನಡದ ನೆಲ, ಜಲ ರಕ್ಷಣೆಯ ಬಗ್ಗೆ ನಿಮ್ಮ ಬದ್ಧತೆಯೇನು? ನಿಮ್ಮ ಬದ್ಧತೆ ಕೇವಲ ಅಧಿಕಾರದ ಬಗ್ಗೆ ಮಾತ್ರ ಇರುವಂತಹದು. ಕೃಷ್ಣಾ, ಕಾವೇರಿಯ ಹೆಸರು ಹೇಳಿಕೊಂಡೇ ಅಧಿಕಾರಕ್ಕೆ ಬಂದವರು ನೀವು, ಜನತಾ ದಳ.ಎಸ್.ನವರು ಸಂಪೂರ್ಣವಾಗಿ ಕಾವೇರಿ ಕೃಷ್ಣಾ ನದಿ ಹೆಸರಿನ ಆಧಾರದ ಮೇಲೆ ಬಂದಿದೆ, ನೀರಿಗಾಗಿ ರಕ್ತವನ್ನು ಬೇಕಾದರೂ ನಾವು ಕೊಡುತ್ತೇವೆ. ಕೃಷ್ಣಾ, ಕಾವೇರಿ ನದಿಯ ನೀರಿನ ಒಂದು ಹನಿಯನ್ನು ಕೊಡುವುದಿಲ್ಲವೆಂದು ಹೇಳಿದ ನೀವು ಈಗ ಅಂತಹ ಮುಖಂಡರು ಎಲ್ಲಿದ್ದೀರಿ ಏಕೆ ಮಾತನಾಡು

ತ್ತಿರುವಿರೀ ರಾಜ್ಯದ ಹಿತ ನಿಮಗೆ ಬೇಡವೇ? ಅಧಿಕಾರಕ್ಕೆ ಬಂದರೆ ಸಾಕು ನಿಮಗೆ ಆಮೇಲೆ ಕ್ಲೋಸ್, ಮತ್ತೊಂದು ಚುನಾವಣೆಗೆ ಕೃಷ್ಣಾ ಹಾಗೂ ಕಾವೇರಿ ನದಿಯ ಬಗ್ಗೆ ವಿಡಿಯೋ ಮಾಡಿ ಆ ನದಿಗಳ ಬಗ್ಗೆ ಆಗಿರುವ ದುರಂತವನ್ನು ಹಳ್ಳಿಹಳ್ಳಿಗೂ ಹೋಗಿ ಪ್ರಚಾರ ಮಾಡುವ ಮೂಲಕ ದಡ್ಡ ರೈತರನ್ನು ಪ್ರಚೋದನೆ ಮಾಡಿ, ಅವರೆಲ್ಲರ ಓಟನ್ನು ನಿಮ್ಮ ಬುಟ್ಟಿಗೆ ಹಾಕಿಕೊಂಡು ಅಧಿಕಾರಕ್ಕೆ ಬಂದರೆ ಮುಗಿಯಿತು, ನೀರು ಹೋಗಲಿ, ಏನು ಬೇಕಾದರೂ ಹೋಗಲಿ, ಮಾನ ಬೇಕಾದರೂ ಹೋಗಲಿ, ನೀವು ಚರ್ಚೆ ಮಾಡುವಂತಹವರು ಅಲ್ಲ. ಈ ಪರಿಸ್ಥಿತಿಯಲ್ಲಿ ನೀವು ಹೇಗೆ ಕುಳಿತಿದ್ದೀರಿ, ಆರು ತಿಂಗಳಾದರೂ ನೀವು ಸುಮ್ಮನಿರುವಿರಿ, ಈ ಬಗ್ಗೆ ಕರ್ನಾಟಕದ ಜನತೆಯಲ್ಲಿ ಯೋಚಿಸಬೇಕು. ನಿಮ್ಮ ಅಧಿಕಾರದ ಮಹತ್ವಾಕಾಂಕ್ಷೆಯಿಂದ, ಕರ್ನಾಟಕದ ಜನರನ್ನು ಈ ರೀತಿ ಪ್ರಚೋದಿಸಿದೆ. ಓಟನ್ನು ಕೊಡುತ್ತಾರೆ ಎನ್ನುವ ಭಾವನೆ ನಿಮ್ಮದಾಗಿದೆ. ದೆಹಲಿಯ ಹೈಕಮಾಂಡ್...

ಶ್ರೀ ಎಂ.ಪಿ.ಪ್ರಕಾಶ: ಭಾರತದ ಶೈನಿಂಗ್‌ನಲ್ಲಿ ಈ ಕರ್ನಾಟಕ ರಾಜ್ಯವಿಲ್ಲವೇ?

ಶ್ರೀ ಅರಗಜ್ಞಾನೇಂದ್ರ: ಆ ರೀತಿ ಶೈನಿಂಗ್ ಮಾಡಿದ್ದಕ್ಕೆ ಇಷ್ಟರ ಮಟ್ಟಿಗೆ ಬಂದಿದ್ದೇವೆ. 79 ಜನ ಬಂದಿದ್ದೇವೆ.

ಶ್ರೀ ಹೆಚ್.ಕೆ.ಪಾಟೀಲ್: ಬಹುಶಃ ಭಾರತದ ಶೈನಿಂಗ್‌ನಲ್ಲಿ ಕರ್ನಾಟಕವೂ ಇಲ್ಲ. ಆ ದಡ್ಡ ರೈತರನ್ನು ಏಕೆ ಸೇರಿಸಿದ್ದೀರಿ? ನಮ್ಮಲ್ಲಿ ಮುಗ್ಧ ರೈತರಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎಚ್.ಕೆ.ಪಾಟೀಲ್‌ಗೇ, ನೀವು ಹಿರಿಯರಾಗಿದ್ದೀರಿ ಪ್ರಕಾಶರವರಿಗೂ ಅಂಕಿಅಂಶ ಗೊತ್ತಿದೆ. ನಮಗೆ ತಿಳಿದಿರುವ ಹಾಗೆ ಭಾರತ ಶೈನಿಂಗ್ ಎಂದು ಹೇಳಿದ ನಾವು ಆಗ ಭಾರತದ ಆರ್ಥಿಕ ಪರಿಸ್ಥಿತಿ ಏನಿತ್ತು ನಾವು ಅಧಿಕಾರವನ್ನು ಕಳೆದುಕೊಂಡಿದ್ದರೂ ಸಹ ಆ ಸಮಯದಲ್ಲಿ ಜಗತ್ತಿನ 5 ಶ್ರೀಮಂತ ರಾಷ್ಟ್ರಗಳ ಮಧ್ಯೆ ನಾವು ಹಿರಿಯಣ್ಣನಂತೆ ಕೂರುವ ಗೌರವ ನಮಗೆ ಸಿಕ್ಕಿತು. ವಿದೇಶಿ ವಿನಿಮಯದಲ್ಲಿ ಜಗತ್ತಿನ ಭಾರತದ ಇತಿಹಾಸದಲ್ಲಿಯೇ ತುಸು ಒಳ್ಳೆಯದಾಗಿರುವುದನ್ನು ಒಳ್ಳೆಯದು ಎಂದು ಹೇಳಬೇಕು. ಯಾರೂ ಬಂದರೂ 24ಗಂಟೆ ವೆಲ್ಲವನ್ನೂ ಮಾಡಬೇಕೆಂದು ನಾನೇನು ನಿರೀಕ್ಷೆ ಮಾಡುವುದಿಲ್ಲ. ಆದರೆ ಭಾರತ ಶೈನಿಂಗ್ ಎಂದು ಯಾವುದೋ ಕಾರಣಕ್ಕಾಗಿ ಚುನಾವಣೆಯಲ್ಲಿ ನಾವು ಗೆಲ್ಲದೇ ಇರಬಹುದು. ಆದರೆ ಸತ್ಯ ಸಂಗತಿಗಳನ್ನು ಅಂಕಿ ಅಂಶಗಳನ್ನು ನಂಬುತ್ತೀರಿ ತಾನೇ.

ಶ್ರೀ ಎಂ.ಪಿ.ಪ್ರಕಾಶ್: ಇದು ಚರ್ಚೆಗಾಗಿ ಚರ್ಚೆಯೆಂದು ಅಲ್ಲ. ಕರ್ನಾಟಕ ರಾಜ್ಯದಲ್ಲಿ ಜನತಾದಳ ಎಸ್.ನವರು ಪುಸ್ತಕಗಳನ್ನು ಪ್ರಕಟಿಸಿ ಕರ್ನಾಟಕ ರಾಜ್ಯದ

ರೈತರನ್ನು ಬೇಸ್ತು ಬೀಳಿಸುತ್ತಾರೆ ಎನ್ನುವುದಾದರೆ, ಭಾರತ ಶೈನಿಂಗ್‌ನಲ್ಲಿರ ಬೇಕಾದರೆ ಕೇಂದ್ರ ಸರ್ಕಾರದ ಸಂಪೂರ್ಣವಾಗಿ ಜವಾಬ್ದಾರಿಯನ್ನು ಹೊತ್ತುಕೊಂಡ ಸಮಯದಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ಅನಾವಶ್ಯಕವಾಗಿ ಅವರ ಮಿತ್ರಪಕ್ಷವಾಗಿರುವ ಆಂಧ್ರಪ್ರದೇಶ ಇಂತಹ ಅನ್ಯಾಯ ಮಾಡುತ್ತಿದೆಯೆಂಬ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ?

ಶ್ರೀ ಬಿ.ಎಸ್.ಯಡಿಯೂರಪ್ಪ: ದೇವೇಗೌಡರು ಇದ್ದಾಗ ಆಲಮಟ್ಟಿ ಅಣೆಕಟ್ಟೆಗೆ ಕ್ಲಿಯರೆನ್ಸ್ ಸಿಕ್ಕಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಾಗ Accelerated Irrigation Project ಎನ್ನತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿ, ಪ್ರತಿ ವರ್ಷವೂ 200 ಕೋಟಿ ರೂ. ಗಳಿಗಿಂತ ಹೆಚ್ಚು ಹಣವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದರು. ಒಳ್ಳೆಯದನ್ನು ಮೆಚ್ಚುವಂತಹ ವಿರೋಧಪಕ್ಷದ ನಾಯಕರು ಇದನ್ನು ಏತಕ್ಕೆ ಮೆಚ್ಚುವುದಿಲ್ಲ? ನಬಾರ್ಡ್‌ನ ವಿಚಾರದಲ್ಲಿ ರಸ್ತೆಗಳನ್ನು ಸೇರಿಸಬೇಕೆಂದು ಹೇಳಿ ಆರ್.ಐ.ಡಿ.ಸಿ. ತಂದಿದ್ದರು. ಅದನ್ನು ಯಾತಕ್ಕೆ ಮೆಚ್ಚುವುದಿಲ್ಲ. ಬಡತನದ ಸೀಮಾರೇಖೆಯಿಂದ ಕೆಳಗಿರುವವರೆಗೆ ಮೂರು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಹಂಚಬೇಕೆಂದು ಮಾಡಿದ ಕಾರ್ಯವನ್ನು ಏತಕ್ಕೆ ಮೆಚ್ಚುವುದಿಲ್ಲ. ಒಳ್ಳೆಯದನ್ನು ಹೇಳಬೇಕೆಂದಿರುವವರು ಅದನ್ನು ಕೂಡ ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ: ಭಾರತ ಶೈನಿಂಗ್‌ನಲ್ಲಿ 'ಏನೇನು ಇತ್ತು ಎಂಬುದರ ಬಗ್ಗೆ ನಿಮಗೆಲ್ಲಾ ಗೊತ್ತಿದೆ, ನೀವೆಲ್ಲಾ ಅಧಿಕಾರದಲ್ಲಿದ್ದಾಗ ಟೆಲಿಫೋನ್‌ಗಳು ಶ್ರೀಮಂತರ ಸ್ವತ್ತಾಗಿತ್ತು, ಲಕ್ಸುರಿ ಗೂಡ್ಸ್ ಎನಿಸಿತ್ತು. ಇವತ್ತು ಎನ್.ಡಿ.ಎ ಸರ್ಕಾರದ ಅಚೀವ್‌ಮೆಂಟ್‌ನಿಂದಾಗಿ ಟೆಲಿಫೋನ್ ಸಾಮಾನ್ಯ ಜನಗಳ ಮನೆಗಳಿಗೆ ಬಂದಿದೆ. ಗ್ಯಾಸ್ ಕನೆಕ್ಷನ್‌ಗೆ ಕ್ಯೂನಲ್ಲಿ ನಿಂತು ಪಡೆಯಬೇಕಾಗಿತ್ತು. ಈಗ ಮತ್ತೆ ನಿಮ್ಮಲ್ಲಿ ಅದೇ ಪರಿಸ್ಥಿತಿ ಬಂದಿದೆ. ನಮ್ಮ ಜನ ಕ್ಯೂನಲ್ಲಿ ನಿಂತುಯಾರಾದರೂ ಎಂ.ಪಿ.ಗಳ ಹತ್ತಿರ ಕಾಗದ ತೆಗೆದುಕೊಂಡು ಹೋಗಿ ಗ್ಯಾಸ್ ಕನೆಕ್ಷನ್ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು: ಈ ಕೃಷ್ಣ, ಗೋದಾವರಿ ನದಿ ನೀರಿನ ವಿವಾದದದ ವಿಷಯಕ್ಕೆ ಬದಲಾಗಿ ಯಾವುದೋ ವಿಷಯಕ್ಕೆ ಚರ್ಚೆ ಮಾಡಲು ಆರಂಭಿಸಿದ್ದೀರಿ, Confine to the subject.

ಶ್ರೀ ಅರಗ ಜ್ಞಾನೇಂದ್ರ: ನಾನು ವಿಷಯವನ್ನು ಡೈವರ್ಟ್ ಮಾಡುತ್ತಿರಲಿಲ್ಲ ಅಧ್ಯಕ್ಷರೇ,

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪಾರ್ಲಿಮೆಂಟಿನ ಚುನಾವಣೆ ಇನ್ನು ನಾಲ್ಕು ವರ್ಷ ಎರಡು ತಿಂಗಳು ಇವೆ.

ಅಧ್ಯಕ್ಷರು: ಅಡ್ಡ ಮಾತುಗಳು ಬೇಡ, ಗಂಭೀರವಾಗಿ ವಿಷಯದ ಬಗ್ಗೆ ಚರ್ಚಿಸಬೇಕು.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಹೆಚ್.ಕೆ.ಪಾಟೀಲರವರು ಇದನ್ನು ಏಕೆ ರಾಜಕೀಯಕ್ಕೆ ಒಳಪಡಿಸುತ್ತೀರಿ ಎಂದು ಕೇಳಿದರು. ನಿಜವಾಗಿ ಇದನ್ನು ನಾವು ರಾಜಕೀಯಕ್ಕೆ ಒಳಪಡಿಸಲಿಲ್ಲ, ಇದರ ಹಿಂದೆ ನಿಮ್ಮ ರಾಜಕಾರಣದ ಉದ್ದೇಶವೇನಿದೆ? ಅದನ್ನು ಕರ್ನಾಟಕ ರಾಜ್ಯದ ಜನತೆಗೆ ಸ್ಪಷ್ಟಪಡಿಸಿ, ಆರು ತಿಂಗಳೂಗಳಿಂದ ನಮಗೆ ಈ ವಿಷಯ ಗೊತ್ತಿರಲಿಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ನಿಮ್ಮ ಸರ್ಕಾರದಲ್ಲಿ ಈ ಬಗ್ಗೆ ಮಾಹಿತಿಗಳು ಇರುತ್ತವೆ. ಒಂದು ವೇಳೆ ನಿಮ್ಮಲ್ಲಿ ಯಾವುದೇ ಮಾಹಿತಿ ಇಲ್ಲವೆಂದಾದರೆ ನೀವು ಆರು ತಿಂಗಳುಗಳ ಕಾಲ ಸರ್ಕಾರವನ್ನು ನಡೆಸಲಿಲ್ಲವೆಂದು ಹೇಳಬೇಕಾಗುತ್ತದೆ. ಈ ಆರು ತಿಂಗಳು ನಿಮ್ಮ ಸರ್ಕಾರ ನಿಷ್ಕ್ರಿಯವಾಗಿತ್ತು ಎಂದು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಹೇಗಿದ್ದರೂ ಕರ್ನಾಟಕ ರಾಜ್ಯದ ಜನತೆ ಈ ರಾಜ್ಯದ ಜನತೆ ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ, ನೀವು ಈಗ ಮೇಲಿನವರನ್ನು 'ಒಲೈಸಬೇಕಾಗಿದೆಯಲ್ಲಾ? ಅದಕೋಸ್ಕರ ನಾವು ಇದನ್ನು ಬಿಟ್ಟಿದ್ದೇವೆ.

ಆಂಧ್ರದವರಿಗೆ ತಮ್ಮ ಮೇಲೆ ನಮ್ಮ ಹೈಕಮಾಂಡ್ ಇದೆ. ಏನು ಬೇಕಾದರೂ ಕ್ಲಿಯರೆನ್ಸ್ ಕೊಡಿಸುತ್ತಾರೆ ಎನ್ನುವ ಧೈರ್ಯ. ಕರ್ನಾಟಕ ಜನ ದೆಹಲಿಗೆ ಬಂದರೆ ಅವರನ್ನು ಸುಮ್ಮನೆ ವಾಪಸ್ಸು ಕಳುಹಿಸಲಿಕ್ಕೆ ಅವರಿಗೆ ಗೊತ್ತಿದೆ. ದೆಹಲಿಯ ಬಲ ಅವರಿಗಿದೆ. ಅದರ ಪರಿಣಾಮವೇ ಇವತ್ತು ಇವರು 4,480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಮಗೆ ನ್ಯಾಯವಾಗಿ ದೊರಕಬೇಕಾದ ನೀರನ್ನು ಬಳಸಲಿಕ್ಕೆ ನಮಗೆ ಸಾಧ್ಯವಾಗಿಲ್ಲ. ಅನ್ಯಾಯವಾಗಿ ಅವರು ಕಬಳಿಸುವ ನೀರನ್ನು ತಡೆಯಲಿಕ್ಕೂ ಸಹ ಸಾಧ್ಯವಾಗಲಿಲ್ಲ, ಇಂತಹ ಒಂದು ದುರ್ಬಲ ಸರ್ಕಾರ ನಮ್ಮ ರಾಜ್ಯದಲ್ಲಿದೆಯೆಂದು ನಾವು ನಾಚಿಕೆಪಟ್ಟುಕೊಳ್ಳಬೇಕಾಗಿದೆ. ಈಗಾಲಾದರೂ ಈ ಸಮಸ್ಯೆಗೆ ಏನು ಮಾಡುತ್ತಾರೆಂಬ ಬಗ್ಗೆ ಉತ್ತರವನ್ನು ಹೇಳಬೇಕಾಗಿದೆ. ಸರ್ವಪಕ್ಷ ನಿಯೋಗವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಮೇಲೆ ಬಲವಾದ ಒತ್ತಡವನ್ನು ತಂದು ಇದನ್ನೆಲ್ಲಾ ಕ್ಯಾನ್ಸಲ್ ಮಾಡಿಸುವಂತಹ ಪರಿಸ್ಥಿತಿಯನ್ನು ತಂದು ರಾಜ್ಯದ ಜನತೆಗೆ ನ್ಯಾಯವನ್ನು ದೊರಕಿಸಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: (ಗುಲ್ಬರ್ಗಾ) ಅಧ್ಯಕ್ಷರೇ, ಪತ್ರಿಕೆ ವರದಿ ಆದಾರದ ಪ್ರಕಾರ, ಈಗಾಗಲೇ ನಮ್ಮ ವಿರೋಧ ಪಕ್ಷದ ಸ್ನೇಹಿತರು, ಆಂಧ್ರಪ್ರದೇಶದ ಸರ್ಕಾರ ಕೃಷ್ಣ ನದಿಯ ನೀರನ್ನು ಅಕ್ರಮವಾಗಿ ಬಳಸಲಿಕ್ಕೆ ದೊಡ್ಡ ಪ್ರಯತ್ನ ಮಾಡಿದ್ದಾರೆಂದು ಹೇಳಿದ್ದಾರೆ. ಇದನ್ನು ಕರ್ನಾಟಕದ ಜನ ಮತ್ತು ಕರ್ನಾಟಕ ಸರ್ಕಾರ ಹಾಗೂ ನಾವೆಲ್ಲರೂ ಕೂಡ ಆಂಧ್ರಪ್ರದೇಶದ ಸರ್ಕಾರದ ವರ್ತನೆಯನ್ನು ಖಂಡಿಸಬೇಕಾಗುತ್ತದೆ. ಅವರು ಬಹಳ ದೊಡ್ಡ ದುರಾಸೆಯನ್ನು ಇಟ್ಟುಕೊಂಡಿದ್ದಾರೆ. ಈಗಾಗಲೇ ಕೃಷ್ಣಾ ನದಿ ಬಚಾವತ್ ಅವಾರ್ಡ್ ಪ್ರಕಾರ ಅವರಿಗೆ 811 ಟಿ.ಎಂ.ಸಿ ಅವಾರ್ಡ್ ಆಗಿದೆ. ನಮಗೆ 729 ಟಿ.ಎಂ.ಸಿ ಆಗಿದೆ. ಆಂಧ್ರಪ್ರದೇಶ ಸರ್ಕಾರ 811 ಟಿ.ಎಂ.ಸಿ. ನೀರನ್ನು ಕಮ್ಯುಟೆಡ್ ಯೂಟಿಲೈಸೇಷನ್ ಆಗಿ ಮಾಡಿಕೊಳ್ಳುವುದಕ್ಕೆ ಈಗಾಗಲೇ ಪ್ರಯತ್ನ ಮಾಡಿದೆ ಮತ್ತು ಮಾಡಿಕೊಂಡಿದ್ದಾರೆ. ನಮ್ಮ ಇತ್ತೀಚಿನ ಸರ್ಕಾರಗಳು ಕೂಡ 729 ಟಿ.ಎಂ.ಸಿ ನೀರನ್ನು ಉಪಯೋಗ ಮಾಡಲಿಕ್ಕೆ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಇನ್ನೊಂದು ವರ್ಷ ಒಪ್ಪತ್ತಿನಲ್ಲಿ ಆ ಎಲ್ಲಾ 729 ಟಿ.ಎಂ.ಸಿ. ನೀರನ್ನು ಸದ್ಬಳಕೆ ಮಾಡಿಕೊಳ್ಳುತ್ತದೆ. ಅದರ ಬಗ್ಗೆ ಎರಡು ಮಾತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು 10 ವರ್ಷ ಬೇಕು. ಬೇಕಾದ ಹಣ ಲೆಕ್ಕಹಾಕಿ, ಖರ್ಚಾಗಿರುವ ಲೆಕ್ಕ ನೋಡಿದರೆ 10 ವರ್ಷವಾದರೂ ಇದನ್ನು ಪೂರ್ಣ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ: ಈಗಾಗಲೇ ಬಚಾವತ್ ಆಯೋಗದ ಅವಾರ್ಡಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಗೋದಾವರಿ ಡೈವರ್ಷನ್‌ನಿಂದ ಕರ್ನಾಟಕಕ್ಕೆ ಪೋಲಾವರಂ ಯೋಜನೆಯಿಂದ 23ಟಿ.ಎಂಸಿಯಷ್ಟು ನೀರು ನಮಗೆ ಬೇಕಾಗುತ್ತದೆ. ಅಂದರೆ, ಪೋಲಾವರಂ ಯೋಜನೆಯನ್ನು ಸಂಪೂರ್ಣವಾಗಿ ಆಂಧ್ರ ಸರ್ಕಾರವೇ ಹಣವನ್ನು ವೆಚ್ಚ ಮಾಡಿ ಆ. 80 ಟಿ.ಎಂ.ಸಿ ನೀರನ್ನು ಅವರು ಉಪಯೋಗ ಮಾಡಿಕೊಳ್ಳಬೇಕು. ಅಲ್ಲಿ 80ಟಿ.ಎಂ.ಸಿ. ನೀರು ಉಪಯೋಗವಾಗುತ್ತದೆಂದು ನಮಗೆ 23 ಟಿ.ಎಂ.ಸಿ ನೀರನ್ನು ನಮಗೆ ಕೊಡಬೇಕಾಗುತ್ತದೆ. ಆದರೆ, ಕಳೆದ ನಾಲ್ಕು ದಶಕಗಳಿಂದ ಆಂಧ್ರಪ್ರದೇಶ ಪೋಲಾವರಂ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಾ ಇಲ್ಲ. ಇದಕ್ಕೆ ಕಾರಣ ಪೋಲಾವರಂ ಯೋಜನೆಯನ್ನು ಕೈಗೆತ್ತಿಕೊಂಡರೆ 23 ಟಿ.ಎಂ.ಸಿ ನೀರನ್ನು ನಮಗೆ ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಹಿಂದೆ ಇದ್ದಂಥಹ ಯಾವುದೇ ಪಕ್ಷದ ಸರ್ಕಾರಗಳಿರಬಹುದು ತಮ್ಮ ರಾಜ್ಯದ ಹಿತಾಸಕ್ತಿಯನ್ನು ಇಟ್ಟುಕೊಂಡು, ದುರಾಸೆಗೆ ಬಿದ್ದಿದ್ದಾರೆ. ಅದನ್ನು ನಾವೆಲ್ಲರೂ ಕೂಡ ಪಕ್ಷ

ಬೇಧವಾಗಿ ಖಂಡಿಸಬೇಕಾಗುತ್ತದೆ. ಮತ್ತು ಅದರ ಜೊತೆಗೆ ಇದು ಕೇವಲ ನಮ್ಮ ಕರ್ನಾಟಕ ಸರ್ಕಾರದ್ದೇ ಎಲ್ಲಾ ತಪ್ಪು ಎಂದು ಹೇಳಿದರೆ ತಪ್ಪಾಗುತ್ತದೆ. ಇವತ್ತು ಅಧ್ಯಕ್ಷರೇ, ನಿಮಗೂ ಗೊತ್ತಿದೆ. ಕೃಷ್ಣಾನದಿ ಅಂತರ ರಾಜ್ಯ ವಿವಾದದಲ್ಲಿರುವಂತ ನದಿ ಈಗಾಗಲೇ ಮೇ. 2000 ಹೊತ್ತಿಗೆ ಎ ಸ್ಕೀಮ್ ಅನ್ನು ಸಂಪೂರ್ಣವಾಗಿ ಬಳಸಿಕೊಂಡು, ಉಳಿದ 400 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳುವುದಕ್ಕೆ ಮೂರು ರಾಜ್ಯಗಳಿಗೂ ಟ್ರಿಬ್ಯುನಲ್ ಆಗಬೇಕೆಂಬ ವಿಚಾರ ಎಲ್ಲರಿಗೂ ಗೊತ್ತಿದೆ. ಆ ಮೂಲಕ ಬಿ ಸ್ಕೀಮನ್ನು ತೆಗೆದುಕೊಳ್ಳಬೇಕಾದ್ದು. ಎಲ್ಲರಿಗೂ ಗೊತ್ತಿದ್ದಂತೆ, 2000 ಸಾಲಿನಿಂದ ರಾಜ್ಯ ಸರ್ಕಾರಗಳು, ಅವತ್ತಿನ ಜೆ.ಹೆಚ್.ಪಟೇಲ್ ಸರ್ಕಾರ ಇರಬಹುದು ಅಥವಾ ಎಸ್.ಎಂ.ಕೃಷ್ಣಾ ಸರ್ಕಾರ ಇರಬಹುದು. ಈ ಎರಡೂ ಸರ್ಕಾರಗಳು ಅವತ್ತಿನ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಲೇ ಬಂದವು. ನೀವು ಟ್ರಿಬ್ಯುನಲ್ ರಚನೆಯನ್ನು ಬೇಗ ಮಾಡಿ, ಬೇಗ ಮಾಡಿ ಎಂದು ಕೇಳು ತ್ತಲೇ ಬಂದವು. ನಾನು ಅವತ್ತು ಹೇಳಿದೆ. ನನ್ನ ಮಾತಿಗೆ ಮಾನ್ಯ ಜಗದೀಶ ಶೆಟ್ಟರ್‌ರವರು ಆಕ್ಷೇಪಣೆ ಮಾಡಿದರು. ನಾನು ಅವತ್ತು ವಾಜಪೇಯಿಯವರ ಬಗ್ಗೆ ಆಪಾದನೆ ಮಾಡಲಿಲ್ಲ. ನಾನು ಏನು ಹೇಳಿದೆ, ವಾಜಪೇಯಿಯವರ ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿ ಟ್ರಿಬ್ಯುನಲ್ಲನ್ನು ಮಾಡಿಕೊಡಲಿಲ್ಲ. ಏನು ಉದ್ದೇಶ? ಚಂದ್ರಬಾಬು ನಾಯ್ಡುರವರು ಆಗ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯಾಗಿದ್ದರು. ಸುಮಾರು 38 ಜನ ಸಂಸತ್ ಸದಸ್ಯರು ವಾಜಪೇಯಿ ಯವರಿಗೆ ಬೆಂಬಲ ಕೊಟ್ಟಿದ್ದರು.

–ಗೊಂದಲ–

ಅಧ್ಯಕ್ಷರು:– ಮಾನ್ಯ ಶೆಟ್ಟರ್ ಅವರೇ, ಈ ರೀತಿ ರಾಜಕೀಯ ಕಾರಣಗಳಿಗಾಗಿ ಮಧ್ಯೆ ಮಧ್ಯೆ ಪ್ರವೇಶ ಮಾಡಿದರೆ, ಅದರ ಮಹತ್ವವೇ ಹೋಗಿಬಿಡುತ್ತೆ. ನೀವೇನು ವಿಷಯ ಎತ್ತೀದ್ದೀರಿ, ಅದರ ಮಹತ್ವವೇ ಹೋಗಿಬಿಡುತ್ತೆ. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಬೇಕಾದರೆ ನೀವು ಹೇಳಿ

ಶ್ರೀ ಜಗದೀಶ್ ಶೆಟ್ಟರ್: ಇವರು ಅಪ್ಲಿಕೇಷನ್ ಯಾವಾಗ ಕೊಟ್ಟಿದ್ದರುಯಾವ ತಿಂಗಳಲ್ಲಿ ಆಗಬೇಕಾಗಿತ್ತು. ಅದನ್ನು ಅವರು ಹೇಳಲಿ, ಸುಮ್ಮನೆ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುವುದು ಬೇಡ.

ಶ್ರೀ ಬಸವರಾಜ ರಾಯರೆಡ್ಡಿ: 38 ಜನ ಟಿಡಿಪಿ ಸಂಸತ್ ಸದಸ್ಯರು ಬಾಹ್ಯ ಬೆಂಬಲ ಕೊಟ್ಟಿದ್ದರಿಂದ ವಾಜಪೇಯಿಯವರು ಚಂದ್ರಬಾಬು ನಾಯ್ಡುರವರ ಒತ್ತಾಯಕ್ಕೆ ಮಣಿಯುತ್ತಾ ಬಂದರು. 5ವರ್ಷಗಳ ಕಾಲ ಬಿ ಸ್ಕೀಮಿಗಾಗಿ ಟ್ರಿಬ್ಯುನಲ್ಲನ್ನು ನೇಮಕ ಮಾಡಲಿಲ್ಲ. ನಮ್ಮ ಸರ್ಕಾರದವರು ಹಲವಾರು ಮನವಿ

ಯನ್ನು ಸಲ್ಲಿಸಿದರು. ಆದರೆ ಈಗ ಡಾ. ಮನಮೋಹನಸಿಂಗ್ ರವರ ಹೊಸ ಸರ್ಕಾರ ಬಂದ ತಕ್ಷಣವೇ ಟ್ರಿಬ್ಯುನಲ್ಲನ್ನು ರಚನೆ ಮಾಡಿ ಮುಖರ್ಜಿಯವರ ನೇತೃತ್ವದಲ್ಲಿ ನ್ಯಾಯಾಧೀಶರ ನೇಮಕವಾಗಿದೆ. ಈ ಹಿನ್ನೆಲೆಯಲ್ಲಿ ಏನು ಟ್ರಾನ್ಸಾಕ್ಷನ್ ಪಿರಿಯಡ್ ಇದೆ. ಬಿ –ವಾಟರ್ ಸ್ಕೀಮಿನ ಟ್ರಿಬ್ಯುನಲ್ ಏನು ಪ್ರಾರಂಭವಾಗುತ್ತದೆ. ಅಷ್ಟರೊಳಗಾಗಿ ನಾವು ಇದನ್ನು ಟ್ರಿಬ್ಯುನಲ್ ಮುಂದು ತಂದು, ಸರ್ಕಾರ ಅಪೀಲು ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ, ಸುಪ್ರೀಂ ಕೋರ್ಟಿಗೆ ಹೋದರೂ ಪರವಾಗಿಲ್ಲ. ಇದನ್ನು ತ್ವರಿತವಾಗಿ ಏನು 4,480 ಕೋಟಿ ರೂ. ಟೆಂಡರ್ ಕರೆದಿದ್ದಾರೆ ಇದು ಅಕ್ರಮ ಅದಕ್ಕಾಗಿ ತ್ವರಿತವಾಗಿ ಮಾಡಬೇಕು. ಅದಕ್ಕಾಗಿ ತಪ್ಪು ರಾಜ್ಯ ಸರ್ಕಾರದ್ದಲ್ಲ. ಆವತ್ತಿನದಿವಸ ಕೇಂದ್ರದಲ್ಲಿ ವಾಜಪೇಯಿ ಯವರು ಒತ್ತಡಕ್ಕೆ ಮಣಿದರಲ್ಲ. ಅದರಿಂದ ಇವತ್ತು ನಮಗೆ ತೊಂದರೆಯಾಗಿದೆ. ಬಿ– ಸ್ಕೀಮ್ ಬಗ್ಗೆ ನಮಗೆ ತೊಂದರೆಯಾಗಿದೆ. ಅದಕ್ಕೆ ನಾವು ಇವತ್ತು ಎಲ್ಲರೂ ಕೂಡಿ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾಗುತ್ತದೆ. ಆ ಸಂದರ್ಭ ದಲ್ಲಿ ಇದನ್ನು ತ್ವರಿತವಾಗಿ ಟ್ರಿಬ್ಯುನಲ್ ಮುಂದೋ ಅಥವಾ ಸುಪ್ರಿಂ ಕೋರ್ಟಿಗೋ ಹೋಗಿ ನಮ್ಮ ಸರ್ಕಾರ ಕೂಡಲೇ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಈಗಾಗಲೇ ಸಾಕಷ್ಟು ವಿಷಯಗಳು ಪ್ರಸ್ತಾಪವಾಗಿದೆ. ನಾನೂ ಮೂರನೇ ಬಾರಿ ಶಾಸಕನಾಗಿ ಆಯ್ಕೆಯಾಗಿರುವಂಥ ಈ ಸಂದರ್ಭದಲ್ಲಿ ಕಾವೇರಿ ಬೇಸಿನ ಬಗ್ಗೆ ಕೃಷ್ಣಾ ಬೇಸಿನ ಬಗ್ಗೆ ಅಥವಾ ಗೋದಾವರಿ ಬೇಸಿನ್ ಬಗ್ಗೆ ಅಥವಾ ನಮ್ಮ ನೀರಾವರಿ ಯೋಜನೆಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯುವುದನ್ನು ಆಲಿಸಿದ್ದೇನೆ. ಎಲ್ಲಾ ಸಂದರ್ಭದಲ್ಲಿಯೂ, ಆಡಳಿತದಲ್ಲಿದ್ದಂತಹ ಹಿಂದಿನ ಕಾಂಗ್ರೆಸ್ ಸರ್ಕಾರ ಇರಬಹುದು ಅಥವಾ ಜನತಾದಳ ಸರ್ಕಾರ ಇರಬಹುದು. ಅಲ್ಲಿ ನಿಂತು ಮಾತನಾಡುವುದು ನೋಡಿದರೆ ಕರ್ನಾಟಕವನ್ನು ಇವರಿಗೆ ಗುತ್ತಿಗೆ ಕೊಟ್ಟು ಬಿಟ್ಟಿದ್ದೇವೆ. ಇವರಲ್ಲದೆ, ಇನ್ಯಾರೂ ಕರ್ನಾಟಕದ ಹಿತ ಪಾಲಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಆದರೆ, ವಾಸ್ತವಿಕವಾಗಿ, ಅದು ಕೇವಲ ಆ ವೇದಿಕೆಯ ರಾಜಕೀಯದ ಮಾತುಗಳಿಗಷ್ಟೇ ಸೀಮಿತವಾಗಿದೆಯೇ ಹೊರತು, ಕರ್ನಾಟಕದ ಹಿತವನ್ನು ಕಾಪಾಡಲಿಕ್ಕಾಗಿಲ್ಲವೆಂದು 10ವರ್ಷ ಶಾಸಕ ನಾಗಿರುವಂಥ ನನ್ನ ಅನುಭವ. ನಾವು ಮೇಲಿಂದ ಮೇಲೆ, ಮೇಲಿಂದ ಮೇಲೆ ಎಡುವುತ್ತಾ ಇದ್ದೇವೆ. ತಪ್ಪುತ್ತಾ ಇದ್ದೇವೆ. ನಾವು ಬೇರೆ ಬೇರೆ ರಾಜ್ಯದ ಹಿತಾ ಸಕ್ತಿಗೆ ನಾವು ಬಲಿಯಾಗುತ್ತಾ ಇರುವುದನ್ನು ಕಾಣುತ್ತಾ ಇದ್ದೇವೆ. ಕೇಂದ್ರ ಸರ್ಕಾರದಲ್ಲಿ ನಾವು ಒತ್ತಡ ತರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ರಾಜಕೀಯ

ಒತ್ತಡ ಏನು ಡೆವಲಪ್ ಮಾಡಬೇಕೋ ಅದು ನಮ್ಮಿಂದ ಆಗುತ್ತಾ ಇಲ್ಲ. ಒಟ್ಟು ಕರ್ನಾಟಕದ ಹಿತವನ್ನು ನಾವು ಕಾಪಾಡಿಕೊಳ್ಳುವುದಕ್ಕೆ ಆಗದೇ ಇರುವುದನ್ನು ನೋಡುತ್ತಿದ್ದೇವೆ. ಅದು ಕಾವೇರಿ ಬೇಸಿನ್‌ನಲ್ಲಿ ಆಗಿರುವುದನ್ನು ನೋಡಿದ್ದೇವೆ. ಕೃಷ್ಣಾ, ಗೋದಾವರಿ ಬೇಸಿನ್‌ನಲ್ಲಿ ಆಗುತ್ತಿರುವುದನ್ನು ನೋಡಿದ್ದೇವೆ. ಅಧ್ಯಕ್ಷರೆ, ತಮಿಳುನಾಡು ಇರಬಹುದು, ಮಹಾರಾಷ್ಟ್ರ ಇರಬಹುದು, ಆಂಧ್ರಪ್ರದೇಶ ಇರಬಹುದು. ಇವರೆಲ್ಲರೂ ನಮ್ಮನ್ನುಕಿತ್ತು ತಿನ್ನುತ್ತಿರುವುದನ್ನು ಕಾಣುತ್ತಾ ಇದ್ದೇವೆಯೇ ಹೊರತು ನಾವು ನಮ್ಮನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಏನು ಬೇಕೋ ಅದನ್ನು ಮಾಡಿಕೊಳ್ಳಲು ಸಿದ್ಧವಿಲ್ಲದಂತ ಸ್ಥಿತಿಯನ್ನು ಅನುಭವಿಸುತ್ತಿದ್ದೇವೆ. ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಬೇಕೆಂದಿದ್ದೇನೆ. ರಾಜಕೀಯ ಕಾರಣಕ್ಕೋಸ್ಕರವಾಗಿಯೇ ಗೊತ್ತಿದ್ದು, ಗೊತ್ತಿಲ್ಲದೆ ಇರುವಂತ ರೀತಿಯಲ್ಲಿ ಕಣ್ಣುಚ್ಚಿ ಆಂಧ್ರ ಸರ್ಕಾರ ಈ ಯೋಜನೆಗಳನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಕುಳಿತಿದೆಯೆಂದು ಹೇಳಲೇಬೇಕಾದಂತ ಅಗತ್ಯತೆ ಇದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಮಾನ್ಯ ಕಾನೂನು ಸಚಿವರಾದ ಹೆಚ್.ಕೆ.ಪಾಟೀಲರು, ಮಾಜಿ ನೀರಾವರಿ ಸಚಿವರೂ ಇದ್ದಾರೆ. ಅವರೊಂದು ಪುಸ್ತಕ ಬಿಡುಗಡೆ ಮಾಡಿದರು. ಬಹಳ ದೊಡ್ಡ ಪ್ರಚಾರ ಆಯಿತು. ಅದು ಕೇಳಿ ಕೃಷ್ಣೇಯ ಕಣ್ಣೀರು ಎಂತಲೋ ಅಥವಾ ಕೇಳಿ ಕೃಷ್ಣೆಯ ಕೂಗು ಎಂತಲೋ ಬರೆದರು. ಈ ವಿಷಯ ಇವತ್ತು ಪತ್ರಿಕೆಯಲ್ಲಿ ಬಂದ ತಕ್ಷಣ ಇವತ್ತು ಇನ್ನೊಂದು ನಿರೀಕ್ಷೆ ಮಾಡಿದ್ದೇನೆ. ಈ ಸದನದಲ್ಲೂ ನಿರೀಕ್ಷೆ ಮಾಡಿದ್ದೇನೆ. ಕೃಷ್ಣೆಯ ಈ ಕೂಗನ್ನು ಕೇಳಲಿಕ್ಕೆ ಆಗದೇ ಇರುವಂಥ ಸ್ಥಿತಿಯಲ್ಲಿರುವಂಥವರು ಸರ್ಕಾರದಲ್ಲಿ, ಹೆಚ್. ಕೆ. ಪಾಟೀಲರು ತಮ್ಮ ಕೂಗನ್ನಾದರೂ ಈ ಬಗ್ಗೆ, ಸರ್ಕಾರದಲ್ಲಿ ಆಗುತ್ತಾ ಇರುವುದು ಇದು ಸರಿಯಲ್ಲ. ನಮ್ಮ ಸರ್ಕಾರದಲ್ಲಿ ಅವರು ಭಾಗಿಗಳಾಗಿದ್ದು, ಕಾನೂನು ಸಚಿವರಾಗಿದ್ದು, ಈ ಸರ್ಕಾರ ಈ ರೀತಿ ಹೋಗುವುದಕ್ಕೆ ನಾನು ಬಿಡುವುದಿಲ್ಲ ಎಂಬ ದೃಢ ನಿಲುವು ತೆಗೆದುಕೊಂಡು ರಾಜ್ಯದ ಹಿತ ಕಾಪಾಡಿಕೊಳ್ಳುವುದಕ್ಕೆ ನಿಜವಾಗಿಯೂ ಆ ರೀತಿಯ ರಾಜಕೀಯ ನಿರ್ಧಾರವನ್ನು ಅವರು ತೋರಿಸಲಿ. ಅವರು ಮನೆ ಬಿಟ್ಟು ಹೋಗಿದ್ದರ ಬಗ್ಗೆ ಪತ್ರಿಕೆಯಲ್ಲಿ ನಮಗೆಲ್ಲಾ ಸಂತೋಷವಾಯಿತು. ಇವತ್ತಿಗೂ ಕಾಂಗ್ರೆಸ್‌ನಲ್ಲಿ ಅಪರೂಪಕ್ಕೆ ಇಂತಹ ಒಬ್ಬ ವ್ಯಕ್ತಿಗಳು ಇದ್ದಾರಲ್ಲಾ ಎಂದು ಅನಿಸುತ್ತಾ ಇತ್ತು. ಈಗ ರಾಜ್ಯದ ಹಿತ ಕಾಪಾಡಬೇಕು. ಈ ಕೃಷ್ಣೆಯ ಕೂಗು, ಇದನ್ನು ನಾನು ಕೇಳಿಸಿಕೊಂಡಿದ್ದೇನೆಂದು ಹೆಚ್. ಕೆ. ಪಾಟೀಲರು ಹೇಳಲಿ. ಅವರು ಮಾಜಿ ನೀರಾವರಿ ಸಚಿವರು. ಆ ಕೃಷ್ಣೆಯ ಕೂಗು ಪುಸ್ತಕವನ್ನು ಅವರೇ ಬರೆದಿರುವುದು. ಆ ಕೂಗು ಅವರಿಗೇ ಕೇಳುತ್ತಾ ಇಲ್ಲವೆಂದರೆ, ಇನ್ನಾರಿಗೆ ಕೇಳಿಸಲಿಕ್ಕೆ ಸಾಧ್ಯ ? ಹಾಗಾಗಿ, ಆ ಕೂಗನ್ನು

ಅವರು ಸರ್ಕಾರಕ್ಕೆ ಮುಟ್ಟಿಸಲಿ. ಕೇಂದ್ರ ಸರ್ಕಾರಕ್ಕೆ ಮುಟ್ಟಿಸಲಿ. ಸುಪ್ರೀಂ ಕೋರ್ಟಿಗೆ ಟ್ರಿಬ್ಯುನಲ್‌ಗೆ ಇದೆಲ್ಲವನ್ನೂ, ಮುಟ್ಟಿಸಲಿ. ಆ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರದಲ್ಲಿದ್ದು, ತೋರಿಸಬೇಕಾದಂಥ ಅಗತ್ಯತೆ ಇದೆ. ಮಾನ್ಯ ಮಾಜಿ ಪ್ರಧಾನಿಗಳು ನಮ್ಮ ರಾಜ್ಯದವರೇ ಇದ್ದಾರೆ. ಅವರ ರಾಜಕೀಯ ಅನುಭವದ ಬಗ್ಗೆ, ಅವರು ದೇಶದ ಅಭಿವೃದ್ಧಿಗೆ ಕೊಡುಗೆ ಕೊಟ್ಟಿರುವುದರ ಬಗ್ಗೆ ನಾನು ಮಾತನಾಡಲು ಬಯಸುವುದಿಲ್ಲ. ಆದರೆ, ಅನೇಕ ಸಂದರ್ಭದಲ್ಲಿ ನನಗೇನೆನಿಸುತ್ತದೆಂದರೆ, ನಮಗೆ, ಬೆಂಗಳೂರು – ಮೈಸೂರು ಕಾರಿಡಾರೆ ಮುಖ್ಯವಾಗುತ್ತದೆ ಹೊರತು, ರಾಜ್ಯದ ಹಿತವನ್ನು ಕಾಪಾಡಿಕೊಳ್ಳುವಂತಹ ಇಂತಹ ನೀರಾವರಿ ಯೋಜನೆ ಏಕೆ ಮುಖ್ಯವಾಗುವುದಿಲ್ಲ ಎಂದು ? ಅವರು ಜೆ. ಡಿ. ಎಸ್.ನ ರಾಷ್ಟ್ರೀಯ ಅಧ್ಯಕ್ಷರೂ ಇದ್ದಾರೆ. ಆದರೆ, ಅವರಿಂದ ಇದರ ಬಗ್ಗೆ ಕೂಗು ಬರುತ್ತಾ ಇಲ್ಲ. ರಾಜ್ಯದ ಹಿತ ಕಾಪಾಡುವುದಕ್ಕೆ, ಕಾಂಗ್ರೆಸ್‌ಗೆ ಜೆ. ಡಿ. ಎಸ್.ನ ನಾಯಕರುಗಳು ಎಚ್ಚರಿಕೆಯನ್ನು ಕೊಡಲಿ. ಈ ರೀತಿ ರಾಜ್ಯದ ಹಿತ ಬಲಿಯಾಗುತ್ತದೆ ಎನ್ನುವ ಮಾತನ್ನು ಬಲವಾಗಿ ಹೇಳಲಿ. ಆದರೆ, ಅವರುಹೇಳುತ್ತಾ ಇಲ್ಲ, ಏಕೋ ಗೊತ್ತಿಲ್ಲ. ರಾಜ್ಯದ ಹಿತ ಕಾಪಾಡುವುದಕ್ಕೆ ಕಾಂಗ್ರೆಸ್ಸಿಗೆ ಜೆಡಿಎಸ್‌ನ ನಾಯಕರುಗಳು ಎಚ್ಚರಿಕೆ ಕೊಡಲಿ, ಅವರು ಈ ರೀತಿ ರಾಜ್ಯದ ಹಿತ ಬಲಿಯಾಗುತ್ತಿದೆ ಎನ್ನುವಂತಹ ಮಾತನ್ನು ಬಲವಾಗಿ ಹೇಳಲಿ, ಅವರೂ ಹೇಳುತ್ತಾ ಇಲ್ಲ ಏಕೋ ಗೊತ್ತಿಲ್ಲ. ಕಾಂಗ್ರೆಸ್‌ನಲ್ಲಿ ನೋಡಿದರೆ ಈ ಸ್ಥಿತಿ, ಜೆಡಿಎಸ್‌ನಲ್ಲಿ ನೋಡಿದರೆ ಆ ಸ್ಥಿತಿ. ಒಟ್ಟಾರೆಯಾಗಿ ಅಧಿಕಾರಕೋಸ್ಕರವಾಗಿ ಇವರು ರಾಜ್ಯದ ಹಿತ ಬಲಿ ಕೊಟ್ಟು ಆಂಧ್ರದ ರಾಜಕೀಯ ಒತ್ತಡಕ್ಕೆ ಇರುವ ಕಾರಣಕ್ಕಾಗಿ ಸುಮ್ಮನೆ ಇರುತ್ತಾರೆ ಎನ್ನುವಂತಹ ಒಂದು ಅಭಿಪ್ರಾಯಕ್ಕೆ ನಾವು ಬರಬೇಕಾದಂತಹ ಅಗತ್ಯತೆ ಇದೆ. ನಾನು ಇಲ್ಲಿ ನಮ್ಮ ಮೊದಲನೆಯ ಬಚಾವತ್ ಅವಾರ್ಡಿನ್ ವಿಷಯಗಳಿಗೆ ಹೋಗುವುದಿಲ್ಲ. ನಾನೂ ಸಾಕಷ್ಟು ವಿವರಗಳನ್ನು ನೋಡಿದೆ. ಮಾನ್ಯ ಅಧ್ಯಕ್ಷರೇ 734 ಟಿಎಂಸಿ ಯಲ್ಲಿ ನಮಗೆ 550 ಟಿಎಂಸಿ ನೀರನ್ನು ಸಹ ಬಳಸಿಕೊಳ್ಳುವುದಕ್ಕೆ ಆಗಲಿಲ್ಲ, ಈಗತಾನೆ ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಇನ್ನೂ 10 ವರ್ಷ ಬೇಕಾಗುತ್ತದೆ. ಮೊದಲನೆಯ ಅವಾರ್ಡ್ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಸವಿಸ್ತಾರವಾಗಿ ಎಲ್ಲಾ ವಿವರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆಂಧ್ರದವರು ಹಂಗಲ್ಲ ಅವರು ತಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಂಡು ಈಗ ಟ್ರಿಬ್ಯುನಲ್‌ನಲ್ಲಿ ಇನ್ನೂ ಕೇಸ್‌ಗಳು ಪೆಂಡಿಂಗ್ ಇರುವಾಗ ಈಗ ಅವರು ಇನ್ನಷ್ಟು ಹೆಚ್ಚು ಬಳಕೆಯನ್ನು

ಮಾಡಿಕೊಳ್ಳಲು ಹೊರಟಿದ್ದಾರೆ. ಇಲ್ಲಿ ವಿವರವಾದಂತಾದ್ದು ಇದೆ, ಇದರ ಎಸ್ಟಿಮೇಟೆಡ್ ಕಾಸ್ಟ್ ಜೊತೆಗೆ ಈ ಸಿಡಬ್ಲ್ಯೂಸಿ ಕ್ಲಿಯರೆನ್ಸ್ ಇರಬಹುದು, ಪರಿಸರ ಇಲಾಖೆಯ ಕ್ಲಿಯರೆನ್ಸ್ ಇರಬಹುದು ಆರ್ ಅಂಡ್ ಆರ್ ಕ್ಲಿಯರೆನ್ಸ್, ಪ್ಲಾನಿಂಗ್ ಕಮೀಷನ್ ಕ್ಲಿಯರೆನ್ಸ್, ಇದು ಯಾವುದೂ ಇಲ್ಲ ಈ ಆಂಧ್ರದ ಯೋಜನೆಗಳಿಗೆ, ಆದರೂ ಟೆಂಡರ್ ಕರೆದು ಆಗಲೇ ಗುತ್ತಿಗೆದಾರರಿಗೆ ಕೊಟ್ಟರು, ಅಷ್ಟೇ ಅಲ್ಲ, ಇಂಟರ್ ಸ್ಟೇಟ್ ಇಶ್ಯೂನಲ್ಲಿ ಇದು ಇನ್ನೂ ಟ್ರಿಬ್ಯುನಲ್‌ನಲ್ಲಿ ಅವಾರ್ಡ್ ಆಗಿಲ್ಲ ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ದಾಖಲೆಗಳಲ್ಲಿ ಇದೆ. ಇಷ್ಟೆಲ್ಲಾ ಇದ್ದು ಆರು ತಿಂಗಳಿಂದ ಇವರಿಗೆ ಗೊತ್ತಿದ್ದು ಗೊತ್ತಿಲ್ಲದಂತೆ ಇವರು ಮೊಸಳೆ ಕಣ್ಣೀರು ಹಾಕಿಕೊಂಡು ಅಧಿಕಾರದ ಬಗ್ಗೆ ಇಲ್ಲಿ ಕೂಡಿಕೊಂಡು ಇವರು ರಾಜ್ಯದ ಹಿತ ಬಲಿ ಕೊಡುತ್ತಿರುವುದನ್ನು ಮಾನ್ಯ ಅಧ್ಯಕ್ಷರೇ ವಿರೋಧಿಪಕ್ಷದಲ್ಲಿದ್ದು ನಾವು ಇದನ್ನು ಸಹಿಸಿಕೊಳ್ಳುವುದ್ಕಕೆ ಆಗುವುದಿಲ್ಲ.

ರಾಜೋರಿ ಬಂಡನಾಲಾದ ಬಗೆಗೆ ನಾನೇ ಮಾತನಾಡಿದೆ, ಕೆಲಸ ನಿಲ್ಲಿಸಿದ್ದಾರೆ ಇವತ್ತು ನಾವು ನೀರಿನಿಂದ ವಿದ್ಯುತ್ ಉತ್ಪಾದನೆ ಮಾಡಿ,ನಾವು ನೀರನ್ನು ಮತ್ತೆ ಆಂದ್ರಕ್ಕೆ ಕೊಡುತ್ತಿದ್ದೇವೆ.ವಿದ್ಯುತ್ ಉತ್ಪಾದನೆ ಮಾಡಿದರೆ ಏನು ನೀರನ್ನು ಬಳಕೆ ಮಾಡಿಕೊಂಡಂತೆ ಆಗುತ್ತದೇನು? ನಾವು ವಿದ್ಯುತ್‌ಗೋಸ್ಕರವಾಗಿ ನೀರನ್ನು ಬಳಸಿಕೊಂಡರೆ ಆಂಧ್ರದವರು ಕೆಲಸ ನಿಲ್ಲಿಸಿದರು.ಅದರಂತೆ ತಮಗೂ ಗೊತ್ತಿದೆ ಪರಗೋಡು ಯೋಜನೆ, ಇಲ್ಲಿಯೂ ಕೆಲಸ ನಿಂತಿದೆ.ಪ್ರತಿ ಹಂತದಲ್ಲೂ ಹೀಗೆ ರಾಜ್ಯದ ಯೋಜನೆಗಳಿಗೆ ತಡೆ ಹಾಕುವುದನ್ನು ನಾವು ಕರ್ನಾಟಕದ 225 ಜನ ಸದಸ್ಯರು ಒಂದಾಗಿದ್ದು ಬಲವಾಗಿ ಕೇಂದ್ರಕ್ಕೆ,ಆಂಧ್ರಕ್ಕೆ ಅಕ್ಕಪಕ್ಕದ ರಾಜ್ಯಗಳಿಗೆ ನಮ್ಮ ಹಿತವನ್ನು ಬಲಿ ತೆಗೆದುಕೊಳ್ಳಲು ಯಾರು ಪ್ರಯತ್ನ ಪಡುತ್ತಿದ್ದಾರೋ ಅವರಿಗೆ ಅವಕಾಶ ಕೊಡುವುದಿಲ್ಲ ಎನ್ನುವಂತಹ ಒಂದು ಒಗ್ಗಟ್ಟಿನ ಬಲವಾದ ರಾಜಕೀಯ ಇಚ್ಛಾಶಕ್ತಿಯ ಧ್ವನಿ ಇಲ್ಲಿಂದ ನಾವು ಕಳುಹಿಸಬೇಕಾಗಿದೆ. ಇಲ್ಲಿ ಪಕ್ಷಾತೀತವಾಗಿ ಈ ಧ್ವನಿಯನ್ನು ನಾವು ಹೊರಹೊಮ್ಮಿಸ ಹೋದರೆ ನಾವು ಮತ್ತೆ ಮತ್ತೆ ರಾಜಕೀಯ ಕಾರಣಕ್ಕೋಸ್ಕರವಾಗಿ ನಮ್ಮ ರಾಜ್ಯದ ಹಿತವನ್ನು ಬಲಿ ಕೊಡುವಂತಾದ್ದು ಆಗುತ್ತದೆ. ಮಾನ್ಯ ಅಧ್ಯಕ್ಷರೇ ಇದು ನನಗೆ ಬಹಳ ನೋವಿನ ಮಾತು ಮಾನ್ಯ ಹೆಚ್.ಕೆ ಪಾಟೀಲರು ಮಂತ್ರಿಗಳಾಗಿ ಹಿಂದಿನ ನೀರಾವರಿ ಸಚಿವರಾಗಿ ಇಲ್ಲಿದ್ದಾರೆ. ನಾನು ಹಿಂದೆ ರಾಜೋರಿ ಬಂಡಾ ನಾಲಾ ಬಗ್ಗೆ ಮಾತನಾಡುವಾಗಲೂ ಕೇಳಿದೆ. ಯೋಜನೆಗಳು ಆಂಧ್ರದ ಪಾಲಾಯಿತು ಅದರ ಸದುಪಯೋಗವನ್ನು ಅವರು ಮಾಡಿಕೊಳ್ಳುತ್ತಿದ್ದಾರೆ. ಇಷ್ಟೇ ಅಲ್ಲ, ಗುತ್ತಿಗೆದಾರರು ಆಂಧ್ರದವರೇ, 5 ವರ್ಷದಲ್ಲಿ ಯಾವ ಯಾವ ಗುತ್ತಿಗೆದಾರರು

ಯಾವ ಯಾವ ಯೋಜನೆಯಲ್ಲಿ ಮಾಡಿದ್ದಾರೆ ಎನ್ನುವ ವಿವರ ಕೊಡಲಿ, ಎಲ್ಲಾ ಆಂಧ್ರದವರಿಗೆ ಗುತ್ತಿಗೆ ಕೊಡುವುದು, ಕರ್ನಾಟಕದಲ್ಲಿ ಗುತ್ತಿಗೆದಾರರು ಇಲ್ಲವೇನು? ಆಂಧ್ರಕ್ಕೆ ಏಕೆ ಇವರು ಈ ರೀತಿ ಮಣೆ ಹಾಕುತ್ತಿದ್ದಾರೆ? ಏಕೆ ಅವರ ಬಗ್ಗೆ ಈ ರೀತಿ ಸಿಂಪಥಿಯನ್ನು ತೋರಿಸುತ್ತಾರೆ. ಕಾಳಜಿಯನ್ನು ಅವರಿಗೆ ತೋರಿ ಸುತ್ತಿರುವುದು, ಗುತ್ತಿಗೆದಾರರು ಅವರೇ, ಕೃಷ್ಣಾ ಬೇಸಿನ್‌ನಲ್ಲಿ ನನಗೆ ಗೊತ್ತಿದೆ ಆ ಜಮೀನನ್ನು ಆಂಧ್ರದವರೇ ಕೊಂಡುಕೊಂಡರು. ಜಮೀನು ಆಂಧ್ರದವರು ಕೊಂಡುಕೊಂಡರು. ಅವರಿಗೆ ಆಂಧ್ರದವರಿಗೆ ನಮ್ಮ ಕರ್ನಾಟಕ ಅಂದ್ರೆ ಅವರೂ ಮನುಷ್ಯರೇ, ನಾವು ಇಡೀ ವಸುದೇವ ಕುಟುಂಬ ಎನ್ನುವ ಆ ಭಾವನೆಯಲ್ಲಿ ನೋಡಬೇಕಾದುದು ಸರಿ. ಅದರೆ ನಮ್ಮ ಅಸ್ಥಿತ್ವ ಉಳಿವಿಗೋಸ್ಕರವಾಗಿ, ನಮ್ಮ ರಾಜ್ಯದ ಹಿತಕೋಸ್ಕರವಾಗಿ ನಾವು ಅಭಲರು ಎಂದು ಹೇಳಿಸಿಇದ್ದಾರೆ ನಾವೆಲ್ಲ ಒಂದು ದೇಶದ ಪ್ರಜೆಗಳಾಗಿದ್ದೇವೆ. ನಮ್ಮ ಈ ಸಂವಿಧಾನಾತ್ಮಕ ವ್ಯವಸ್ಥೆಯಲ್ಲಿ ನಾವು ಅವರಿಗೆ ಕೊಡಬೇಕಾದಂತಹ ಯೋಗ್ಯವಾದ ಸಹಕಾರವನ್ನು, ಗೌರವವನ್ನು ಕೋಡೋಣ. ಆದರೆ ನಮ್ಮ ಹಿತವನ್ನು ಬಲಿ ಕೊಟ್ಟು ಅವರಿಗೆ ಕೊಡಬೇಕಾದಂತಹ ಅಗತ್ಯತೆ ಇಲ್ಲ. ಆ ಒಂದು ಹಿನ್ನೆಲೆಯಲ್ಲಿ ಈಗ ಈ ಸರ್ಕಾರ ಜೆಡಿಎಸ್, ಕಾಂಗ್ರೆಸ್‌ನ ಸಮಿಶ್ರ ಸರ್ಕಾರದ ಫಲಶ್ರುತಿ ದಿನದಿಂದ ದಿನಕ್ಕೆ ಶೂನ್ಯ ಅಲ್ಲ ಇದು ಮೈನೆಸ್ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಹಾಗಾಗಿ ಈ ಒಂದು ಪ್ರಯೋಗ ಸಾಕು, ಇನ್ನು ಮೇಲೆ ಈ ಪ್ರಯೋಗ ಜನರೇ ನಿಲ್ಲಿಸುವಂತಹ ಸ್ಥಿತಿಗೆ ಬಂದಿದ್ದಾರೆ. ಹಾಗಾಗಿ ಈ ಪ್ರಯೋಗದಿಂದ ಒಳ್ಳೆಯ ಫಲಶ್ರುತಿ ಇಲ್ಲ ಎನ್ನುವಂತಾದ್ದು ರಾಜ್ಯದ ಜನತೆಗೆ ಸ್ಪಷ್ಟವಾಗಿದೆ. ಹಾಗಾಗಿ ರಾಜ್ಯದ ಹಿತದೃಷ್ಟಿಯಿಂದ, ಕಾಪಾಡಿಕೊಳ್ಳಬೇಕಾದ ಅಗತ್ಯತೆ ಇರುವುದರಿಂದ ಒಂದು ಧೃಡವಾದ ರಾಜಕೀಯ ಇಚ್ಛಾಶಕ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಜಲಸಂಪನ್ಮೂಲ ಸಚಿವರು, ಎಲ್ಲಾ ಸಚಿವರುಗಳು ಒಂದಾಗಿ ರಾಜ್ಯದ ಹಿತದ ಬಗ್ಗೆ ಯೋಜನೆ ಮಾಡುವಂತೆ ಆಗಲಿ, ಪ್ರಧಾನ ಮಂತ್ರಿಗಳನ್ನು ರಾಷ್ಟ್ರಪತಿಗಳನ್ನು, ಸುಪ್ರೀಂಕೋರ್ಟ್‌ನ್ನು, ಟ್ರಿಬ್ಯುನಲ್‌ನ್ನು ಎಲ್ಲಾ ರೀತಿಯಲ್ಲಿ ನಾವು ಬಲವಾಗಿ ಪ್ರತಿಭಟಿಸಿ ನಾವು ಕರ್ನಾಟಕ ನಮ್ಮ ಧ್ವನಿ, ಮತ್ತೊಮ್ಮೆ ನಮ್ಮ ಅಕ್ಕಪಕ್ಕದ ರಾಜ್ಯಗಳಿಗೆ ನಮ್ಮ ಧ್ವನಿ ಗೊತ್ತಾಗಬೇಕು, ಆ ರೀತಿಯಲ್ಲಿ ಇದೊಂದು ಪ್ರಯತ್ನ ಆಗಬೇಕು ಎನ್ನುವಂತಹ ಮಾತನ್ನು ಹೇಳಿ, ಈ ಸರ್ಕಾರ ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸದೇ ಇರುವುದರ ಬಗ್ಗೆ ನಾನು ಸರ್ಕಾರದ ನಿಲುವನ್ನು ಖಂಡಿಸುತ್ತಾ, ಇನ್ನಾದರೂ ಮೇಲೆದ್ದು ತಾವು ನಮ್ಮ ಹಿತವನ್ನು ಕಾಪಾಡುವುದಕ್ಕೆ ಮುಂದಾಗಬೇಕು ಎಂದು ಹೇಳಿ

ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸಾಕಷ್ಟು ಚರ್ಚೆಯಾಗಿದೆ. ಇನ್ನೂ ಅನೇಕ ಪ್ರಮುಖವಾದ ವಿಷಯಗಳಿವೆ. ತಾವುಗಳು ಆ ಭಾಗದಿಂದ ಬಂದಿದ್ದೀರಿ ಎಂದು ಅವಕಾಶ ಕೊಡುತ್ತಾ ಹೋದರೆ ಇಡೀ ದಿನ ಇದೇ ವಿಷಯ ಚರ್ಚೆಯಾಗುತ್ತದೆ. ಈಗ ತಾವು ಏನು ಹೇಳಬೇಕೋ ಅದನ್ನೆಲ್ಲಾ ನಿಮ್ಮ ನಾಯಕರುಗಳು ಹೇಳಿದ್ದಾರೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈಗ ಸರ್ಕಾರದ ಉತ್ತರ ಕೇಳೋಣ.

(ಗೊಂದಲ)

ಶ್ರೀ ಪಾಪರೆಡ್ಡಿ:- ಮಾನ್ಯ ಅಧ್ಯಕ್ಷರೇ ನಾನು ಆ ಭಾಗದ ಶಾಸಕ ನಾನು ಮಾತನಾಡಲಿಲ್ಲ ಅಂದರೆ...

(ಗೊಂದಲ)

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲಾ ವಿಚಾರಗಳನ್ನು ನಿಮ್ಮ ನಾಯಕರುಗಳು ಹೇಳಿದ್ದಾರೆ. ತಾವು ಅದನ್ನೇ ಬೇರೆ ರೀತಿಯಲ್ಲಿ ಹೇಳುತ್ತೀರಿ ಅಷ್ಟೇ. ಇನ್ನೂ ಅನೇಕ ವಿಚಾರಗಳು ಚರ್ಚೆ ಮಾಡಲು ಇವೆ ಕುಳಿತುಕೊಳ್ಳಿ. ಈಗಾಗಲೇ ಒಂದು ಗಂಟೆ ಚರ್ಚೆ ಮಾಡಿದ್ದೇವೆ.'

(ಗೊಂದಲ)

ಶ್ರೀ ಪಾಪರೆಡ್ಡಿ:- ಮಾನ್ಯ ಅಧ್ಯಕ್ಷರೇ ನಾನು 5 ನಿಮಿಷ ಮಾತನಾಡುತ್ತೇನೆ ನಾನು ಆ ಭಾಗದ ಶಾಸಕ...

(ಗೊಂದಲ)

ಅಧ್ಯಕ್ಷರು:- ದಯಮಾಡಿ ಕುಳಿತುಕೊಳ್ಳಬೇಕು ಎಲ್ಲಾ ವಿಚಾರಗಳನ್ನು ನಿಮ್ಮ ನಾಯಕರುಗಳು ಹೇಳಿದ್ದಾರೆ. ಆದ್ದರಿಂದ ಮತ್ತೆ ಮತ್ತೆ ಅದೇ ವಿಚಾರ ಮಾತನಾಡುವುದು ಬೇಡ. ಸರ್ಕಾರವನ್ನು ಕೇಳೋಣ ಏನು ಹೇಳುತ್ತಾರೆ ಅಂತ

(ಗೊಂದಲ)

ಅಧ್ಯಕ್ಷರು:- ಒಂದು ಗಂಟೆ ಚರ್ಚೆಯಾಗಿದೆ. ಇನ್ನೂ ಉತ್ತರ ಆಗಬೇಕು ಎಲ್ಲರೂ ಈ ತರಹ ಮಾಡಿದರೆ ಹೇಗೆ? ಇದು ಆಗುವುದಿಲ್ಲ. ಇದು ಏನಾಗಿದೆ ಅಂದರೆ ನಿಮ್ಮ ರೀತಿಯಲ್ಲಿಯೇ ನಡೆಯಬೇಕು ಎನ್ನುವುದಾದರೆ ಸಭೆಯನ್ನು ಹೇಗೆ ನಡೆಸುವುದು? ಅದಕೋಸ್ಕರವೇ ಆಂಧ್ರದವರು ಈ ತರಹ ಮಾಡುತ್ತಿರುವುದು ಆಂಧ್ರದವರು ಮಾಡುತ್ತಿರುವುದೇ ಇದಕ್ಕೆ ಇದು ನನಗೆ

ಅರ್ಥವಾಗುತ್ತಿಲ್ಲ. ಎಲ್ಲರಿಗೂ ಹೇಗೆ ಅವಕಾಶ ಮಾಡಿ ಕೊಡುವುದಕ್ಕೆ ಆಗುತ್ತದೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:_ ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾನ್ಯ ಶ್ರೀ ರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು ಮಾನ್ಯ ಹೆಗಡೆಯವರು, ಜ್ಞಾನೇಂದ್ರರವರು ಈ ಕಡೆಯಿಂದ ರಾಯರೆಡ್ಡಿಯವರು ಎಲ್ಲರೂ ಮಾತನಾಡಿದ್ದಾರೆ. ಇನ್ನೂ ಒಬ್ಬಿಬ್ಬರು ಇದ್ದರೆ ಮಾತನಾಡಲಿ, ನಾನು ಇದಕ್ಕೆ ಒಂದು ಸವಿಸ್ತಾರವಾದಂತಹ ಸ್ಟೇಟ್‌ಮೆಂಟ್ ಕೊಡಬೇಕೆಂದು ಇದ್ದೇನೆ. ಮಧ್ಯಾಹ್ನದ ಮೇಲೆ ಕೊಡುತ್ತೇನೆ. ಯಾರಾದರೂ ಒಬ್ಬಿಬ್ಬರು ಇದ್ದರೆ ಮಾತನಾಡಿ ಬೆಳಕು ಚೆಲ್ಲುವುದಿದ್ದರೆ ಚೆಲ್ಲಲಿ. ಆದರೆ ಸ್ವಲ್ಪ ನಮ್ಮ ಹೆಚ್.ಕೆ.ಪಾಟೀಲರು ಹೇಳಿದಂತೆ ಇದನ್ನುರಾಜ್ಯದ ಹಿತದೃಷ್ಟಿಯಿಂದ, ರಾಜ್ಯ ಹಿತವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಏನೇ ಸಲಹೆಗಳು ಬರಲಿ, ಅಥವಾ ಟೀಕೆಗಳು ಬರಲಿ ಅದನ್ನು ನಾವು ಸ್ವೀಕಾರ ಮಾಡುತ್ತೇವೆ. ಆದರೆ ಇದಕ್ಕೆ ಸ್ವಲ್ಪ ರಾಜಕೀಯ ಬೆರೆಸುವುದು ಬೇಡ. ನಾವು ನಿಷ್ಪಕ್ಷಪಾತವಾಗಿ ಮತ್ತು ರಾಜ್ಯದ ಹಿತದೃಷ್ಟಿಯಿಂದ ಏನೇ ಸಲಹೆ ಬಂದರೂ ಕೂಡ ಅದನ್ನು ತೆಗೆದುಕೊಂಡು ಅದಕ್ಕೆ ಒಂದು ಸವಿಸ್ತಾರವಾದ ಉತ್ತರ ಕೊಡಬೇಕಾಗುತ್ತದೆ. ಮಧ್ಯಾಹ್ನದ ಮೇಲೆ ತಯಾರು ಮಾಡಿ ಕೊಡುತ್ತೇನೆ. ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಈಗ ಬೇರೆ ಬೇರೆ ವಿಚಾರಗಳು ಇವೆ. ಯಾರಿಗೆ ಅವಕಾಶ ಕೊಡಬೇಕು ಅಂತ ಹೇಳಿ ನಿಮ್ಮ ಪಕ್ಷದಿಂದ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಗಂಭೀರವಾಗಿ ಚರ್ಚೆಯಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:– ನಾವು ಚರ್ಚೆಗೆ ಮೊಟಕುಗೊಳಿಸುತ್ತೇವೆ ಎನ್ನುವುದು ಬೇಡ ಒಂದು 5 ನಿಮಿಷ ಕೊಡಿ. ಅವರು ಎಷ್ಟು ಬೈಯುತ್ತಾರೋ ಬೈಯಲಿ.

ಅಧ್ಯಕ್ಷರು:– 15 ನಿಮಿಷಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಎಲ್ಲರೂ ಎರಡು ಮೂರು ನಿಮಿಷಗಳ ಕಾಲ3–4 ಜನ ಸದಸ್ಯರು ಮಾತನಾಡಲಿ. ಆದರೆ ಹೆಚ್ಚು ಸಮಯ ತೆಗೆದುಕೊಳ್ಳುವುದು ಬೇಡ.

ಶ್ರೀ ಪಾಪರೆಡ್ಡಿ:- ಮಾನ್ಯ ಅಧ್ಯಕ್ಷರೇ ಇವತ್ತು ಏನು ಕೃಷ್ಣ ಕಣಿವೆಯಲ್ಲಿ ನೀರಿನ ಬಗ್ಗೆ 21 ಯೋಜನೆಗಳು ಆಂಧ್ರ ಸರ್ಕಾರ, ಯಾವುದೇ ಕೇಂದ್ರಸರ್ಕಾರದ ಮಂಜೂರಾತಿ ಇಲ್ಲದೆ ಕೆಲಸ ನಡೆಯುತ್ತಿದೆ. ಮಂಜೂರಾಗಿಲ್ಲದ ಕೆಲಸಗಳು ಈಗಾಗಲೇ ಪ್ರಾರಂಭವಾಗಿವೆ. ಅದೇ ತರಹ ನನ್ನ ಭಾಗದಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ 173 ಟಿ.ಎಂ.ಸಿ ನೀರು ದೊಡ್ಡ ಅಣೆಕಟ್ಟು ಕಟ್ಟಿದ್ದಾರೆ. ಅದರ ಕೆಳಗಡೆ ಬರುವಂತಹ 95 ಕಿಲೋಮೀಟರ್ ದೂರದ ರೈಟ್ ಬ್ಯಾಂಕ್ ಕೆನಾಲ್ ಪ್ರಾರಂಭವಾಗಿ ಮುಕ್ತಾಯವಾಗಿದೆ. ಅದು 157 ಕಿಲೋಮೀಟರ್‌ವರೆಗೂ ಹೋಗಬೇಕಾಗಿತ್ತು. 157 ಕಿ.ಮಿ.ವರೆಗೆ ಹೋಗಬೇಕಾಗಿತ್ತು, 157 ಕಿ.ಮಿ. ಹೋದರೆ ಎರಡು ಲಕ್ಷ ಜಮೀನಿಗೆ ನೀರಾವರಿಯಾಗುತ್ತದೆ. ಬಚಾವತ್ ಅವಾರ್ಡ್‌ನಲ್ಲಿ 95 ಕಿ.ಮಿ. ಬರಬೇಕಾಗಿದೆ. 157 ಕಿ.ಮಿ. ಹೋಗಬೇಕಾದರೆ ಬಿ ಸ್ಕೀಂನಲ್ಲಿ ತಂದು ನಮ್ಮ ಸರ್ಕಾರ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಆಂಧ್ರಪ್ರದೇಶದ ಸರ್ಕಾರ ಬಚಾವತ್ ಅವಾರ್ಡ್‌ನಲ್ಲಿ ಎ ಸ್ಕೀಂನಲ್ಲಿ ಮುಗಿಸಿಕೊಂಡು ಬಿ ಸ್ಕೀಂನಲ್ಲಿರುವ ಕೆಲಸವನ್ನು ಮಾಡುತ್ತಾ, ಪ್ರಾರಂಭ ಮಾಡಿದ್ದಾರೆ. ತಾವು ಕೂಡ, ದಯಮಾಡಿ ಈ 95 ಕಿ.ಮಿ.ಇರುವ ಕಾಲುವೆ ಕೆಲಸವನ್ನು 157 ಕಿ.ಮಿ. ವರೆಗೆ ಮಾಡಿದರೆ ಎರಡು ಲಕ್ಷ ಎಕರೆ ಜಮೀನಿಗೆ ನೀರು ಕೊಟ್ಟಂತಾಗುತ್ತದೆ. ಯಾವಾಗಲೂ ಬರಗಾಲದಿಂದ ನೊಂದಂತಹ ರೈತರಿಗೆ ನೀರನ್ನು ಒದಗಿಸಿ ಕೊಟ್ಟಂತಾಗುತ್ತದೆ. ಆ ಒಂದು ಯೋಜನೆಯಲ್ಲಿ ನಮ್ಮ ಜಿಲ್ಲೆಯಲ್ಲಿ ನಾಲ್ಕು ಯೋಜನೆಗಳು ಪ್ರಾರಂಭ ವಾಗಬೇಕಾಗಿದೆ. ಒಂದು ಬುಗಲ್ ಬ್ಯಾರೇಜ್ ಒಂದು ಟಿ.ಎಂ.ಸಿ. ನೀರು, ಇನ್ನೊಂದು ಕೊಪ್ಪರ ಬ್ಯಾರೇಜ್, 7 ಟಿ.ಎಂ.ಸಿ. ನೀರು, ಇನ್ನೊಂದು ಬಿಜಾಪುರ ದಲ್ಲಿ ಬ್ಯಾರೇಜ್ ಇದೆ, 4 ಟಿ.ಎಂ.ಸಿ. ನೀರು, ಈ ಯೋಜನೆಗಳು ಪ್ರಾರಂಭವಾದರೆ ಬರಗಾಲದಿಂದ ತುತ್ತಾಗಿರುವ ಈ ಭಾಗದ ಎಲ್ಲಾ ರೈತರಿಗೆ ನೀರಿನ ಅವಕಾಶವಾಗುತ್ತದೆ. ಯಾವಾಗ ಆಂಧ್ರಪ್ರದೇಶ ಸರ್ಕಾರ ಇಷ್ಟೊಂದು ಕೆಲಸವನ್ನು ಆರಂಭ ಮಾಡಿದೆ. ನಾವು ಏಕೆ ಕೆಲಸವನ್ನು ಪ್ರಾರಂಭ ಮಾಡಬಾರದು, ನೀವು ಕೆಲಸವನ್ನು ಪ್ರಾರಂಭ ಮಾಡಿ, ಈ ಬರಗಾಲಕ್ಕೆ ತುತ್ತಾಗಿರೊ ಎಲ್ಲಾ ರೈತರಿಗೆ ನೀರನ್ನು ಒದಗಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯಾವಾಗ ಅವರು 21 ಯೋಜನೆಗಳನ್ನು ಪ್ರಾರಂಭ ಮಾಡುತ್ತಾರೆ, ನಾವು ಈ ಕೃಷ್ಣ ಕಣಿವೆಯಲ್ಲಿ ಬರುವಂತಹ ಈ ನಾಲ್ಕು ಯೋಜನೆಗಳು ಸರ್ಕಾರದ ಮುಂದಿದೆ. ನಮ್ಮ ನೀರಾವರಿ ಮಂತ್ರಿಗಳಾದ

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರು, ಅವರಿಗೆ ಸಂಪೂರ್ಣವಾದ ಮಾಹಿತಿ ಇದೆ ಅವರ ಕಾಲದಲ್ಲಿ ದಯಮಾಡಿ ಈ ಕೆಲಸಗಳನ್ನು ಆರಂಭ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ. ವೈಜನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಸಭಾಧ್ಯಕ್ಷರೆ, ಈ ಬಚಾವತ್ ಟ್ರಿಬ್ಯುನಲ್‌ನಲ್ಲಿ ನೀರು ಹೇಗೆ ಹಂಚಿಕೆಯಾಗಬೇಕೆಂದು ಪ್ರಿನ್ಸಿಪಲ್ಸ್ ಇವೆ. ಒಂದನೆಯದು ಏರಿಯಾ ಯಾವ ಕಡೆ ಹೆಚ್ಚು ನೀರು ಇದೆ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಿಗಿಂತ ಕರ್ನಾಟಕದ ಏರಿಯಾ ಹೆಚ್ಚಿಗೆ ಇದೆ. ಪಾಪುಲೇಶನ್ ಕೃಷ್ಣಾ ಬೆಸಿನ್‌ದು ಯಾರದು ಹೆಚ್ಚು ಇದೆ, ಆಂಧ್ರಕ್ಕಿಂತ ಕರ್ನಾಟಕದ್ದು ಹೆಚ್ಚಿಗೆ ಇದೆ, ಅವಶ್ಯಕತೆ ಯಾರದು ಹೆಚ್ಚಿಗಿದೆ, ಬಿಜಾಪುರ, ಗುಲ್ಬರ್ಗಾ ಇಂತಹ ಬರಗಾಲ ಪ್ರದೇಶಗಳನ್ನು ಹೊಂದಿರುವ ಕರ್ನಾಟಕದಲ್ಲಿ ಅವಶ್ಯಕತೆ ಹೆಚ್ಚಿಗೆ ಇದೆ. ಇವೆಲ್ಲಾ ಬಚಾವತ್ ಟ್ರಿಬ್ಯನಲ್ ಎದುರು ಚರ್ಚೆಯಾಗಿದೆ. ಇಷ್ಟೆಲ್ಲಾ ಆದಾಗ್ಯು ಕೂಡ ಆಂಧ್ರಪ್ರದೇಶಕ್ಕೆ 800 ಟಿ.ಎಂ.ಸಿ. ಫೀಟ್ ನೀರು ಹಂಚಲಾಯಿತು, 729 ಟಿ.ಎಂ.ಸಿ. ಫೀಟ್ ನೀರನ್ನು ಕರ್ನಾಟಕಕ್ಕೆ ಹಂಚಲಾಯಿತು. ಇದಕ್ಕೆ ಕಾರಣವೇನೆಂದರೆ, ತೀರ್ಪು ಕೊಡುವ ಕಾಲಕ್ಕೆ, ಅಲ್ಲಿ (ಆಂಧ್ರಪ್ರದೇಶದಲ್ಲಿ) ಇನ್‌ಫ್ರಾಸ್ಟ್ರಕ್ಚರ್ ನಂತರ ಅಲ್ಲಿ ಯೋಜನೆಗಳು ಪೂರ್ಣವಾಗಬೇಕೆಂದು ಬೇಕೆಂದೆ ಹಿಯರಿಂಗ್ ಕೂಡ ಮುಂದಕ್ಕೆ ಹಾಕಿದರು. ಆಗ ಕೇಂದ್ರದಲ್ಲಿ ಕೆ.ಎಲ್.ರಾವ್ ನೀರಾವರಿ ಮಂತ್ರಿಯಾಗಿದ್ದರು. ಹಿಯರಿಂಗ್ ಹಾಕಿಕೊಟ್ಟಿಲ್ಲ; ಕೊನೆಗೆ ಯಾವಾಗ ಹಿಯರಿಂಗ್ ಪ್ರಾರಂಭವಾಯಿತು, ನಾಗಾರ್ಜುನ ಮತ್ತು ಶ್ರೀ ಶೈಲಂ ಈ ಯೋಜನೆಗಳಿಗೆ ನೀರನ್ನು ಹಂಚಕೂಡದು ಎಂದು ಕರ್ನಾಟಕದ ವಕೀಲರು, ಇಂಜಿನಿಯರ್ಸ್ ಅಬ್‌ಜೆಕ್ಷನ್ ಮಾಡಿದಾಗ, ಆಗ ಬಚಾವತ್ ರವರು ಒಂದು ಮಾತನ್ನು ಹೇಳುತ್ತಾರೆ, "When a child is born, whether it is legitimate of illegitimate, we have to provide food and cloth" ಅವರು ಯೋಜನೆ ತಯಾರು ಮಾಡಿಕೊಂಡಿದ್ದಾರೆ, ಹಣ ಖರ್ಚು ಮಾಡಿದ್ದಾರೆ, ಅವರಿಗೆ ಹೆಚ್ಚು ಕೊಡಬೇಕು. ಅವಶ್ಯಕತೆ ಅವರಿಗೆ ಹೆಚ್ಚು ಇದೆಯೊ ಇಲ್ಲವೊ ಪ್ರಶ್ನೆ ವಿಚಾರ ಮಾಡಿಲ್ಲ. ಈ ದೃಷ್ಟಿಯಿಂದ ನಾವು ಬಚಾವತ್ ಅವಾರ್ಡ್‌ನಲ್ಲಿ ನಾವು ಸೋತಿದ್ದೇವೆ. ಆವಾಗ ಅವರು ಏನು ಇಲ್ಲೀಗಲ್ ಪ್ರಾಜೆಕ್ಟ್ಸ್ ತಯಾರು ಮಾಡುತ್ತಿದ್ದರು ಅದನ್ನು ಅಂದಿನ ಸರ್ಕಾರವು ತಡೆದಿಲ್ಲ, ದುರ್ದೈವ ಇವತ್ತಿನ ಸರ್ಕಾರ ಕೂಡ ತಡೆಯುತ್ತಿಲ್ಲ. ಆ ನಂತರ ತೆಲಗುಗಂಗಾ ಯೋಜನೆಯಾಯಿತು, ತೋರಿಸಿದ್ದು 15 ಟಿಎಂಸಿ ನೀರು ಮದ್ರಾಸ್‌ಗೆ ಕುಡಿಯುವುದಕ್ಕೆ ಬೇಕೆಂದು, ಮಹಾರಾಷ್ಟ್ರದಿಂದ 5 ಟಿಎಂಸಿ, ಕರ್ನಾಟಕದಿಂದ 5 ಟಿಎಂಸಿ, ಆಂಧ್ರಪ್ರದೇಶದಿಂದ 5 ಟಿಎಂಸಿ ಕೊಡುವುದೆಂದು ತೀರ್ಮಾನ

ವಾಯಿತು. ಆವತ್ತು ಶಂಕು ಸ್ಥಾಪನೆಯನ್ನು ಆವತ್ತಿನ ಎನ್.ಟಿ. ರಾಮರಾವ್ ಕಾಲದಲ್ಲಿ ದಿ. ಶ್ರೀಮತಿ. ಇಂದಿರಾಗಾಂಧಿಯವರು ನೆರವೇರಿಸಿದರು. ಅದಕ್ಕೆ ನಮ್ಮ ಮುಖ್ಯಮಂತ್ರಿ ಕೂಡ ಮಹಾರಾಷ್ಟ್ರದ ಮುಖ್ಯಮಂತ್ರಿಕೂಡ ಭಾಗವಹಿಸಿದ್ದರು. ಆವತ್ತು ಏನು ಯೋಜನೆಗಳನ್ನು ಹಾಕಿಕೊಂಡಿದ್ದರು, ಅವನ್ನು ಯಾರು ಪ್ರಶ್ನೆಯೇ ಮಾಡಲಿಲ್ಲ. ಇವತ್ತು 150 ಟಿಎಂಸಿ ನೀರು ಮದ್ರಾಸ್‌ಗೆ ಕೊಡುತ್ತಾರೊ ಇಲ್ಲವೊ ಗೊತ್ತಿಲ್ಲ, ಅವರು ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅವರು ಒಂದಲ್ಲ ಒಂದು ರೀತಿಯಿಂದ ಬೆಳೆಸಿಕೊಳ್ಳುತ್ತಾ ಹೋಗುತ್ತಿದ್ದಾರೆ. ಅಷ್ಟೆ ಅಲ್ಲ, ಆಲಮಟ್ಟಿ ಯೋಜನೆಯ ಡ್ಯಾಂ ಅನ್ನು 524 ಎತ್ತರಕ್ಕೆ ಕಟ್ಟುವುದಕ್ಕೆ ಅವರು ಇಂಜೆಕ್ಷನ್ ಆರ್ಡರ್ ತಂದರು, ನಮ್ಮ ಕರ್ನಾಟಕ ರಾಜ್ಯದಲ್ಲಿ ಕಟ್ಟುವುದಕ್ಕೆ ಇಂಜೆಕ್ಷನ್, ಸ್ಟೇ ಆರ್ಡರ್ ತಂದು ನಿಲ್ಲಿಸಿದರು. ಅವೆಲ್ಲಾ ಆಂಧ್ರದ ಕಂಟ್ರಾಕ್ಟರ್ಸ್, ಕೇಂದ್ರದಲ್ಲಿ ನಾವು ಫೈಟ್ ಮಾಡಲಿಲ್ಲ. ಅದಕ್ಕೋಸ್ಕರ ಇವತ್ತು 524 ಬಿಟ್ಟು 19ಕ್ಕೆ ಕೆಳಗೆ ಇಳಿದಿದೆ, ಅದರಿಂದ ಅಲ್ಲಿ ಇವತ್ತು ಏನಾಗಿದೆ ಎಂದರೆ, ಅಲ್ಲಿ ಎಲೆಕ್ಟ್ರಿಸಿಟಿ ಜನರೇಟ್ ಆಗುತ್ತಿಲ್ಲ, ಬೇಕಾದಷ್ಟು ಆಗುವುದಿಲ್ಲ, ಮುಂದೆಯು ಆಗುವುದಿಲ್ಲ. ಅಲ್ಲಿ ನಬಾರ್ಡ್ ಏತ ನೀರಾವರಿ ಯೋಜನೆಗಳು ಯಾವುದು ಆಗುವುದಿಲ್ಲ, ಇಲ್ಲಿ ಐ ವಾಶ್ ಆ ದೃಷ್ಟಿಯಿಂದ, ಒಂದು ಎ ಸ್ಕೀಂನಲ್ಲಿ ಪೂರ್ಣ ನೀರನ್ನು ಬಳಕೆ ಮಾಡಿಕೊಂಡಿಲ್ಲ, ಬಿ ಸ್ಕೀಂ ಬಗ್ಗೆ ಟ್ರಿಬ್ಯುನಲ್ ಹಿಯರಿಂಗ್ ಪ್ರಾರಂಭ ವಾಗಿದೆ. ಅದರಲ್ಲೂ ಕೂಡ 2000 ಇಸವಿಯ ತನಕ 729 ನೀವು ಉಪಯೋಗ ಮಾಡಿಕೊಂಡಿದ್ದೀರಲ್ಲ, ಆವತ್ತಿನ ತನಕ ಯಾವುದು ಯೂಸ್ ಫುಲ್ ಮಾಡಿ ಕೊಂಡಿದ್ದಿರಿ, ಅದೆಲ್ಲಾ ಹೆಚ್ಚಾಗುತ್ತದೆ, ಅದು ಬಿಟ್ಟು ಉಳಿದಿದ್ದೆಲ್ಲಾ ಬಿ ಸ್ಕೀಂದೆಲ್ಲಾ ರಿ ಅಲಾಟ್ ಮಾಡಿರಿ ಎಂದು ಇವತ್ತು ಹೇಳುತ್ತಿದ್ದಾರೆ, ಅದನ್ನು ಉಳಿಸಿ ಕೊಳ್ಳುವಂತು ಸಾಮರ್ಥ್ಯ ನಮ್ಮಲ್ಲಿಲ್ಲ, ನಮ್ಮಲ್ಲಿ ಸಿರಿಯಸ್‌ನೆಸ್ ಇಲ್ಲ. ಆ ದೃಷ್ಠಿಯಿಂದ ಆ ನೀರು ಉತ್ತರ ಕರ್ನಾಟಕದ್ದೆಲ್ಲ ಇಡೀ ಕರ್ನಾಟಕದ ಅಸ್ತ, ಪ್ರತಿಯೊಂದು ಯೋಜನೆಗೂ ಕೇಂದ್ರದ ಮೇಲೆ ಆಂಧ್ರಪ್ರದೇಶದವರು ಇನ್ ಫ್ಲುಯೆನ್ಸ್ ಹಾಕುತ್ತಾರೆ. ಮಹಾಜನ ಆವಾರ್ಡ್ ಇರಲಿ ಬಚಾವತ್ ಅವಾರ್ಡ್ ಇರಲಿ ಮತ್ತೊಂದು ಇರಲಿ, ಇವತ್ತು ಅಂಧ್ರಪ್ರದೇಶದವರು ಹಾಗೂ ಮಹಾ ರಾಷ್ಟ್ರದವರು ಕೇಂದ್ರಕ್ಕೆ ಬಹಳ ಹೆಚ್ಚಾಗುತ್ತಿದ್ದಾರೆ, ಕರ್ನಾಟಕದವರು ನಾವು ಬಹಳ ಸದರವೆತ್ತಿದ್ದೇವೆ. ನಾವು ಅನೇಕ ಸಲ ಯಾರನ್ನೊ ಖುಷಿ ಮಾಡುವ ಸಲುವಾಗಿ ಏನು ಮಾಡುತ್ತೇವೆಂದರೆ, 1996ರಲ್ಲಿ ನನಗೆ ನೆನಪಿದೆ, ಗೇಟ್ ಎತ್ತರ ಮಾಡುವ ಸಲುವಾಗಿ ಇಬ್ಬರಲ್ಲು ಡಿಸ್‌ಪ್ಯೂಟ್ ಇತ್ತು. ಉತ್ತರಪ್ರದೇಶ, ವೆಸ್ಟ್ ಬೆಂಗಾಲ್, ತಮಿಳುನಾಡು, ಮತ್ತೊಂದು ಬೇರೆ ರಾಜ್ಯ ಈ ನಾಲ್ಕು ರಾಜ್ಯದ ಎಕ್ಸ್‌ಫರ್ಟ್ ಕಮಿಟಿಯವರು ರಿಪೋರ್ಟ್ ಕೊಟ್ಟರೆಂದರೆ, ಗೇಟ್ ಅನ್ನು 52 ಏರಿಸಿದ್ದರೆ ಮಹಾರಾಷ್ಟ್ರಕ್ಕೆ ಅನ್ಯಾಯವಾಯಿತೆಂದು ರಿಪೋರ್ಟ್

ಕೊಟ್ಟರು, ಅದೇ ಆಧಾರದ ಮೇಲೆ ನಾವು ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಸೋತಿದ್ದೇವೆ. ನಾವು ಬಹಳಷ್ಟು ಮಣ್ಣಿನ ಮಗ ಇತ್ಯಾದಿ ಸಾಕಷ್ಟು ಮಾತನಾಡುತ್ತೇವೆ, ಆದರೆ ಇದರಲ್ಲಿ ನಾವು ಸೋತಿದ್ದೇವೆ. ನಮ್ಮ ನೀತಿಯಿಂದ ಇವತ್ತು ಸುಪ್ರೀಂಕೋರ್ಟ್‌ನಲ್ಲಿ ಸೋತಿದ್ದೇವೆ, ಆ ತಪ್ಪು ಪುನಃ ಆಗುವುದು ಬೇಡ. ಆಂಧ್ರಪ್ರದೇಶದವರು ನೀರಾವರಿ ವಿಚಾರದಲ್ಲೆ ಅನ್ಯಾಯ ಮಾಡುತ್ತಿರುವ ಇಶ್ಯು ಮೇಲೆ ವಿಶೇಷ ಅಧಿವೇಶನವನ್ನು ಕರೆಯಬೇಕು. ಆಂಧ್ರಪ್ರದೇಶದವರು ಈ ರೀತಿ ಏನಾದರೂ ಅನ್ಯಾಯವಾಗಿದ್ದರೆ, ಸ್ಪೆಷಲ್ ಸೆಷನ್ ಕರೆಯುತ್ತಿದ್ದರು, ಅದರ ಬಗ್ಗೆ ವಿವರವಾದ ಚರ್ಚೆಯಾಗುತ್ತದೆ. ನಾರಿಮನ್ ಎಂಬುವ ವಕೀಲರಿಗೆ ಕೇಸನ್ನು ಕೊಡುತ್ತಾರೆ, ಎಕ್ಸ್‌ಪರ್ಟ್ ವಕೀಲರು ನಮ್ಮಲ್ಲು ಇದ್ದಾರೆ. ಪ್ರವೈಟ್ ಕೇಸ್‌ಗೆ ಫೈಟ್ ಮಾಡುವ ಅವರಿಗೆ ನಮ್ಮ ಸರ್ಕಾರದವರು ಹೋಗಿ ಕೇಸ್ ಕೊಡುತ್ತಾರೆ, ನಮ್ಮಲ್ಲಿ ಬಹಳಷ್ಟು ಒಳ್ಳೆಯ ವಕೀಲರು ಇದ್ದಾರೆ, ಅವರಿಗೆ ಪ್ರೋತ್ಸಾಹ ಮಾಡಬೇಕು. ಆ ನಾರಿಮನ್‌ರವರು ಬಹಳ ಮಾತನಾಡುವುದಿಲ್ಲ, 5 ನಿಮಿಷ ಕನ್ಸಲ್ಟ್ ಮಾಡುವುದೆ ಅಂತಹವರಿಗೆ ಹೋಗಿ ಕೊಡುತ್ತಾರೆ, ಏಕೆ ಕೊಡಬೇಕು? ಅವರು ನಮ್ಮ ಕೇಸ್ ಪ್ರೊಟೆಕ್ಟ್ ಮಾಡಿಲ್ಲ, ಆಲಮಟ್ಟಿಯ ವಿಷಯದಲ್ಲಿ ನಾವು ಸೋತಿದ್ದೇವೆ. ಆದರೂ ಕೂಡ ಬಹಳ ಎಕ್ಸ್‌ಫರ್ಟ್ ಇದ್ದಾರೆಂದು ಕೊಡುತ್ತಾರೆ, ದಯಮಾಡಿ ಮುಂದಾದರು ಹಾಗೆ ಮಾಡಬೇಡಿ, ತಾವು ಸ್ವತಃ ಇನ್ ವಲ್ವ್ ಆಗಬೇಕು. ನಮ್ಮ ನೀರಾವರಿ ಮಂತ್ರಿಗಳು ಸ್ವತಃ ವಕೀಲರು, ಲೀಗಲ್ ಎಕ್ಸ್‌ಪರ್ಟ್ ಇದ್ದಾರೆ, ಬರಿ ನಾರಿಮನ್ ಮೇಲೆ ಬಿಡಬಾರದು ಸಂಪೂರ್ಣ ಇನ್‌ವಾಲ್ವ್‌ವಾಗಬೇಕು, ಇಲ್ಲಿ ಕರ್ನಾಟಕದ ಪ್ರಶ್ನೆ ಇದೆ. ಇದರಲ್ಲಿ ಉತ್ತರ ಕರ್ನಾಟಕದ ಪ್ರಶ್ನೆ ಇದೆ. ಇದರಲ್ಲಿ ಬರೀ ಡೆಲಿಗೇಶನ್ ಒಯ್ಯುವುದಲ್ಲ. ಹಿಂದೆ ಅಸೆಂಬ್ಲಿಯಲ್ಲಿ ಒಂದು ನಿರ್ಣಯವನ್ನು ಪಾಸು ಮಾಡಿದ್ದೆ ಕೇಂದ್ರ ಮತ್ತು ಆಂಧ್ರಪ್ರದೇಶಗಳ ನೀತಿ ವಿರುದ್ಧ. ಅವರು ಪ್ರತಿಯೊಂದು ಕಟ್ಟಿಕೋತಾರೆ ಯಾವುದೂ ತಡೆಯೇ ಇಲ್ಲ ನಾವು ಪ್ರತಿಭಟನೆ ಕೂಡ ಮಾಡುವುದಿಲ್ಲ. ತೆಲುಗು ಗಂಗಾ ಬಗ್ಗೆ ಆಗಲಿ ಇವತ್ತು ಹೊಸ ಯೋಜನೆಗಳ ಬಗ್ಗೆಯಾಗಲಿ ಯಾವ ತರಹ ಅಲಮಟ್ಟಿಗೆ ಅವರು ಸ್ಟೆ ಆರ್ಡರ್ ತಂದರು ಎತ್ತರ ಏರಿಸುವುದನ್ನು ನಿಲ್ಲಿಸಿಬಿಟ್ಟರು ಆ ತರಹ ಈಗ ಅವರು ಏನು ಅಧಿಸೂಚನೆ ಹೊರಡಿಸಿ ಟೆಂಡರ್ ಕಾಲ್ ಮಾಡಿದ್ದಾರೆ ಅದನ್ನು ತಡೆಹಿಡಿಯಲು ಸರ್ಕಾರ ಪ್ರಯತ್ನ ಮಾಡಬೇಕು ಸುಪ್ರೀಂಕೋರ್ಟ್‌ವರೆಗೆ ಹೋಗಿ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಬೇಕು, ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಫೈಲ್ ಮಾಡಬೇಕು.

ಈ ತರಹ ಮಾಡದೇ ಇದ್ದರೆ ಏನೂ ಸಾಧ್ಯವಿಲ್ಲ. ನಮ್ಮ ಅಧಿಕಾರಿಗಳೋ, ನಮ್ಮಲ್ಲೊಬ್ಬ ಇ.ಇ. ಇದ್ದಾರೆ, ನಮ್ಮ ತಾಲ್ಲೂಕಿನಲ್ಲಿ. ಅಲ್ಲಿ ಐಸಿ ಸೆಟ್‌ಗೆ ಯಾರು ಪರ್ಮಿಶನ್ ಕೇಳಿದರೂ ಇಲ್ಲ ಇಲ್ಲ ಮುಂದೆ ಆಂಧ್ರಕ್ಕೆ ಬಚಾವತ್ ಪ್ರಕಾರ ನೀರು ಹೋಗಬೇಕಾಗಿದೆ ಅಂತ ಐಪಿ ಸೆಟ್‌ಗೆ ಅನುಮತಿ ಕೊಡುವುದಿಲ್ಲ. ಸರ್ಕಾರ ಕೂಡ ಒಂದು ನೀತಿ ಮಾಡಿದೆ, ಅಲ್ಲಿಂದ ಪ್ರತಿಯೊಂದು ಬೆಂಗಳೂರಿಗೆ ಬರಬೇಕು ಅಂತ. ಅಲ್ಲಿ ಕೋಟ್ಯಂತರ ರೂ. ಯೋಜನೆಗಳನ್ನು ಮಾಡಿಕೊಳ್ಳು ತ್ತಿದ್ದಾರೆ ಅವರನ್ನು ಕೇಳಲು ಇವರಿಗೆ ಧೈರ್ಯ ಇಲ್ಲ. ಆದರೆ ನಮ್ಮಲ್ಲಿ ಎಲ್ಲೋ ರೈತರು ಒಂದು ಐಪಿ ಸೆಟ್ ಹಚ್ಚಿಕೊಳ್ಳುತ್ತಾರೆ ಅಂದರೆ ಅದಕ್ಕೆ ಪರ್ಮಿಶನ್ ಪಡೆದಿದ್ದಾರೋ ಇಲ್ಲವೋ, ರಿಜೆಕ್ಟ್ ಮಾಡುವುದು, ನೀವು ಬೆಂಗಳೂರಿಗೆ ಬನ್ನಿರಿ ಅನ್ನುವುದು. ಇದು ಯಾವ ನೀತಿ? ಇದು ಇವತ್ತೇನಲ್ಲ, ಬಚಾವತ್ ಟ್ರಿಬ್ಯುನಲ್ ಏನಿತ್ತು ಅಂದಿನಿಂದ ಇದೇ ನೀತಿ. 1969ರಲ್ಲಿ ಬಚಾವತ್ ಟ್ರಿಬ್ಯುನಲ್ ಸ್ಥಾಪನೆಯಾಯಿತು, 73ರಲ್ಲಿ ವರದಿ ಕೊಟ್ಟಿತು. 75ರಲ್ಲಿ ಅಂತಿಮ ವರದಿ ಬಂತು 25 ವರ್ಷಗಳಲ್ಲಿ ಈ ಯೋಜನೆ ಪೂರ್ಣ ಮಾಡಬೇಕು ಅಂತ ಆವಾರ್ಡ್ ಕೊಟ್ಟಮೇಲೆ ಅವತ್ತೇ ನಾವು 803 ಟಿಎಂಸಿ ಜಾಸ್ತಿ ಬರಬೇಕೆಂದು ಯಾರ ಪ್ರತಿಭಟನೆಯೂ ನಡೆದಿಲ್ಲ. 1973ರಲ್ಲಾಯಿತು, ಪ್ರತಿಭಟನೆಯೇ ಮಾಡಲಿಲ್ಲ. ಅಥವಾ ಹಂಚಿದಷ್ಟು ನೀರನ್ನೂ ಬಳಸಿಕೊಂಡಿಲ್ಲ. ಈ ರೀತಿ ಅನ್ಯಾಯಗಳ ಮೇಲೆ ಅನ್ಯಾಯಗಳಾಗುತ್ತಿವೆ. ನಮ್ಮ ಭೀಮಾಕ್ಕೆ ಮಹಾರಾಷ್ಟ್ರದಿಂದಲೂ ನೀರು ಬರಬೇಕು. ಬಿಜಾಪುರ, ರಾಯಚೂರು, ಗುಲ್ಬರ್ಗ ಈ ಮಾರ್ಗದಲ್ಲಿ ನೀರು ಬರುತ್ತದೆ. ಆದರೆ ಮಹಾರಾಷ್ಟ್ರದವರು ಒಂದು ಬಂಡಿಂಗ್ ಕಟ್ಟಿಸಿ ನದಿಯನ್ನೇ ಡೈವರ್ಟ್ ಮಾಡಿಬಿಟ್ಟಿದ್ದಾರೆ. ಅದು ಜೀವಾ ನದಿ, ಅದನ್ನೇ ಡೈವರ್ಟ್ ಮಾಡಿ ನಮಗೆ ನೀರು ಬರದಂತೆ ಮಾಡಿದ್ದಾರೆ. ಬರುವುದನ್ನು ಅವರು ಅಲ್ಲಿ ತಡೆಯುತ್ತಾರೆ. ಇಲ್ಲಿ ಇವರು ಆಲಮಟ್ಟಿಗೆ ಇಂಜಂಕ್ಷನ್ ಆರ್ಡರ್ ತರುತ್ತಾರೆ ಗೇಟ್ ಓಪನ್ ಮಾಡಬಾರದು ಅಂತ. ಎರಡೂ ಕಡೆ ನಿಂತುಬಿಟ್ಟಿತು. ಆದರೆ ನಮ್ಮ ಸರ್ಕಾರದವರು ಈ ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಎಲ್ಲಾ ಸರ್ಕಾರಗಳು ನಾನು ಹೇಳುವುದು ಇವರು ಕೇಂದ್ರದ ಮೇಲೆ ಪ್ರಭಾವವನ್ನು ಹಾಕಲಿಲ್ಲ. ಸೀರಿಯಸ್ಸಾಗಿ ಓಡಾಡಲಿಲ್ಲ ಸರ್ಕಾರ ಅದರ ಸಲುವಾಗಿ ಎಲ್ಲಕ್ಕಿಂತ ಹೆಚ್ಚು ಗಮನ ಈ ಕಡೆಗೆ ಕೊಟ್ಟು ಇದರ ಬಗ್ಗೆ ಬಹಳ ಸೀರಿಯಸಾಗಿ ಹೋರಾಡಿದರೆ ಮಾತ್ರ ಅಲ್ಪಸ್ವಲ್ಪ ನ್ಯಾಯ ಸಿಗಬಹುದು, ಸಂಪೂರ್ಣ ನ್ಯಾಯವಂತೂ ಸಿಗುವುದಿಲ್ಲ. ಸಿಗಲು ಸಾಧ್ಯವೇ ಇಲ್ಲ. ಆ ದೃಷ್ಟಿಯಿಂದ ಖರ್ಗೆಯವರು ನಮ್ಮ ಭಾಗದವರು ಕಾನೂನು ತಜ್ಞರೂ

ಹೌದು ಇದರ ಬಗ್ಗೆ ಬಹಳ ಮುತುವರ್ಜಿ ವಹಿಸಿ ನಮ್ಮ ಇಂಟರೆಸ್ಟ್ ಪ್ರೊಟೆಕ್ಟ್ ಮಾಡಬೇಕು ಅಂತ ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ(ಬಾಗಲಕೋಟೆ): ಅಧ್ಯಕ್ಷರೆ ಇವತ್ತೇನು ಈ ಚರ್ಚೆ ಪ್ರಾರಂಭವಾಗಿದೆ ಆಂಧ್ರದವರು ನಾಲ್ಕೂವರೆ ಸಾವಿರ ಕೋಟಿ ರೂಗಳ ಟೆಂಡರ್ ಏನು ಕರೆದಿದ್ದಾರೆ ಅದರ ಮೇಲೆ ಚರ್ಚೆ ಇವತ್ತು ಆಗಿದೆ. ಅನೇಕ ಹಿರಿಯ ಸದಸ್ಯರು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅಧ್ಯಕ್ಷರೇ ನಿಮ್ಮ ಮುಖಾಂತರ ಹೇಳಲು ನಾನು ಇಚ್ಛೆಮಾಡುತ್ತೇನೆ. ಎ ಸ್ಕೀಮಿನಲ್ಲಿ ಕರ್ನಾಟಕ ತನ್ನ ಪಾಲಿನ ನೀರನ್ನು ಬಳಸಿಕೊಂಡಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನೀನು ಒಂದೇ ಒಂದು ಮನವಿಯನ್ನು ಮಾನ್ಯ ನೀರಾವರಿ ಸಚಿವರಿಗೆ ಮಾಡುತ್ತಾ ಇದ್ದೇನೆ: ನಮ್ಮ ಭಾಗದಲ್ಲಿ ಯಾವ ಕೆಲಸ ಗಳನ್ನು ಏನು ಬಿ ಸ್ಕೀಮಿನಡಿ ಮಾಡಬೇಕೆಂದು ವಿಚಾರ ಮಾಡುತ್ತಿದ್ದೀರಿ ಅವುಗಳನ್ನು ಎ ಸ್ಕೀಮಿನಡಿ ಮಾಡಿ ಮುಗಿಸಿದರೆ ಸಂಪೂರ್ಣ ನೀರನ್ನು ನಾವು ಬಳಸಿಕೊಂಡ ಹಾಗಾಗುತ್ತದೆ. ಮುಳುವಾಡ ಏತ ನೀರಾವರಿ ಇರಬಹುದು ತಿಮ್ಮಾಪುರ ಏತ ನೀರಾವರಿ ಇರಬಹುದು ಇಂಥ ಯೋಜನೆಗಳಿಗೆ ನೀವು ಪ್ರಥಮ ಆದ್ಯತೆ ಕೊಟ್ಟು ಬೇಗ ಮುಗಿಸಿದರೆ ನಮ್ಮ ಭಾಗದ ಜಮೀನುಗಳಿಗೆ ನೀರನ್ನೂ ಕೊಟ್ಟು ಆಗದೆ ಜೊತೆಗೆ ಎ ಸ್ಕೀಮಿನಡಿ ಯಾವ ಪ್ರಮಾಣದ ನೀರು ಬಳಸಿಕೊಳ್ಳಬೇಕೋ ಅಷ್ಟನ್ನು ಬಳಸಿಕೊಂಡಂತೆಯೂ ಆಗುತ್ತದೆ. ದಯ ವಿಟ್ಟು ತಾವು ಆ ಕಡೆ ಆಸ್ಥೆ ವಹಿಸಬೇಕು ಅಂತ ನಾನು ವಿನಂತಿ ಮಾಡುತ್ತೇನೆ. ಜೊತೆಗೆ ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಲ್ಲಿ ಏನು ಕೆಲಸ ಪ್ರಾರಂಭವಾಗಿದೆ ಅದನ್ನು ಬೇಗ ಮುಗಿಸುವಂತಹ ವ್ಯವಸ್ಥೆ ಆಗಬೇಕು. ಜೊತೆಗೆ ಆ ಭಾಗದ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಹಲವಾರು ಬಾರಿ ವಿನಂತಿ ಮಾಡಿಕೊಂಡಿ ದ್ದೇವೆ. ಆ ಕೆರೆಗಳಿಗೆ ನೀರು ತುಂಬಿಸಲು ಅವಕಾಶ ಮಾಡಿಕೊಟ್ಟರೆ ಆ ಭಾಗದ ಏತ ನೀರಾವರಿ ಮುಗಿಸಲು ನಾವು ಹೆಚ್ಚು ಗಮನ ಕೊಟ್ಟರೆ ಜೊತೆಗೆ ಕುಡಿಯುವ ನೀರು, ಬಹಳ ಆಶ್ಚರ್ಯ ಎಂದರೆ ಆಲಮಟ್ಟಿ ಅಣೆಕಟ್ಟು ನಮ್ಮ ಅನೇಕ ಹಳ್ಳಿಗಳಿಗೆ ಹತ್ತಿರ ಇದೆ. ಆದರೂ ನದಿ ನೀರನ್ನು ಕುಡಿಯುವ ಸಲುವಾಗಿ ಉಪಯೋಗಿಸಿಕೊಳ್ಳಲು ಆಗುತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆ ಬಂದಾಗಲೆಲ್ಲ ಅಲ್ಲಿ ಬೋರ್ ಹಾಕಲಾಗುತ್ತಿದೆ. ಆದರೂ ಇದು ತಾತ್ಕಾಲಿಕ ಕೆಲಸ ಮಾತ್ರ. ಆ ದೃಷ್ಟಿಯಿಂದ ಎಲ್ಲಿ ಅಣೆಕಟ್ಟು ಸಮೀಪ ಇದೆ ಅದರ ಸಮೀಪವಿರುವ ಎಲ್ಲ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕೆರೆಕಟ್ಟೆಗಳನ್ನು ತುಂಬುವಂತಹ ವ್ಯವಸ್ಥೆ ಹಾಗೂ ಏತ ನೀರಾವರಿಗಳನ್ನು ಮುಗಿಸುವ ಪ್ರಯತ್ನ ಬೇಗ ಆದರೆ ಎ ಸ್ಕೀಮಿನಡಿಯ ನಮ್ಮ ಪಾಲಿನ ನೀರನ್ನು ನಾವು ಬಳಸಿಕೊಂಡಂತೆ ಆಗುತ್ತದೆ.

ಆ ದೃಷ್ಟಿಯಿಂದ ತಾವು ಸ್ವಲ್ಪ ಸೀರಿಯಸ್ಸಾಗಿ ವಿಚಾರ ಮಾಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಅಧ್ಯಕ್ಷರೇ ರಾಜ್ಯ ಸರ್ಕಾರ ನೆಲ ಜಲದ ಬಗ್ಗೆ ನಿರ್ಲಕ್ಷ್ಯ ವಹಿಸಿದೆ ಅಂತ ಸಾರಾಸಗಟಾಗಿ ಈಗ ನಾನು ಹೇಳುವುದಿಲ್ಲ. ಅದರಲ್ಲಿ ಯೋಚನೆ ಮಾಡಬೇಕಾಗಿರುವುದು ಏನು ಅಂದರೆ ಕಾವೇರಿ ಜಲಾನಯನ ಪ್ರದೇಶದ ಕೆರೆಗಳ ಹೂಳೆತ್ತುತ್ತೇವೆ ಅಂದರೆ ತಮಿಳುನಾಡು ಸರ್ಕಾರ ಅಡ್ಡ ಬರುತ್ತದೆ. ಆಲಮಟ್ಟಿಯಲ್ಲಿ ಗೇಟೆ ಕೂರಿಸುತ್ತೇವೆ ಅಂದರೆ ಆಂಧ್ರ ಸರ್ಕಾರ ಅಡ್ಡಿ ಮಾಡುತ್ತದೆ. ಕೋಲಾರದ ಪರಗೋಡಿನಲ್ಲಿ ಕುಡಿಯುವ ನೀರಿಗಾಗಿ ಯೋಜನೆ ರೂಪಿಸಿದರೆ ಅದೂ 08 ಟಿಎಂಸಿ ನೀರಿನ ಕುಡಿಯುವ ನೀರಿಗೆ ಯೂಜನೆ ರೂಪಿಸಿದರೆ ಅದಕ್ಕೂ ಅಡ್ಡಿ ಮಾಡುತ್ತದೆ. ಆದರೆ ಕಳೆದ 6 ತಿಂಗಳ ಹಿಂದೆ ನಾಲ್ಕೂವರೆ ಸಾವಿರ ಕೋಟಿ ರೂಗಳ 21 ಕಾಮಗಾರಿಗಳ ಟೆಂಡರ್ ಕರೆದೊದ್ದರೂ ಸರ್ಕಾರ ಕೋಮಾ ಸ್ಟೇಜಿನಲ್ಲಿತ್ತು ಅದಕ್ಕೆ ಪ್ರತಿಕ್ರಿಯೆ ಕೊಡಲು ನೆಲ ಜಲದ ರಕ್ಷಣೆ ಮಾಡ ತಕ್ಕಂತ ಮಾತಾಡುವ ಮಂತ್ರಿಗಳ ಸರ್ಕಾರ ಯಾಕೆ ಸುಮ್ಮನಿದ್ದರು? ಇದು ಸರ್ಕಾರದ ನಿರ್ಲಕ್ಷ್ಯದ ಬಗ್ಗೆ ನನ್ನ ಗಂಭೀರ ಚಿಂತನೆ ಈಗ ಮಾತಾಡಿದರೆ ಹೇಳುತ್ತಾರೆ ನಾವು ನೆಲ ಜಲದ ರಕ್ಷಣೆಗೆ ಬದ್ಧ ಅಂತ. ಬರೀ ಬಾಯಿಯಲ್ಲಿ ನೆಲ, ಜಲದ ರಕ್ಷಣೆಗೆ ಬದ್ಧ ಅಂತ ಭಾಷಣ ಮಾಡಿದರೆ ನೆಲ ಜಲದ ರಕ್ಷಣೆ ಆಗುವುದಿಲ್ಲ. ಆದ್ದರಿಂದ ಕೂಡಲೇ ರಾಜ್ಯ ಸರ್ಕಾರದ ಕಡೆಯಿಂದ ತನ್ನ ಪ್ರತಿಭಟನೆಯನ್ನು ಸೂಕ್ತ ವೇದಿಕೆಯಲ್ಲಿ ವ್ಯಕ್ತಪಡಿಸಬೇಕು. ಕೇಂದ್ರ ಸರ್ಕಾರಕ್ಕೆ ನಿಯೋಗ ಒಯ್ಯುವರೋ ಅಥವಾ ನ್ಯಾಯಾಲಯದ ಮುಂದೆ ಹೋಗುವರೋ ಈ ಕೂಡಲೇ ಪ್ರತಿಭಟನೆ ವ್ಯಕ್ತ ಮಾಡಿ ಆ ಕಾಮಗಾರಿಯನ್ನು ತಡೆಹಿಡಿಯುವ ಕಾರ್ಯಕ್ಕೆ ಮುಂದಾಗಬೇಕು ಎಂಬ ಮಾತನ್ನು ಹೇಳುತ್ತ ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಊರು ಕೊಳ್ಳೆ ಹೋಗುವ ಮುಂಚೆನೆ ದಿಡ್ಡಿ ಬಾಗಿಲು ಹಾಕಬೇಕು. ಅದರೆ ರಾಜ್ಯದ ಸ್ಥಿತಿ ಏನಾಗಿದೆ ಎಂದರೆ ಅವರು ನಾಲ್ಕೂವರೆ ಸಾವಿರ ಕೋಟಿಗೆ 21 ಕಾಮಗಾರಿಗಳಿಗೆ ಟೆಂಡರ್ ಕೊಟ್ಟು 6 ತಿಂಗಳಾದರೂ ಮೌನವಾಗಿದೆ ಎಂದರೆ ಇವರಿಗೆ ಈ ರಾಜ್ಯದ ನೆಲ ಜಲದ ರಕ್ಷಣೆ ಬಗ್ಗೆ ಕಾಳಜಿ ಇದೆಯಾ ಇಲ್ಲವೆ ಎಂಬ ಸಂಶಯ ಬರುತ್ತದೆ. ರಾಜಕೀಯದ ಮಾತು ನಾವು ಆಡುತ್ತಿಲ್ಲ. ಆದರೆ ಈ ಪ್ರಮಾಣದ ನಿರ್ಲಕ್ಷ್ಯ ಯಾಕೆ? ಇದರಲ್ಲಿ ಯಾವ ತಾರತಮ್ಯವೂ ಇಲ್ಲ, ಇಡೀ ವಿಧಾನಸಭೆ ಕರ್ನಾಟಕ ರಾಜ್ಯ ಒಂದಾಗಿ ಕೇಂದ್ರಕ್ಕೆ ಮತ್ತು ಆಂಧ್ರಕ್ಕೆ ಪ್ರತಿಭಟನೆ ವ್ಯಕ್ತಪಡಿಸಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ, ಜೈ ಹಿಂದ್

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ)

ಶ್ರೀ ಎಚ್.ಕೆ. ಪಾಟೀಲ್: ಅಧ್ಯಕ್ಷರೇ ಈಗಾಗಲೇ ಮಾನ್ಯ ಜಗದೀಶ ಶೆಟ್ಟರ್, ಗೋವಿಂದ ಕಾರ್ಜೋಳ, ಯಡಿಯೂರಪ್ಪ, ಮಾಧುಸ್ವಾಮಿ, ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಅರಗ ಜ್ಞಾನೇಂದ್ರ, ರಾಯರೆಡ್ಡಿ, ವಿಶ್ವೇಶ್ವರ ಹೆಗಡೆ, ಪಾಪರೆಡ್ಡಿ, ವೈಜನಾಥ ಪಾಟೀಲ್ ಸ್ನೇಹಿತ ರವಿ ಇವರೆಲ್ಲರೂ ಸಾಕಷ್ಟು ವಿವರವಾಗಿ ಚರ್ಚೆ ಮಾಡಿದ್ದಾರೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಜಲಸಂಪನ್ಮೂಲ ಸಚಿವರು ಈಗಾಗಲೇ ತಮ್ಮೆದುರಿಗೆ ಹಂಚಿಕೆ ಮಾಡಿಕೊಂಡ ಹಾಗೆ ಇದು ಅತ್ಯಂತ ಗಂಭೀರವಾಗಿರತಕ್ಕ ವಿಚಾರ, ರಾಜ್ಯದ ಹಿತ ರಕ್ಷಣೆ ಮಾಡುವುದಕ್ಕೆ, ಕಾಪಾಡುವುದಕ್ಕೆ ಹೇಗೆ ನಾವು ಹೆಜ್ಜೆಗಳನ್ನು ಇಡಬೇಕು, ಕಾನೂನು ರೀತಿಯಾಗಿ ಏನು ಕೆಲಸವನ್ನು ಮಾಡಬಹುದು? ರಾಜಕೀಯವಾಗಿ ಏನು ಒತ್ತಡವನ್ನು ತರುವಂಥ ಕೆಲಸವನ್ನು ಮಾಡಬೇಕು, ಕಾನೂನು ಉಲ್ಲಂಘನೆ ಮಾಡತಕ್ಕ ಈ ಮನೋಭಾವದಲ್ಲಿ ಆ ಪ್ರವೃತ್ತಿಯಲ್ಲಿ ಇದ್ದಂಥ ಈ ನೀರಿನ ವಿಚಾರದಲ್ಲಿ ಆಂಧ್ರಸರ್ಕಾರಕ್ಕೆ ಯಾವ ರೀತಿಯಾಗಿ ನಾವು ಆ ಕಾನೂನು ಉಲ್ಲಂಘನೆಯನ್ನು ಮಾಡಬೇಡಿ ನಿಯಮ ಉಲ್ಲಂಘನೆ ಮಾಡಬೇಡಿ ಮತ್ತೊಬ್ಬರ ನೀರನ್ನು ಬಳಕೆ ಮಾಡಿಕೊಳ್ಳಬೇಡಿ ಹಾಗೆ ಎಂದು ಹೇಳಿ ಅವರಿಗೆ ಯಾವ ರೀತಿಯಾಗಿ ತಿಳಿವಳಿಕೆಯನ್ನು ಕೊಡಬೇಕೆನ್ನುವುದರ ಬಗ್ಗೆ ಒಂದು ಸಮಗ್ರವಾಗಿರತಕ್ಕಂಥ ಹೇಳಿಕೆಯನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಅವರು ಹೇಳತಕ್ಕಂದದ್ದರ ಹಿನ್ನೆಲೆಯಲ್ಲಿ ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡುವುದಿಲ್ಲ. ಸ್ಟೇಟ್‌ಮೆಂಟ್ ಆದ ಮೇಲೆ ಮತ್ತೆ ಅವಶ್ಯ ಇದ್ದರೆ ನಾವು ಅವರೂ ಚರ್ಚೆಯಲ್ಲಿ ಪಾಲುಗೊಳ್ಳುತ್ತೇವೆ.

ಶೂನ್ಯವೇಳೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಉಪಾಧ್ಯಕ್ಷರೇ, ನನ್ನದು ಶೂನ್ಯವೇಳೆಯಲ್ಲಿ ಎರಡು ವಿಚಾರಗಳಿವೆ. ಒಂದು, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಕಾಡೆಮಿ ಸದಸ್ಯರನ್ನು ನೇಮಕ ಮಾಡಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ಹೇಳಿಕೆಗಳು ಬಂದಿವೆ. ವಿಶ್ವವಿದ್ಯಾನಿಲಯದ ಅಕಾಡೆಮಿ ಎಂದು ಹೇಳಿದರೆ ಅದೊಂದು ಬಹಳ ಪವಿತ್ರವಾದ ಒಂದು ಸಂಸ್ಥೆ. ಇಡೀ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟ, ಮತ್ತು ಆದರೆ ಇದನ್ನು ತೀರ್ಮಾನ ಮಾಡತಕ್ಕಂಥ ಒಂದು ಸಂಸ್ಥೆ. ಅಲ್ಲಿ ಅಕಾಡೆಮೀಶೀಯೆನ್ಸ್ ಮಾತ್ರ ಇರತಕ್ಕಂಥದ್ದು